
ಭಾನುವಾರ, ಜೂನ್ 30, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಭಿಮಾನ
ಬ್ರಿಜ್‌ಟೌನ್‌ನಲ್ಲಿ ನಡೆದ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಟಿ20 ವಿಶ್ವಕಪ್ ಫೈನಲ್ ಪಂದ್ಯದ ವೇಳೆ ಅಭಿಮಾನಿಯೊಬ್ಬರು ಬೆಂಬಲ ವ್ಯಕ್ತಪಡಿಸಿದ್ದು ಹೀಗೆ...



ಕೈ–ಕಮಲ: ನಾಯಕತ್ವ ಬದಲಾವಣೆ ಸದ್ದು

ಕೆಪಿಸಿಸಿ ಅಧ್ಯಕ್ಷ ಗಾದಿ: ಡಿಕೆಶಿ ವಿರೋಧಿ ಬಣದ ಕಣ್ಣು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಂದ ಕೆಪಿಸಿಸಿ ಅಧ್ಯಕ್ಷ ಸ್ಥಾನ ಕಿತ್ತುಕೊಳ್ಳಬೇಕೆಂಬ ಕಾರಣಕ್ಕೆ ಸಮುದಾಯವಾರು ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಸಬೇಕೆಂಬ ಕೂಗು ಎಬ್ಬಿಸಲಾಗಿದೆ ಎಂಬ ಚರ್ಚೆ ಕಾಂಗ್ರೆಸ್‌ನಲ್ಲಿ ಬಲವಾಗುತ್ತಿದೆ.

'ಒಬ್ಬರಿಗೆ ಒಂದೇ ಹುದ್ದೆ' ಎಂಬುದು ಕಾಂಗ್ರೆಸ್ ನೀತಿ. ಆದರೆ, ರಾಜ್ಯದಲ್ಲಿ ಪಕ್ಷದ ಹೊಣೆಗಾರಿಕೆ ಹೊತ್ತಿರುವವರೇ ಈ ನೀತಿಯನ್ನು ಒಡೆದು ಆಳುತ್ತಿದ್ದಾರೆ. ಇದು ಸರಿಯಲ್ಲ. ಹೀಗಾಗಿ, ಡಿ.ಕೆ. ಶಿವಕುಮಾರ್ ಅವರು ಉಪ ಮುಖ್ಯಮಂತ್ರಿ ಹುದ್ದೆ ಇಲ್ಲವೇ ಪಕ್ಷದ ಅಧ್ಯಕ್ಷರ ಹುದ್ದೆ ಯಾವುದಾದರು ಒಂದರಲ್ಲಿ ಮಾತ್ರ ಮುಂದುವರಿಯಬೇಕು ಎನ್ನುವುದು ಸಿದ್ದರಾಮಯ್ಯ ಆಪ್ತ ಬಣದ ಸಚಿವರು, ಶಾಸಕರ ಪ್ರತಿಪಾದನೆ. ಈ ಪೈಕಿ ಕೆಲವರು, ಹೈಕಮಾಂಡ್ ನಾಯಕರ ಮೇಲೆ ಒತ್ತಡವನ್ನೂ ಹೇರುತ್ತಿದ್ದಾರೆ ಎನ್ನಲಾಗಿದೆ.

ಉಪ ಮುಖ್ಯಮಂತ್ರಿ ಹುದ್ದೆಗೆ ಬೇಡಿಕೆ ಇಡುತ್ತಿರುವ ವರ್ಗ, ಕೆಪಿಸಿಸಿ ಅಧ್ಯಕ್ಷ ಹುದ್ದೆ ಮೇಲೆ ಕಣ್ಣಿಟ್ಟಿರುವುದೇ ಕಾರಣ ಎಂಬ ಊಹಾಪೋಹಗಳೂ ಇವೆ. ಲೋಕಸಭೆ ಚುನಾವಣೆಗೆ ಮೊದಲು ಹೆಚ್ಚುವರಿ ಉಪ ಮುಖ್ಯಮಂತ್ರಿ ಬೇಕೇಬೇಕೆಂಬ ಆಗ್ರಹದ ಹಿಂದೆ ಸಮುದಾಯಗಳನ್ನು ಸೆಳೆಯುವ ಲೆಕ್ಕಾಚಾರಗಳಿದ್ದವು. ಆದರೆ, ಚುನಾವಣೆ ಮುಗಿದ ಮೇಲೂ ಹೀಗೆ ಧ್ವನಿ ಎತ್ತಿದವರ ಹಿಂದೆ ಬೇರೆಯದೇ ಲೆಕ್ಕಾಚಾರಗಳಿವೆ ಎಂದೂ ವಿಶ್ಲೇಷಿಸಲಾಗಿದೆ.

ಲೋಕಸಭೆ ಚುನಾವಣೆಗೆ ಮೊದಲೇ ಮೂರು ಉಪ ಮುಖ್ಯಮಂತ್ರಿ ಹುದ್ದೆಯನ್ನು ಸೃಷ್ಟಿಸಬೇಕೆಂದು ಪಟ್ಟು ಹಿಡಿದಿದ್ದ ಸಹಕಾರ ಸಚಿವ ಕೆ.ಎನ್. ರಾಜಣ್ಣ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮಾಡಬೇಕು ಎಂದು ಪರೋಕ್ಷವಾಗಿ ಆಗ್ರಹಿಸಿದ್ದಾರೆ. ಅಲ್ಲದೆ, 'ಕೆಪಿಸಿಸಿ ಅಧ್ಯಕ್ಷರನ್ನು ಬದಲಾವಣೆ ಮಾಡುವುದಾದರೆ ನಾನೂ ಕೂಡ ಆಕಾಂಕ್ಷಿ. ಅದಕ್ಕಾಗಿ ಸಚಿವ ಸ್ಥಾನ ಬಿಟ್ಟು ಕೆಲಸ ಮಾಡಲು ಸಿದ್ಧ' ಎಂದಿದ್ದಾರೆ. 'ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹೆಸರು ಘೋಷಿಸುವ ಸಂದರ್ಭದಲ್ಲಿಯೇ ಪಕ್ಷದ ವರಿಷ್ಠರು, ಲೋಕಸಭೆ ಚುನಾವಣೆ ಮುಗಿಯುವರೆಗೆ ಕೆಪಿಸಿಸಿ ಅಧ್ಯಕ್ಷರು ಮುಂದುವರಿಯಲಿದ್ದಾರೆ ಎಂದಿದ್ದರು' ಎಂದೂ ರಾಜಣ್ಣ ನೆನಪಿಸಿದ್ದಾರೆ.



ಡಿ.ಕೆ. ಶಿವಕುಮಾರ್


ಲೋಕಸಭೆ ಚುನಾವಣೆಯಲ್ಲಿ ಒಕ್ಕಲಿಗ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹೀನಾಯ ಸೋಲುಂಡಿದೆ. ಡಿ.ಕೆ. ಶಿವಕುಮಾರ್ ಅವರು ಒಕ್ಕಲಿಗ ನಾಯಕರೆಂದು ಬಿಂಬಿಸಿಕೊಂಡರೂ, ಆ ಸಮುದಾಯದ ಮತಗಳು ಪಕ್ಷದ ಕಡೆಗೆ ವಾಲಲಿಲ್ಲ. ತಮ್ಮನನ್ನೇ ಗೆಲ್ಲಿಸಿಕೊಳ್ಳಲು ಡಿ.ಕೆ. ಶಿವಕುಮಾರ್ ವಿಫಲರಾಗಿದ್ದಾರೆ. ಆರ್ಥಿಕ ಸವಾಲಿನ ನಡುವೆಯೂ 'ಗ್ಯಾರಂಟಿ' ಯೋಜನೆಗಳನ್ನು ಸರ್ಕಾರ ಅನುಷ್ಠಾನ ಮಾಡಿದ್ದು, ಲಕ್ಷಾಂತರ ಕುಟುಂಬಗಳಿಗೆ ತಲುಪಿದೆ. ಹಾಗಿದ್ದರೂ, ಚಾಮರಾಜನಗರ ಬಿಟ್ಟರೆ ಮೈಸೂರು ಭಾಗದಲ್ಲಿ ಪಕ್ಷಕ್ಕೆ ಗೆಲುವು ಸಿಕ್ಕಿಲ್ಲ. ಈ ಯೋಜನೆ ಫಲ ನೀಡಿರುವ ವಿಚಾರವನ್ನು ಮನೆ ಮನೆ ತಲುಪಿಸುವಲ್ಲಿ ಪಕ್ಷ ವಿಫಲವಾಗಿದೆ. ಕೆಪಿಸಿಸಿ ಅಧ್ಯಕ್ಷರೂ ಮತ್ತು ಜಿಲ್ಲಾಧ್ಯಕ್ಷರ (ಡಿಸಿಸಿ) ಮಧ್ಯೆ ಸಮನ್ವಯ ಇರದೇ, ಪಕ್ಷವನ್ನು ಸಮರ್ಥವಾಗಿ ಮುನ್ನಡೆಸದೆ ಇರುವುದೇ ಕಾರಣ. ಈ ಕಾರಣಕ್ಕೆ ಅಧ್ಯಕ್ಷರನ್ನು ಬದಲಿಸಬೇಕು ಎಂಬ ವಾದವನ್ನು ಒಂದು ಬಣ ಹೈಕಮಾಂಡ್ ಮುಂದೆ ಇಟ್ಟಿದೆ ಎಂದೂ ಪಕ್ಷದ ಮೂಲಗಳು ಹೇಳಿವೆ.

ಆದರೆ, ಕೆಪಿಸಿಸಿ ಅಧ್ಯಕ್ಷ ಸ್ಥಾನದ ಮೂಲಕ ರಾಜ್ಯ ಕಾಂಗ್ರೆಸ್‌ನ್ನು ಹಿಡಿದಲ್ಲಿಟ್ಟುಕೊಂಡಿರುವ ಡಿ.ಕೆ ಶಿವಕುಮಾರ್, ಮುಖ್ಯಮಂತ್ರಿ ಗಾದಿ ಮೇಲೆ ಕಣ್ಣಿಟ್ಟಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿದರಷ್ಟೆ 'ಅಧಿಕಾರ ಹಂಚಿಕೆ' ಸೂತ್ರದಡಿ ಆ ಗಾದಿಗೇರಲು ಸಾಧ್ಯ ಎನ್ನುವುದು ಅವರಿಗೂ ಗೊತ್ತಿದೆ. ಅದಕ್ಕೆ ಪೂರಕವಾಗಿ ಧ್ವನಿ ಎತ್ತಿರುವ ಚನ್ನಗಿರಿ ಶಾಸಕ ಬಸವರಾಜ್ ಶಿವಗಂಗಾ, 'ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಿ, ನಂತರ ಒಂದು ಡಜನ್ ಉಪ ಮುಖ್ಯಮಂತ್ರಿ ಮಾಡಲಿ. ಕೆಪಿಸಿಸಿ ಅಧ್ಯಕ್ಷರನ್ನು ಮುಖ್ಯಮಂತ್ರಿ ಮಾಡುವುದು ಪದ್ಧತಿ' ಎಂದಿದ್ದಾರೆ.

ಡಿ.ಕೆ. ಶಿವಕುಮಾರ್ ಅವರನ್ನು ಬದಲಿಸುವುದಾದರೆ, ಆ ಸ್ಥಾನವನ್ನು ತಮ್ಮ ಸಮುದಾಯಕ್ಕೆ ನೀಡಬೇಕೆಂಬ ದಾಳವನ್ನು ಲಿಂಗಾಯತ ನಾಯಕರು ಉರುಳಿಸಿದ್ದಾರೆ. ಸಚಿವರಾದ ಈಶ್ವರ ಖಂಡ್ರೆ, ಎಂ.ಬಿ. ಪಾಟೀಲ ಅವರ ಹೆಸರನ್ನೂ ಮುನ್ನಲೆಗೆ ಬಿಟ್ಟಿದ್ದಾರೆ. ಮುಂಬರುವ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ವೇಳೆಗೆ ಕಾಂಗ್ರೆಸ್ ರಾಜ್ಯ ಘಟಕದಲ್ಲಿ ಬದಲಾವಣೆಯ ತುರ್ತಿನ ಬಗ್ಗೆಯೂ ಮಾತುಗಳು ಎದ್ದಿವೆ.

ಬಿಜೆಪಿ: ನಾಯಕತ್ವ ಬದಲಾವಣೆ ಗುಸುಗುಸು

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಲಿಂಗಾಯತ ಬಾಹುಳ್ಯದ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ನಿರೀಕ್ಷಿತ ಸಂಖ್ಯೆಯಲ್ಲಿ ಗೆಲುವು ಸಾಧಿಸದಿರುವ ಕಾರಣಕ್ಕಾಗಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಹೊಣೆ ಮಾಡಿ, ನಾಯಕತ್ವ ಬದಲಾವಣೆಗೆ ಮಾಡಬಹುದು ಎಂಬ ಚರ್ಚೆ ಕಮಲ ಪಾಳಯದಲ್ಲಿ ಕಾವು ಪಡೆಯುತ್ತಿದೆ.



ವಿಜಯೇಂದ್ರ

2019ರ ಚುನಾವಣೆಯ ಫಲಿತಾಂಶದಂತೆ 25 ಸ್ಥಾನ ಗೆಲ್ಲಿಸುವ ಗುರಿಯನ್ನು ವರಿಷ್ಠರು ನೀಡಿದ್ದರಾದರೂ, 20ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲುವ ವಿಶ್ವಾಸ ಬಿಜೆಪಿಯಲ್ಲಿತ್ತು. ಆದರೆ, ಲಿಂಗಾಯತ ಮತದಾರರು ನಿರ್ಣಾಯಕವಾಗಿರುವ ಕ್ಷೇತ್ರಗಳಲ್ಲೇ ಬಿಜೆಪಿ ಸೋತಿರುವುದರಿಂದ ನಿರೀಕ್ಷಿತ ಫಲಿತಾಂಶ ಬಂದಿಲ್ಲ. ಈ ಮಧ್ಯೆಯೇ ಸಕ್ರಿಯವಾಗಿರುವ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಬಣ, ಲೋಕಸಭಾ ಚುನಾವಣೆಯಲ್ಲಿನ ಹಿನ್ನಡೆಯನ್ನು ವಿಜಯೇಂದ್ರ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ತಲೆಗೆ ಕಟ್ಟಲು ಪ್ರಯತ್ನ ನಡೆಸುತ್ತಿದೆ ಎನ್ನುತ್ತಾರೆ ಬಿಜೆಪಿಯ ಕೆಲವು ನಾಯಕರು.

'ಚುನಾವಣಾ ಫಲಿತಾಂಶದ ಕುರಿತು ಚರ್ಚಿಸಲು ವಿಜಯೇಂದ್ರ ಅವರನ್ನು ದೆಹಲಿಗೆ ಕರೆಸಿಕೊಂಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಹಿನ್ನಡೆಯ ಬಗ್ಗೆ ಪ್ರಸ್ತಾಪಿಸಿ ತೀವ್ರ ಅಸಮಾಧಾನ ಹೊರ ಹಾಕಿದ್ದಾರೆ. ಫಲಿತಾಂಶವನ್ನು ಸಮರ್ಥಿಸಿಕೊಳ್ಳಲು ವಿಜಯೇಂದ್ರ ಪ್ರಯತ್ನಿಸಿದ್ದಾರೆ. ಆದರೆ, ಅದನ್ನು ಒಪ್ಪದ ಅಮಿತ್ ಶಾ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ' ಎಂಬ ಮಾತು ಬಿಜೆಪಿಯಲ್ಲಿ ಕೇಳಿಬರುತ್ತಿದೆ.

ದಾವಣಗೆರೆ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಸೋಲಿನ ಕುರಿತು ಅಮಿತ್ ಶಾ ಪ್ರಸ್ತಾಪಿಸಿದ್ದಾರೆ. ಬಿ.ಎಸ್. ಯಡಿಯೂರಪ್ಪ ಅವರ ಬೆಂಬಲಿಗರೇ ಬಂಡಾಯ ಎದ್ದು, ಪಕ್ಷದ ಅಭ್ಯರ್ಥಿಯನ್ನು ಸೋಲಿಸಿದ್ದಾರೆ ಎಂಬ ವರದಿಗಳು ತಮಗೆ ತಲುಪಿವೆ ಎಂಬ ಮಾಹಿತಿಯನ್ನು ವಿಜಯೇಂದ್ರ ಜತೆ ಹಂಚಿಕೊಂಡಿದ್ದಾರೆ. ಕಲ್ಯಾಣ ಕರ್ನಾಟಕದ ಐದು ಕ್ಷೇತ್ರಗಳಲ್ಲಿ ಲಿಂಗಾಯತರ ಪ್ರಾಬಲ್ಯವಿದ್ದು, ಬಿಜೆಪಿ ಸರ್ಕಾರ ಇದ್ದಾಗ ಈ ಭಾಗಕ್ಕೆ ಆದ್ಯತೆಯನ್ನೂ ನೀಡಿತ್ತು. ಈ ಎಲ್ಲ ಕ್ಷೇತ್ರಗಳನ್ನೂ ಕಾಂಗ್ರೆಸ್ ಕಿತ್ತುಕೊಂಡಿದ್ದು, ಪಕ್ಷಕ್ಕೆ ಹಿನ್ನಡೆಯಾಗಿದೆ. ಇವೆಲ್ಲವನ್ನೂ ಗಮನಿಸಿದರೆ, ಲಿಂಗಾಯತ ಮತದಾರರ ಮೇಲೆ ಬಿಜೆಪಿ ಹಿಡಿತ ಕಳೆದುಕೊಂಡಿರುವುದು ಕಾಣಿಸುತ್ತಿದೆ ಎಂಬರ್ಥದಲ್ಲೂ ಮಾತನಾಡಿದ್ದಾರೆ ಎಂಬ ಚರ್ಚೆಯೂ ಜೋರಾಗಿದೆ.

ತುಮಕೂರಿನಲ್ಲಿ ಕೂಡ ಯಡಿಯೂರಪ್ಪ ಬೆಂಬಲಿಗರೆಂದು ಗುರುತಿಸಿಕೊಂಡವರು ವಿ.ಸೋಮಣ್ಣ ಪರ ಕೆಲಸ ಮಾಡಲಿಲ್ಲ. ಸಂಘಪರಿವಾರದವರ ಬೆಂಬಲ ಮತ್ತು ಜೆಡಿಎಸ್‌ನ ಮತಗಳು ಪರಿವರ್ತನೆಯಿಂದ ಪಕ್ಷ ಗೆದ್ದಿರುವ ಮಾಹಿತಿಯನ್ನು ಅಮಿತ್ ಶಾ ಪ್ರಸ್ತಾಪಿಸಿದರು ಎಂದೂ ಪಕ್ಷದ ಮೂಲಗಳು ಹೇಳಿವೆ.

ಒಕ್ಕಲಿಗ ಮತದಾರರ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಬಿಜೆಪಿ ಹೆಚ್ಚು ಸ್ಥಾನ ಗೆದ್ದಿದ್ದರೂ, ಅದಕ್ಕೆ ಆರ್. ಅಶೋಕ ಕೊಡುಗೆ ಇಲ್ಲ ಎಂಬ ವಿಶ್ಲೇಷಣೆ ಬಿಜೆಪಿಯೊಳಗೆ ನಡೆದಿದೆ. ಜೆಡಿಎಸ್ ಜತೆ ಮೈತ್ರಿ ಮಾಡಿಕೊಂಡ ಕಾರಣದಿಂದ ಎಚ್.ಡಿ. ಕುಮಾರಸ್ವಾಮಿ ಅವರ ಪ್ರಭಾವದಿಂದ ಒಕ್ಕಲಿಗರ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದೆ ಎಂಬ ವಾದವನ್ನು ಪಕ್ಷದ ಹಲವರು ಮುಂದಿಡುತ್ತಿದ್ದಾರೆ.

ಸುದ್ದಿ 2 ನಿಮಿಷ

ಪ್ರಣವ್ ಮೊಹಾಂತಿಗೆ ಡಿಜಿಪಿ ದರ್ಜೆಗೆ ಬಡ್ತಿ

ಬೆಂಗಳೂರು: ಪೊಲೀಸ್ ಕಂಪ್ಯೂಟರ್ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಾಗಿದ್ದ 1994ರ ವೃಂದದ ಐಪಿಎಸ್ ಅಧಿಕಾರಿ ಪ್ರಣವ್ ಮೊಹಾಂತಿ ಅವರಿಗೆ ಪೊಲೀಸ್ ಮಹಾನಿರ್ದೇಶಕರಾಗಿ (ಡಿಜಿಪಿ) ಶನಿವಾರ ಬಡ್ತಿ ನೀಡಲಾಗಿದೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕರು (ಡಿಜಿ ಆ್ಯಂಡ್ ಐಜಿಪಿ) ಸೇರಿದಂತೆ ರಾಜ್ಯದಲ್ಲಿ ಆರು ಡಿಜಿಪಿ ಹುದ್ದೆಗಳಿವೆ. ಈ ಪೈಕಿ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ವಿಭಾಗದ ಡಿಜಿಪಿ ಹುದ್ದೆಯಲ್ಲಿದ್ದ ಕಮಲ್ ಪಂತ್ ಶನಿವಾರ ಸೇವೆಯಿಂದ ನಿವೃತ್ತರಾದರು. ಇದರಿಂದ ತೆರವಾದ ಡಿಜಿಪಿ ಹುದ್ದೆಗೆ ಮೊಹಾಂತಿ ಅವರಿಗೆ ಬಡ್ತಿ ನೀಡಲಾಗಿದೆ.

ಡಿಜಿ ಆ್ಯಂಡ್ ಐಜಿಪಿ ಅಲೋಕ್ ಮೋಹನ್, ಲೋಕಾಯುಕ್ತದ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್, ಬಂದಿಖಾನೆ ಮತ್ತು ಸುಧಾರಣಾ ಸೇವೆಗಳ ವಿಭಾಗದ ಡಿಜಿಪಿ ಮಾಲಿನಿ ಕೃಷ್ಣಮೂರ್ತಿ, ಸಿಐಡಿ ಡಿಜಿಪಿ ಎಂ.ಎ. ಸಲೀಂ, ರಾಜ್ಯ ಪೊಲೀಸ್ ವಸತಿ ನಿಗಮದ ಅಧ್ಯಕ್ಷರಾಗಿರುವ ಕೆ. ರಾಮಚಂದ್ರ ರಾವ್ ಅವರು ಡಿಜಿಪಿ ದರ್ಜೆಯಲ್ಲಿದ್ದಾರೆ.



ಹೆಚ್ಚುವರಿ ಪ್ರಭಾರ: ಮೊಹಾಂತಿ ಅವರಿಗೆ ಪೊಲೀಸ್ ಕಂಪ್ಯೂಟರ್ ವಿಭಾಗದ ಜತೆಗೆ ಸಿಐಡಿಯ ಸೈಬರ್ ಅಪರಾಧ ಮತ್ತು ಮಾದಕವಸ್ತು ನಿಯಂತ್ರಣ ವಿಭಾಗದ ಡಿಜಿಪಿ ಹುದ್ದೆಯ ಹೆಚ್ಚುವರಿ ಪ್ರಭಾರವನ್ನೂ ವಹಿಸಿ ಶನಿವಾರ ಆದೇಶ ಹೊರಡಿಸಲಾಗಿದೆ.

ಮಾಲಿನಿ ಕೃಷ್ಣಮೂರ್ತಿ ಅವರಿಗೆ ಬಂದಿಖಾನೆ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಜತೆಗೆ ಅಗ್ನಿಶಾಮಕ, ತುರ್ತು ಸೇವೆಗಳು ಮತ್ತು ಗೃಹರಕ್ಷಕ ದಳದ ಡಿಜಿಪಿ ಹುದ್ದೆಯ ಹೆಚ್ಚುವರಿ ಪ್ರಭಾರವನ್ನೂ ವಹಿಸಲಾಗಿದೆ.

ಡಿಸಿಇಟಿ: 16,478 ವಿದ್ಯಾರ್ಥಿಗಳಿಗೆ ರ‍್ಯಾಂಕ್ ನಿಗದಿ

ಬೆಂಗಳೂರು: ಎರಡನೇ ವರ್ಷದ ಎಂಜಿನಿಯರಿಂಗ್‌ಗೆ ಪ್ರವೇಶ ನೀಡಲು ನಡೆಸುವ (ಲ್ಯಾಟರಲ್ ಎಂಟ್ರಿ) ಡಿಪ್ಲೊಮಾ ಸಿಇಟಿ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶನಿವಾರ ಪ್ರಕಟಿಸಿದೆ.

17,440 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ 16,478 ವಿದ್ಯಾರ್ಥಿಗಳಿಗೆ ರ‍್ಯಾಂಕ್ ನಿಗದಿ ಮಾಡಲಾಗಿದೆ. ರಾಜ್ಯದ ವಿವಿಧ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಈ ವಿದ್ಯಾರ್ಥಿಗಳಿಗೆ 10,835 ಸೀಟುಗಳು ಲಭ್ಯವಿವೆ.

ಈ ವಿದ್ಯಾರ್ಥಿಗಳ ದಾಖಲೆ ಪರಿಶೀಲನೆ ಕಾರ್ಯ ಜುಲೈ 2ರಿಂದ 4ರವರೆಗೆ ನಡೆಯಲಿದೆ. ರ‍್ಯಾಂಕ್ ದೊರೆಯದೇ ಇರುವ ವಿದ್ಯಾರ್ಥಿಗಳು ತಮ್ಮ ಡಿಪ್ಲೊಮಾ ಅಂಕಗಳ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ keaugcet24@gmail.com ಗೆ ಪಿಡಿಎಫ್ ಸ್ವರೂಪದಲ್ಲಿ ಅಪ್‌ಲೋಡ್ ಮಾಡಬಹುದು. ಅಂತಹ ಅಭ್ಯರ್ಥಿಗಳ ಅರ್ಹತೆಯನ್ನು ಪರಿಶೀಲಿಸಿ, ರ‍್ಯಾಂಕ್ ನೀಡಲಾಗುವುದು ಎಂದು ಕೆಇಎ ಹೇಳಿದೆ.



ನವದೆಹಲಿಯಲ್ಲಿ ಶನಿವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಜಿ ಪರಮೇಶ್ವರ, ಎಚ್‌.ಸಿ. ಮಹದೇವಪ್ಪ ಅವರನ್ನು ಒಳಗೊಂಡ ಕರ್ನಾಟಕ ಸರ್ಕಾರದ ನಿಯೋಗವು ಭೇಟಿ ಮಾಡಿ ರಾಜ್ಯದಲ್ಲಿ ಆಗಬೇಕಾದ ಅಭಿವೃದ್ಧಿ ಕೆಲಸಗಳ ಬಗ್ಗೆ ಮನವಿ ಸಲ್ಲಿಸಿದರು

ಕಲ್ಯಾಣ, ಸುರಂಗಕ್ಕೆ ಅನುದಾನ: ಪ್ರಧಾನಿಗೆ ಮುಖ್ಯಮಂತ್ರಿ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಶನಿವಾರ ಭೇಟಿಯಾಗಿ ಕರ್ನಾಟಕದ ಪ್ರಮುಖ ಯೋಜನೆಗಳ ಅನುಮೋದನೆ ಕುರಿತು ಮನವಿ ಮಾಡಿದರು.

ಬೆಂಗಳೂರು ನಗರಕ್ಕೆ ಕುಡಿಯುವ ನೀರು ಒದಗಿಸುವ ಹಾಗೂ 400 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುವ ಮೇಕೆದಾಟು ಅಣೆಕಟ್ಟು ಯೋಜನೆಯ ₹9000 ಕೋಟಿ ಮೊತ್ತದ ವಿಸ್ತೃತ ಯೋಜನಾ ವರದಿಗೆ ಕೇಂದ್ರ ಜಲ ಆಯೋಗದಿಂದ ಅನುಮೋದನೆ ಬಾಕಿ ಇದೆ. ಮೇಕೆದಾಟು ಯೋಜನೆಗೆ ಪ್ರಧಾನಿಯವರು ಖುದ್ದಾಗಿ ಆಸಕ್ತಿ ವಹಿಸುವಂತೆಯೂ ಮುಖ್ಯಮಂತ್ರಿಗಳು ಮನವಿ ಮಾಡಿದ್ದಾರೆ.

ಬೆಂಗಳೂರು ನಗರದ ಸಂಚಾರ ದಟ್ಟಣೆ ನಿವಾರಣೆಗೆ 60 ಕಿ.ಮೀ ಸುರಂಗ ಮಾರ್ಗಕ್ಕೆ ₹3000 ಕೋಟಿ ವೆಚ್ಚವಾಗಲಿದ್ದು, ಯೋಜನೆಯಿಂದ ಹಲವಾರು ಲಾಭಗಳಿವೆ. ಈ ಸುರಂಗ ಮಾರ್ಗ ರಾಷ್ಟ್ರೀಯ ಹೆದ್ದಾರಿ 7 ಅನ್ನು ರಾಷ್ಟ್ರೀಯ ಹೆದ್ದಾರಿ 4 ಕ್ಕೆ ಸಂಪರ್ಕಿಸುವುದರಿಂದ ಕರ್ನಾಟಕ ಸರ್ಕಾರವು ಕೇಂದ್ರ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಹಯೋಗದೊಂದಿಗೆ ಕೈಗೊಳ್ಳಬಹುದು. ಕೇಂದ್ರ ಬಜೆಟ್ ಮೂಲಕ ರಾಜ್ಯ ಸರ್ಕಾರ ಹಾಗೂ ಹೆದ್ದಾರಿ ಪ್ರಾಧಿಕಾರ ಅನುದಾನ ನೀಡುವಂತೆ ಮನವಿ ಮಾಡಿದರು. ಮೆಟ್ರೊ ಮೂರನೇ ಹಂತದ ಯೋಜನೆಗೆ ಅನುಮೋದನೆ ನೀಡುವಂತೆ ಕೋರಿದರು.

ಬಿಬಿಎಂಪಿ ವತಿಯಿಂದ ಘನ ತ್ಯಾಜ್ಯ ನಿರ್ವಹಣೆಗಾಗಿ ₹3,200 ಕೋಟಿ ಅಂದಾಜು ಮೊತ್ತದ ಯೋಜನೆ ಕೈಗೊಳ್ಳುತ್ತಿದ್ದು, ಯೋಜನೆಯ ಶೇ 30ರಷ್ಟು ಅಂದರೆ 960 ಕೋಟಿಗಳನ್ನು ಸ್ವಚ್ಛ ಭಾರತ ಅಭಿಯಾನ 2.0ದಡಿ ಕಾರ್ಯಸಾಧ್ಯತಾ ಅಂತರ ನಿಧಿ ಒದಗಿಸಲು ವಿನಂತಿಸಿದರು.

ಕಲ್ಯಾಣ ಕರ್ನಾಟಕದ ಭಾಗದ ಏಳು ಜಿಲ್ಲೆಗಳ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ₹3000 ಕೋಟಿ ಅನುದಾನವನ್ನು ಬಜೆಟ್‌ನಲ್ಲಿ ಮೀಸಲಿರಿಸಿದ್ದು ಕೇಂದ್ರ ಸರ್ಕಾರವು ತನ್ನ 2024-25 ರ ಬಜೆಟ್‌ನಲ್ಲಿ ಅನುದಾನ ಒದಗಿಸಬೇಕು. ಕೇಂದ್ರ ಸರ್ಕಾರದ ಅಭಿವೃದ್ಧಿ ಆಕಾಂಕ್ಷಿ ಜಿಲ್ಲಾ ಕಾರ್ಯಕ್ರಮದಡಿ ಒದಗಿಸುವ ಅನುದಾನ ಹೆಚ್ಚಿಸಲು ಮತ್ತು ಹೊಸ ಕಾರ್ಯಕ್ರಮಗಳನ್ನು ಯೋಜನೆಯಲ್ಲಿ ಸೇರ್ಪಡೆಗೊಳಿಸಲು ಅನುಕೂಲವಾಗುವಂತೆ ಧನಸಹಾಯ ನೀಡಬೇಕು ಎಂದು ಅವರು ಮನವಿ ಮಾಡಿದರು.

ಸಂಪುಟ ಪುನರ್‌ರಚನೆ ಇಲ್ಲ: ಸಿ.ಎಂ

ನವದೆಹಲಿ: ಕರ್ನಾಟಕದಲ್ಲಿ ಸಚಿವ ಸಂಪುಟ ಪುನರ್‌ರಚನೆ ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಸ್ಪಷ್ಟಪಡಿಸಿದರು.

'ನಾಗೇಂದ್ರ ಅವರ ರಾಜೀನಾಮೆಯಿಂದ ಸಚಿವ ಸಂಪುಟದಲ್ಲಿ ಒಂದು ಸ್ಥಾನ ಖಾಲಿಯಿದ್ದರೂ ಅದನ್ನು ತುಂಬುವ ಯೋಜನೆ ಇಲ್ಲ. ನಾಗೇಂದ್ರ ಅವರ ಬಳಿ ಇದ್ದ ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ ಖಾತೆ ನನ್ನ ಬಳಿ ಇದೆ' ಎಂದು ಅವರು ಹೇಳಿದರು.

'ಸಚಿವರ ಕಾರ್ಯವೈಖರಿಯನ್ನು ಪರಾಮರ್ಶೆ ಮಾಡುವ ಯಾವುದೇ ಪ್ರಸ್ತಾಪವೂ ಇಲ್ಲ. ಎಲ್ಲರೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ಅವರು ಹೇಳಿದರು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಇಲ್ಲಿ ಭೇಟಿ ಮಾಡಿದ ಸಿದ್ದರಾಮಯ್ಯ, 'ರಾಷ್ಟ್ರೀಯ ನಾಯಕರೊಂದಿಗೆ ರಾಜ್ಯ ರಾಜಕಾರಣದ ಬಗ್ಗೆ ಚರ್ಚಿಸಿಲ್ಲ' ಎಂದು ಹೇಳಿದರು.

ಸುಖಾಸುಮ್ಮನೆ ಮಾತನಾಡಬೇಡಿ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಕ್ಷವನ್ನು ಅಧಿಕಾರಕ್ಕೆ ತರಲು ಎಷ್ಟು ಕಷ್ಟ ಪಟ್ಟಿದ್ದೇವೆ ಎನ್ನುವುದು ನಮಗೆ ಗೊತ್ತಿದೆ. ಇವರುಗಳು (ಸಚಿವರು, ಶಾಸಕರು) ಸುಖಾಸುಮ್ಮನೆ ಮಾತನಾಡುವ ಅಗತ್ಯವಿಲ್ಲ' ಎಂದು ಉಪ ಮುಖ್ಯಮಂತ್ರಿ ಹುದ್ದೆಗಾಗಿ ಬೇಡಿಕೆ ಇಟ್ಟಿರುವ ಸಚಿವರನ್ನು ಉದ್ದೇಶಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಮತ್ತು ನಾನು ಚರ್ಚಿಸಿ, ಪಕ್ಷದ ಹಿತದೃಷ್ಟಿಯಿಂದ ಹೇಗೆ ಕೆಲಸ ಮಾಡಬೇಕು ಎನ್ನುವ ಬಗ್ಗೆ ತೀರ್ಮಾನಕ್ಕೆ ಬಂದಿದ್ದೇವೆ. ಈ ವಿಚಾರವಾಗಿ ಯಾವುದೇ ಸಚಿವರು, ಶಾಸಕರು, ಸ್ವಾಮೀಜಿಗಳು ಮಾತನಾಡುವ ಅವಶ್ಯವಿಲ್ಲ' ಎಂದೂ ಹೇಳಿದರು.

'ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ನನ್ನ ಬಗ್ಗೆ ಅಭಿಮಾನಪೂರ್ವಕವಾಗಿ ಮಾತನಾಡಿದ್ದಾರೆ. ಅವರು ಒಳಗಿನಿಂದಲೇ ಹರಸಿದರೆ ಸಾಕು. ನಾನು ಮುಖ್ಯಮಂತ್ರಿ ಆಗಲು ಯಾರೂ ಶಿಫಾರಸು ಮಾಡುವುದು ಬೇಡ. ನಾನು ಮಾಡಿರುವ ಕೆಲಸವನ್ನು ನೋಡಿ ನಮ್ಮ ಪಕ್ಷದ ಹೈಕಮಾಂಡ್ ಸೂಕ್ತ ತೀರ್ಮಾನ ಮಾಡುತ್ತದೆ. ನಮ್ಮ ರಾಜಕಾರಣದ ಸುದ್ದಿಗೆ ಬರಬೇಡಿ ಎಂದು ಎಲ್ಲ ಸ್ವಾಮೀಜಿಗಳಿಗೂ ಕೈ ಮುಗಿದು ಮನವಿ ಮಾಡುತ್ತೇನೆ' ಎಂದೂ ಹೇಳಿದರು.

ಸ್ವಾಮೀಜಿಗಳ ಮಾತು ಕೇಳುವುದಕ್ಕೆ ಆಗುತ್ತದೆಯೇ?: 'ಶಾಮನೂರು ಶಿವಶಂಕರಪ್ಪ ಅವರನ್ನು ಉಪ ಮುಖ್ಯಮಂತ್ರಿ ಮಾಡಿ ಎಂದು ಅವರ ಸ್ವಾಮೀಜಿ ಹೇಳುತ್ತಿದ್ದಾರೆ. ಸತೀಶ ಜಾರಕಿಹೊಳಿ ಅವರನ್ನು ಮಾಡಿ ಎಂದು ಅವರ ಸ್ವಾಮೀಜಿ ಹೇಳುತ್ತಾರೆ. ಸ್ವಾಮೀಜಿಗಳು ಹೇಳುವುದನ್ನು ಕೇಳುವುದಕ್ಕೆ ಆಗುತ್ತದೆಯೇ? ಸ್ವಾಮೀಜಿ ಹೇಳಿರುವುದು ಪ್ರಜಾಪ್ರಭುತ್ವಕ್ಕೆ ಅವಮಾನ' ಎಂದು ಸಚಿವ ಕೆ.ಎನ್. ರಾಜಣ್ಣ ಹೇಳಿದರು.

'ನಾನು ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಎಂದಲ್ಲ, ನಾನು ಪ್ರಜಾಪ್ರಭುತ್ವ ಪರ. ಬಡವರ ಪರ ಸಿದ್ದರಾಮಯ್ಯ ಕೆಲಸ ಮಾಡುತ್ತಾರೆ. ಅದಕ್ಕೆ ಅವರ ಜೊತೆ ಇದ್ದೇನೆ' ಎಂದರು.

'ಸಂಸದರಾಗಿ ಡಿ.ಕೆ. ಸುರೇಶ್ ಪರಿಣಾಮಕಾರಿಯಾಗಿ ಕೆಲಸ ಮಾಡಿರುವವರಲ್ಲಿ ಮೊದಲಿಗರು. ಸ್ವಾಮೀಜಿಗಳು ಒಂದಾಗಿ ಅವರನ್ನು ಸೋಲಿಸಿದವರು. ದೇವೇಗೌಡರು ಹುಟ್ಟು ಹಾಕಿದ ಸ್ವಾಮೀಜಿ ಇವರು' ಎಂದು ಕೆಣಕಿದರು.

'ವೀರಶೈವ ಲಿಂಗಾಯತರಿಗೆ ಸಿಎಂ ಹುದ್ದೆ ನೀಡಿ'

ಕಲಬುರಗಿ: 'ಮುಖ್ಯಮಂತ್ರಿ ಬದಲಾವಣೆ ಮಾಡಲೇಬೇಕಾದ ಪ್ರಸಂಗ ಬಂದರೆ ಆ ಸ್ಥಾನಕ್ಕೆ ವೀರಶೈವ ಲಿಂಗಾಯತ ಸಮುದಾಯದ ನಾಯಕರನ್ನು ಪರಿಗಣಿಸಬೇಕು' ಎಂದು ಬಾಳೆಹೊನ್ನೂರಿನ ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯರು ಅಭಿಪ್ರಾಯಪಟ್ಟರು.

ಇಲ್ಲಿ ಶನಿವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಗಟ್ಟಿಯಾಗಿ ನಿಂತು ಒಳ್ಳೆಯ ಆಡಳಿತ ಕೊಡಬೇಕಾದರೆ ಹೈಕಮಾಂಡ್, ರಾಜ್ಯ ಮುಖಂಡರ ವಿಮರ್ಶೆ ಮಾಡಬೇಕು. ಸಿಎಂ ಹುದ್ದೆಗೆ ಅವರೇ (ಸಿದ್ದರಾಮಯ್ಯ) ಯೋಗ್ಯರಿದ್ದರೆ ಮುಂದುವರಿಸಲಿ. ಇಲ್ಲದಿದ್ದರೆ ಬೇರೆಯವರನ್ನು ಆಯ್ಕೆ ಮಾಡಲಿ' ಎಂದು ಸಲಹೆ ನೀಡಿದರು.

'ಸಿಎಂ ಮತ್ತು ಡಿಸಿಎಂ ವಿವಾದದ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಗಟ್ಟಿಯಾದ ನಿರ್ಧಾರ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅವರಲ್ಲಿ ಕಚ್ಚಾಟ ಶುರುವಾಗಿ, ರಾಜ್ಯದ ಅಭಿವೃದ್ಧಿ ಕುಂಠಿತ ಆಗುತ್ತದೆ' ಎಂದು ಎಚ್ಚರಿಸಿದರು.

'ಮುಖ್ಯಮಂತ್ರಿ ಹುದ್ದೆ ಎರಡೂವರೆ ವರ್ಷದ ಅವಧಿಗೆ ಒಪ್ಪಂದ ಆಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಹೆಚ್ಚು ಉಪಮುಖ್ಯಮಂತ್ರಿ ಹುದ್ದೆಗಳ ಸೃಷ್ಟಿಗಾಗಿ ಸಚಿವರು, ಶಾಸಕರು ಅಭಿಪ್ರಾಯ ಮಂಡಿಸಿದ್ದಾರೆ.

ಸಂತೋಷ ಲಾಡ್, ಸಚಿವ

ಮುಖ್ಯಮಂತ್ರಿ ಹುದ್ದೆ ವಿಚಾರವಾಗಿ ಚರ್ಚೆಗಳೇ ಅಪ್ರಸ್ತುತ. ಅದನ್ನು ಪಕ್ಷದ ವರಿಷ್ಠರು ತೀರ್ಮಾನಿಸುತ್ತಾರೆ. ನಾನಂತೂ ಯಾವುದಕ್ಕೂ ಲಾಬಿ ನಡೆಸುತ್ತಿಲ್ಲ

ಈಶ್ವರ ಖಂಡ್ರೆ, ಅರಣ್ಯ ಸಚಿವ

'ಮುಖ್ಯಮಂತ್ರಿ ಕುರ್ಚಿಗೆ ಕಚ್ಚಾಟ ಆರಂಭವಾಗಿದೆ. ಸಿದ್ದರಾಮಯ್ಯ ಗುಂಪು, ವೀರಶೈವ ಲಿಂಗಾಯತರ ಗುಂಪು, ದಲಿತರ ಗುಂಪುಗಳು ನಿರ್ಮಾಣವಾಗಿವೆ. ಆಡಳಿತ ಯಂತ್ರ ಕುಸಿದು ಬಿದ್ದಿದೆ

ಗೋವಿಂದ ಕಾರಜೋಳ, ಸಂಸದ

'ಮುಖ್ಯಮಂತ್ರಿ ಹುದ್ದೆ ವಿಚಾರವಾಗಿ ಸ್ವಾಮೀಜಿಗಳು ಮಾತನಾಡುವುದು ಸೂಕ್ತವಲ್ಲ. ಇದೆಲ್ಲ ಅನವಶ್ಯಕ ಚರ್ಚೆ. ಈಗ ಅಂತಹ ಪರಿಸ್ಥಿತಿ ಉದ್ಭವಿಸಿಲ್ಲ

ಎನ್. ಚಲುವರಾಯಸ್ವಾಮಿ, ಕೃಷಿ ಸಚಿವ

'ಆಸೆ ಇದ್ದವರು ಸರ್ಕಾರ ವಿಸರ್ಜಿಸಲಿ'

'ಉಪ ಮುಖ್ಯಮಂತ್ರಿ ಹುದ್ದೆ ಮೇಲೆ ಅಷ್ಟೊಂದು ಅಧಿಕಾರದ ಆಸೆ ಇದ್ದರೆ, ಸರ್ಕಾರ ವಿಸರ್ಜಿಸಿ, ನಾಯಕತ್ವ ವಹಿಸಿ ಚುನಾವಣೆ ಎದುರಿಸಿ, ಪಕ್ಷವನ್ನು ಅಧಿಕಾರಕ್ಕೆ ತನ್ನಿ' ಎಂದು ಹೆಚ್ಚುವರಿ ಉಪ ಮುಖ್ಯಮಂತ್ರಿ ಹುದ್ದೆಗೆ ಆಗ್ರಹಿಸುತ್ತಿರುವ ಸಚಿವರಿಗೆ ಮಾಜಿ ಸಂಸದ ಡಿ.ಕೆ. ಸುರೇಶ್ ಸವಾಲು ಹಾಕಿದರು.

'ಸಾರ್ವಜನಿಕ ಚರ್ಚೆ ಬೇಡ'

ಬೆಂಗಳೂರು: 'ಇಬ್ಬರು ಬಲಾಢ್ಯರು ನಾಯಕತ್ವ ವಹಿಸಿದ್ದರೂ ಲೋಕಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ನಿರೀಕ್ಷಿತ ಸ್ಥಾನ ಬರಲಿಲ್ಲ. ಸಚಿವರ ಕ್ಷೇತ್ರಗಳಲ್ಲೇ ಮುನ್ನಡೆ ಕಡಿಮೆಯಾಗಿದೆ. ನಾಯಕತ್ವ ಬದಲಾವಣೆ ಬಗ್ಗೆ ಪಕ್ಷದ ಹೈಕಮಾಂಡ್ ತೀರ್ಮಾನ ಮಾಡಲಿದ್ದು, ಸಾರ್ವಜನಿಕವಾಗಿ ಚರ್ಚೆ ಅವಶ್ಯವಿಲ್ಲ' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

'ವಾರ್ನಿಂಗ್ ನಾನ್ ಕೇಳ್ತೀನೇನ್ರೀ, ರಾಜಣ್ಣ ರಾಜಣ್ಣಾನೇ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ವಿಚಾರದಲ್ಲಿ ಮಾತನಾಡುವವರು ಬಾಯಿಗೆ ಬೀಗ ಹಾಕಿಕೊಳ್ಳಬೇಕು. ಇಲ್ಲದೇ ಇದ್ದರೆ ನೋಟಿಸ್ ಕೊಟ್ಟು, ಶಿಸ್ತು ಕ್ರಮ ಕೈಗೊಳ್ಳಬೇಕಾಗುತ್ತದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಎಚ್ಚರಿಕೆಗೆ ತಿರುಗಿ ಬಿದ್ದಿರುವ ಸಹಕಾರ ಸಚಿವ ಕೆ.ಎನ್. ರಾಜಣ್ಣ, 'ಹೆಚ್ಚುವರಿ ಉಪ ಮುಖ್ಯಮಂತ್ರಿ ಕೇಳಿದರೆ ತಪ್ಪಾಗುತ್ತದೆಯೇ? ವಾರ್ನಿಂಗ್ ನಾನ್ ಕೇಳ್ತೀನೇನ್ರೀ. ರಾಜಣ್ಣ ರಾಜಣ್ಣಾನೇ' ಎಂದಿದ್ದಾರೆ.

ಸುದ್ದಿಗಾರರ ಜೊತೆ ಶನಿವಾರ ಬೆಳಿಗ್ಗೆ ಮಾತನಾಡಿದ ಡಿ.ಕೆ. ಶಿವಕುಮಾರ್, 'ಮುಖ್ಯಮಂತ್ರಿ, ಹೆಚ್ಚುವರಿ ಉಪ ಮುಖ್ಯಮಂತ್ರಿ ವಿಚಾರದಲ್ಲಿ ಬಹಿರಂಗ ಹೇಳಿಕೆ ನೀಡುವವರು ಎಐಸಿಸಿ ಮತ್ತು ರಾಜ್ಯ ಘಟಕದಿಂದ ಶಿಸ್ತು ಕ್ರಮ ಎದುರಿಸಬೇಕಾಗುತ್ತದೆ' ಎಂದಿದ್ದರು. ಅದಕ್ಕೆ ಪ್ರತಿಕ್ರಿಯಿಸಿದ ರಾಜಣ್ಣ, 'ಎಲ್ಲರೂ ಬಾಯಿಗೆ ಬೀಗ ಹಾಕಿಕೊಳ್ಳಬೇಕು. ಎಲ್ಲರೂ ಸುಮ್ಮನೆ ಇದ್ದರೆ ನಾನೂ ಸುಮ್ಮನೆ ಇರುತ್ತೇನೆ. ನೋಟಿಸ್ ಕೊಡುತ್ತಾರಾ ಕೊಡಲಿ. ಕೊಟ್ಟ ನಂತರ ನಾನು ಮಾತನಾಡುತ್ತೇನೆ' ಎಂದರು.

ಮುಖ್ಯಮಂತ್ರಿ ಬದಲಾವಣೆ ಮತ್ತು ಡಿಸಿಎಂಗಳ ಸಂಖ್ಯೆ ಹೆಚ್ಚಳ ವಿಚಾರ ಮುಗಿದ ಅಧ್ಯಾಯ. 2028ರಲ್ಲಿ ಅವಕಾಶವಿದ್ದರೆ, ನಾನು ಕೂಡ ಮುಖ್ಯಮಂತ್ರಿಯಾಗಲು ಬಯಸುವೆ

ಸತೀಶ ಜಾರಕಿಹೊಳಿ, ಸಚಿವ

'ಸ್ಥಾನ ಬಿಟ್ಟುಕೊಡುವಂತೆ ಪ್ರಧಾನಿಯನ್ನೇಕೆ ಕೇಳುವುದಿಲ್ಲ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವತ್ರಿಕ ಚುನಾವಣೆಯಲ್ಲಿ ಬಹುಮತ ಪಡೆದು ಆಯ್ಕೆಯಾದ ಮುಖ್ಯಮಂತ್ರಿಯ ಬದಲಾವಣೆ ಬಗ್ಗೆ ಪ್ರಶ್ನಿಸುವ ಚಂದ್ರಶೇಖರನಾಥ ಸ್ವಾಮೀಜಿ, ಪ್ರಧಾನಿ ಸ್ಥಾನವನ್ನು ಶೋಭಾ ಕರಂದ್ಲಾಜೆಗೆ ಅಥವಾ ಡಾ.ಸಿ.ಎನ್. ಮಂಜುನಾಥ ಅವರಿಗೆ ಬಿಟ್ಟು ಕೊಡಿ ಎಂದು ಏಕೆ ಕೇಳುವುದಿಲ್ಲ' ಎಂದು ರಾಮಮನೋಹರ ಲೋಹಿಯಾ ವಿಚಾರ ವೇದಿಕೆಯ ಅಧ್ಯಕ್ಷ ಬಿ.ಎಸ್. ಶಿವಣ್ಣ ಪ್ರಶ್ನಿಸಿದ್ದಾರೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ವಿನೂತನ ಯೋಜನೆಗಳ ಮೂಲಕ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಆಧಾರವಾಗಿ ನಿಂತಿದ್ದಾರೆ. ಅಂತಹ ಸಂದರ್ಭದಲ್ಲಿ ರಾಜಕಾರಣಕ್ಕೆ ಸಂಬಂಧವೇ ಇಲ್ಲದ ಸ್ವಾಮೀಜಿ, ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡುವಂತೆ ಮಾತನಾಡುತ್ತಿರುವುದು ಎಷ್ಟು ಸರಿ? ಧಾರ್ಮಿಕ ಮುಖಂಡರಾದ ಶ್ರೀಗಳಿಗೆ ಮುಖ್ಯಮಂತ್ರಿ ಸ್ಥಾನದ ಬಗ್ಗೆ ಮಾತನಾಡುವ ನೈತಿಕತೆ ಏನಿದೆ? 10 ವರ್ಷಗಳಿಂದ ಪ್ರಧಾನಿಯಾಗಿರುವ ನರೇಂದ್ರ ಮೋದಿ ಅವರಿಗೂ ಇದೇ ಪ್ರಶ್ನೆ ಕೇಳುವ ಧೈರ್ಯ ಸ್ವಾಮೀಜಿಗೆ ಇದೆಯೇ' ಎಂದೂ ಕೇಳಿದ್ದಾರೆ.

'ತಮ್ಮ ಸಮುದಾಯದ ಮೇಲೆ ಅಷ್ಟೊಂದು ಪ್ರೇಮ ವಿದ್ದರೆ, ಪ್ರಧಾನಿಯಾಗಿರುವ ಮೋದಿ ಅವರಿಗೂ ಸ್ಥಾನ ಬಿಟ್ಟುಕೊಡುವಂತೆ ಕೇಳಲಿ' ಎಂದಿದ್ದಾರೆ.

'ಬಾಲಗಂಗಾಧರನಾಥ ಸ್ವಾಮೀಜಿ ವಿರುದ್ಧ ಷಡ್ಯಂತ್ರ ರೂಪಿಸಿ ಒಕ್ಕಲಿಗರ ಪರ್ಯಾಯ ಮಠದ ಪೀಠಾಧ್ಯಕ್ಷರನ್ನಾಗಿ ಚಂದ್ರಶೇಖರನಾಥ ಸ್ವಾಮೀಜಿ ಅವರನ್ನು ಕುಳ್ಳಿರಿಸಿದ ಬಗ್ಗೆ ಎಲ್ಲರಿಗೂ ಗೊತ್ತಿದೆ. ಅಂತಹ ಸ್ವಾಮೀಜಿಯ ಮಾತುಗಳನ್ನು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವಿಲ್ಲ' ಎಂದೂ ಹೇಳಿದ್ದಾರೆ.

'ಮರ್ಯಾದೆ ಇದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಧರ್ಮಾತ್ಮರಾಗಿ ಸ್ಥಾನ ಬಿಟ್ಟುಕೊಡಬೇಕು' ಎಂದು ಅಶೋಕ ಹೇಳಿರುವ ಮಾತಿನಲ್ಲಿ ಗಂಭೀರತೆ ಇಲ್ಲ. ಬಿ.ಎಸ್. ಯಡಿಯೂರಪ್ಪ ಅವರಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡದ ಎಚ್.ಡಿ. ಕುಮಾರಸ್ವಾಮಿ ಧರ್ಮಾತ್ಮರಾದರೇ' ಎಂದೂ ಶಿವಣ್ಣ ಕೇಳಿದ್ದಾರೆ.

ಸಿಇಟಿ: ದಾಖಲೆಗಳ ಆನ್‌ಲೈನ್ ಪರಿಶೀಲನೆ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಬಯಸಿದ ಅಭ್ಯರ್ಥಿಗಳು ಮೀಸಲಾತಿ ಬಯಸಿ ಸಲ್ಲಿಸಿದ್ದ ದಾಖಲೆಗಳ ಆನ್‌ಲೈನ್ ಪರಿಶೀಲನಾ ಕಾರ್ಯ ಪೂರ್ಣಗೊಂಡಿದ್ದು, ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಎಸ್‌ಎಟಿಎಸ್ ಮತ್ತು ಆರ್‌ಡಿ ಸಂಖ್ಯೆ ಆಧರಿಸಿ ಪರಿಶೀಲನೆ ಮಾಡಲಾಗಿದೆ. ಅಭ್ಯರ್ಥಿಗಳು ನಿಗದಿತ ಲಿಂಕ್‌ನಲ್ಲಿ ತಮ್ಮ ಅರ್ಜಿ ಸಂಖ್ಯೆ ಮತ್ತು ಜನ್ಮ ದಿನಾಂಕ ನಮೂದಿಸಿ, ವಿವರಗಳನ್ನು ನೋಡಬಹುದು. ಪರಿಶೀಲನಾ ಸ್ಲಿಪ್ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾಧಿಕಾರದ ವೆಬ್‌ಸೈಟ್ ಸಂಪರ್ಕವನ್ನು ಶೀಘ್ರ ಸಕ್ರಿಯಗೊಳಿಸಲಾಗುವುದು ಎಂದು ಕೆಇಎ ಹೇಳಿದೆ.

ಪ್ರಜ್ವಲ್‌ಗೆ ಅನಾರೋಗ್ಯ: ಆಸ್ಪತ್ರೆಗೆ ದಾಖಲಿಸಲು ಕೋರಿ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರದ ಆರೋಪಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ಬಂಧನದಲ್ಲಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಅನಾರೋಗ್ಯ ಸಮಸ್ಯೆ ಕಾಡುತ್ತಿದ್ದು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲು ನಿರ್ದೇಶಿಸಬೇಕು' ಎಂದು ಅವರ ಪರ ವಕೀಲರು ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ.

ಹಗರಣದ ನಾಲ್ಕನೇ ಆರೋಪದ ಪ್ರಕರಣದಲ್ಲಿ ಐದು ದಿನಗಳ ಪೊಲೀಸ್ ಕಸ್ಟಡಿ ಮುಕ್ತಾಯವಾದ ಕಾರಣ ಶನಿವಾರ ಅವರನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್. ಶಿವಕುಮಾರ್ ಅವರ ಮುಂದೆ ಹಾಜರು ಪಡಿಸಲಾಯಿತು.

ಈ ವೇಳೆ ಪ್ರಜ್ವಲ್ ಪರ ವಕೀಲ ಜಿ.ಅರುಣ್ ಅವರ ಮನವಿಯನ್ನು ನ್ಯಾಯಾಧೀಶರು ಆಲಿಸಿದರು. 'ನಿಮ್ಮ ಈ ಮನವಿಯನ್ನು ಜೈಲು ಅಧಿಕಾರಿಗಳಿಗೆ ನೀಡಿ. ಅವರು ಅವಕಾಶ ನೀಡದೇ ಇದ್ದಲ್ಲಿ ವಿಚಾರಣೆ ನಡೆಸೋಣ' ಎಂದು ಸೂಚಿಸಿದರು.

ಪ್ರಜ್ವಲ್ ಅವರನ್ನು ಜುಲೈ 8 ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು. ವಿಚಾರಣೆ ಮುಂದೂಡಲಾಗಿದೆ.

ರೈಲ್ವೆ ಅಧಿಕಾರಿಗಳೊಂ'ದಿಗೆ ಸಭೆ ನಡೆಸಿ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಮಾಹಿತಿ

ವಂದೇ ಭಾರತ್ ಪ್ರಯಾಣ ದರ ಪರಿಷ್ಕರಣೆಗೆ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕರು, ಕೃಷಿಕರು, ಬಡವರಿಗೂ ಅನುಕೂಲವಾಗುವಂತೆ ವಂದೇ ಭಾರತ್ ಸೇರಿದಂತೆ ವಿವಿಧ ರೈಲುಗಳ ದರ ಪರಿಷ್ಕರಣೆ ಮಾಡಲು ಚಿಂತನೆ ನಡೆಸಲಾಗಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

ರೈಲ್ವೆ ಅಧಿಕಾರಿಗಳೊಂದಿಗೆ ಶನಿವಾರ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಪ್ರಧಾನಿ ನರೇಂದ್ರ ಮೋದಿಯವರ ಜೊತೆಗೆ ರೈಲ್ವೆ ಸಚಿವರು, ನಾನು ಈ ಬಗ್ಗೆ 2 ಗಂಟೆ ಚರ್ಚೆ ನಡೆಸಿದ್ದೇವೆ. ಅದರಲ್ಲಿ ರೈಲು ದರದ ಪರಿಷ್ಕರಣೆ ಮಾಡುವ ಚಿಂತನೆಯೂ ಸೇರಿತ್ತು. ಹಳ್ಳಿಗಳಿಂದ ಬರುವವರಿಗೂ ಉತ್ತಮ ಸೌಲಭ್ಯ ಇರುವ ವಂದೇ ಭಾರತ್ ರೈಲಿನಲ್ಲಿ ಸಂಚರಿಸಬೇಕು ಎಂಬ ಆಸೆ ಇರುತ್ತದೆ. ಅದು ನೆರವೇರುವ ಕಾಲ ಬರಲಿದೆ' ಎಂದರು.

1997-98ರಲ್ಲಿ ಮಂಜೂರಾಗಿ ನನೆಗುದಿಗೆ ಬಿದ್ದಿದ್ದ ಬೆಂಗಳೂರು–ವೈಟ್‌ಫೀಲ್ಡ್ ನಡುವಿನ 38 ಕಿ.ಮೀ. ಕ್ವಾಡ್ರುಪ್ಲಿಂಗ್ (ನಾಲ್ಕು ಪಥ) ಯೋಜನೆಯನ್ನು ಮತ್ತೆ ಕೈಗೆತ್ತಿಕೊಂಡು ಕಾಮಗಾರಿಗೆ ವೇಗ ನೀಡಲಾಗಿದೆ. ದಂಡು–ಬೈಯಪ್ಪನಹಳ್ಳಿ ನಡುವೆ ಕಾಮಗಾರಿ ನಡೆಯುತ್ತಿದೆ. ₹492 ಕೋಟಿ ವೆಚ್ಚದ ಈ ಯೋಜನೆ 2025ರ ಜೂನ್ ಒಳಗೆ ಪೂರ್ಣಗೊಳಿಸುವ ಗುರಿ ಇದೆ ಎಂದು ವಿವರಿಸಿದರು.

ಬೆಂಗಳೂರು ಉಪನಗರ ರೈಲು ಯೋಜನೆ ಕಾಮಗಾರಿ ನಿಧಾನವಾಗಿದೆ. ಇದಕ್ಕೆ ವೇಗ ನೀಡುವುದಕ್ಕಾಗಿ ರೈಲ್ವೆ ಸಚಿವರೇ ಪರಿಶೀಲನೆ ಮಾಡಿ ಸೂಚನೆ ನೀಡಲಿದ್ದಾರೆ

ವಿ. ಸೋಮಣ್ಣ, ರೈಲ್ವೆ ಖಾತೆ ರಾಜ್ಯ ಸಚಿವ

ಹೆಜ್ಜಾಲ–ಚಾಮರಾಜನಗರ ಡಿಪಿಆರ್: ಹೆಜ್ಜಾಲ – ಚಾಮರಾಜನಗರ ನಡುವೆ 142 ಕಿ.ಮೀ. ಹೊಸ ರೈಲು ಮಾರ್ಗ ನಿರ್ಮಿಸಲು ಉದ್ದೇಶಿಸಲಾಗಿದೆ. ಎಲ್ಲಿಯೂ ಅರಣ್ಯ ಭೂಮಿ ಬರುವುದಿಲ್ಲ. ಒಟ್ಟು 692 ಎಕರೆ ಭೂಮಿ ಬೇಕಾಗಿದ್ದು, ರೈತರ ಜಮೀನುಗಳು ಮಧ್ಯೆ ಇವೆ. ಅವರಿಗೆ ಪರಿಹಾರ ನೀಡಿ ಭೂಸ್ವಾಧೀನ ಮಾಡಿಕೊಳ್ಳಲಾಗುವುದು. ಈ ಯೋಜನೆ ಬಗ್ಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಶೀಘ್ರ ಸಿದ್ಧಪಡಿಸಲಾಗುವುದು ಎಂದು ಮಾಹಿತಿ ನೀಡಿದರು.

ತುಮಕೂರು – ಚಿತ್ರದುರ್ಗ – ದಾವಣಗೆರೆ ಕಾರಿಡಾರ್ ಕಾಮಗಾರಿ ಬಹಳ ನಿಧಾನವಾಗಿ ನಡೆಯುತ್ತಿದ್ದು, ಅದಕ್ಕೆ ವೇಗ ನೀಡಲಾಗುತ್ತಿದೆ. 2026ಕ್ಕೆ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಹೇಳಿದರು.

ಬಂಗಾರಪೇಟೆ, ದೊಡ್ಡಬಳ್ಳಾಪುರ, ಕೆಂಗೇರಿ, ವೈಟ್‌ಫೀಲ್ಡ್, ಚನ್ನಪಟ್ಟಣ, ಕೆ.ಆರ್.ಪುರ, ರಾಮನಗರ ನಿಲ್ದಾಣಗಳನ್ನು 'ಅಮೃತ್ ಭಾರತ್' ಯೋಜನೆಯಡಿ ಮೇಲ್ದರ್ಜೆಗೆ ಏರಿಸುವ ಕಾರ್ಯ ಸಾಗಿದೆ. ನಗರದ 8 ರೈಲ್ವೆ ಮೇಲ್ಸೇತುವೆ, 4 ರೈಲ್ವೆ ಕೆಳಸೇತುವೆ ನಿರ್ಮಾಣವಾಗಿದೆ ಎಂದು ವಿವರ ನೀಡಿದರು.



ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಶನಿವಾರ ನಗರದಲ್ಲಿ ರಾಜ್ಯದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರೊಂದಿಗೆ ಸಮಾಲೋಚನೆ ನಡೆಸಿದರು– ಪ್ರಜಾವಾಣಿ ಚಿತ್ರ

ವರ್ತುಲ ರೈಲು ಯೋಜನೆ ಡಿಪಿಆರ್ ಪ್ರಗತಿಯಲ್ಲಿ

ಮುಂದಿನ ಹಲವು ದಶಕಗಳ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರು ನಗರಕ್ಕೆ 287 ಕಿ.ಮೀ. ಉದ್ದದ ವರ್ತುಲ ರೈಲ್ವೆ (ಸರ್ಕ್ಯುಲರ್ ರೈಲ್ ನೆಟ್‌ವರ್ಕ್) ವ್ಯವಸ್ಥೆಗೆ ನೀಲನಕ್ಷೆ ರೂಪಿಸಲಾಗಿದೆ ಎಂದು ಸಚಿವ ವಿ. ಸೋಮಣ್ಣ ತಿಳಿಸಿದರು. ನಿಡುವಂದ–ವಡ್ಡರಹಳ್ಳಿ–ದೇವನಹಳ್ಳಿ–ಮಾಲೂರು–ಹೀಲಲಿಗೆ–ಹೆಜ್ಜಾಲ–ಸೋಲೂರು–ನಿಡುವಂದ ಸಂಪರ್ಕಿಸುವ ಈ ಯೋಜನೆಗೆ ₹23 ಸಾವಿರ ಕೋಟಿ ವೆಚ್ಚ ತಗಲುವ ನಿರೀಕ್ಷೆ ಇದ್ದು, ಡಿಪಿಆರ್ ಪ್ರಗತಿಯಲ್ಲಿದೆ ಎಂದರು.

ಕೇಂದ್ರದಿಂದಲೇ ಕಾಮಗಾರಿ

ರಾಜ್ಯದಲ್ಲಿ ₹1,699 ಕೋಟಿ ವೆಚ್ಚದ 93 ರೈಲ್ವೆ ಮೇಲ್ಸೇತುವೆ/ಕೆಳಸೇತುವೆಗಳಿಗೆ ಅನುಮೋದನೆ ನೀಡಲಾಗಿತ್ತು. ಅದರಲ್ಲಿ 49 ಕಾಮಗಾರಿಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವೆಚ್ಚ ಹಂಚಿಕೆ ಆಧಾರದಲ್ಲಿ ಅನುಮೋದನೆಯಾಗಿದ್ದವು. ಅದರಂತೆ ರೈಲ್ವೆ ಇಲಾಖೆಯ ಪಾಲು ₹850 ಕೋಟಿ, ರಾಜ್ಯದ ಪಾಲು ₹849 ಕೋಟಿ ಆಗಿತ್ತು. ಬಿಬಿಎಂಪಿ ವ್ಯಾಪ್ತಿ ಹೊರತುಪಡಿಸಿ ಉಳಿದ ಎಲ್ಲ ಕಾಮಗಾರಿಗಳ ವೆಚ್ಚವನ್ನು ರೈಲ್ವೆ ಇಲಾಖೆಯೇ ಭರಿಸಲು ನಿರ್ಧರಿಸಿದೆ. ಅದರಂತೆ 49 ಕಾಮಗಾರಿಗಳ ಪೈಕಿ 32 ಕಾಮಗಾರಿಗಳಿಗೆ ರಾಜ್ಯ ಸರ್ಕಾರದ ಹಂಚಿಕೆ ಒಪ್ಪಂದವನ್ನು ಹಿಂಪಡೆಯಲಾಗಿದೆ ಎಂದು ಸಚಿವ ವಿ. ಸೋಮಣ್ಣ ತಿಳಿಸಿದರು.

ಬೆಂಗಳೂರು ನಗರ ರೈಲ್ವೆ ಸಂಪರ್ಕ ಉತ್ತಮಗೊಳಿಸಲು ಸುಮಾರು ₹43 ಸಾವಿರ ಕೋಟಿ ಮೊತ್ತದಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು. ಬೆಟ್ಟಹಲಸೂರು–ರಾಜಾನುಕುಂಟೆ ಹೊಸ ಮಾರ್ಗ, ವೈಟ್‌ಫೀಲ್ಡ್–ಬಂಗಾರಪೇಟೆ ಕ್ವಾಡ್ರುಪ್ಲಿಂಗ್, ಬೈಯಪ್ಪನಹಳ್ಳಿ–ಹೊಸೂರು ಕ್ವಾಡ್ರುಪ್ಲಿಂಗ್, ಯಲಹಂಕ–ದೇವನಹಳ್ಳಿ ದ್ವಿಪಥ, ಬೆಂಗಳೂರು–ತುಮಕೂರು ಕ್ವಾಡ್ರುಪ್ಲಿಂಗ್, ಚಿಕ್ಕಬಾಣಾವರ–ಹಾಸನ ಕ್ವಾಡ್ರುಪ್ಲಿಂಗ್, ಬೆಂಗಳೂರು–ಮೈಸೂರು ಕ್ವಾಡ್ರುಪ್ಲಿಂಗ್, ದೇವನಹಳ್ಳಿ–ಬಂಗಾರಪೇಟೆ ಡಬಲಿಂಗ್ ಸರ್ವೆಗಳು ನಡೆಯುತ್ತಿವೆ ಎಂದರು.

ಭಾನುವಾರ, ಜೂನ್ 30, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 181 | ಪುಟ 20

www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭಾರತದ ಮುಡಿಗೆ ಟಿ20 ವಿಶ್ವ ಕಿರೀಟ


ಟಿ20 ವಿಶ್ವಕಪ್ ಗೆದ್ದ ಭಾರತ ಕ್ರಿಕೆಟ್ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು —ಎಎಫ್‌ಪಿ ಚಿತ್ರ

ಪ್ರಜಾವಾಣಿ ವಾರ್ತೆ

ಬ್ರಿಜ್‌ಟೌನ್, ಬಾರ್ಬಡೋಸ್: ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ಟಿ20 ವಿಶ್ವಕಪ್ ಟೂರ್ನಿಯ ಕಿರೀಟವನ್ನು ತನ್ನ ಮುಡಿಗೇರಿಸಿಕೊಂಡಿತು.

ಶನಿವಾರ ರಾತ್ರಿ (ಭಾರತೀಯ ಕಾಲಮಾನ) ನಡೆದ ಟೂರ್ನಿಯ ಫೈನಲ್‌ನಲ್ಲಿ 7 ರನ್‌ಗಳಿಂದ ದಕ್ಷಿಣ ಆಫ್ರಿಕಾ ವಿರುದ್ಧ ರೋಚಕ ಜಯ ಸಾಧಿಸಿದ ಭಾರತ ತಂಡವು ಎರಡನೇ ಬಾರಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಈ ಟೂರ್ನಿಯಲ್ಲಿ ಅಜೇಯವಾಗುಳಿಯಿತು. ಆದರೆ ಮೊಟ್ಟಮೊದಲ ಪ್ರಶಸ್ತಿ ಜಯಿಸುವ ದಕ್ಷಿಣ ಆಫ್ರಿಕಾದ ಕನಸು ಕೈಗೂಡಲಿಲ್ಲ.

ಮೊದಲು ಬ್ಯಾಟಿಂಗ್ ಮಾಡಿದ್ದ ಭಾರತ ತಂಡವು ದಕ್ಷಿಣ ಆಫ್ರಿಕಾಗೆ 177 ರನ್‌ಗಳ ಗುರಿಯೊಡ್ಡಿತ್ತು. ಹಾರ್ದಿಕ್ ಪಾಂಡ್ಯ (20ಕ್ಕೆ3), ಜಸ್‌ಪ್ರೀತ್ ಬೂಮ್ರಾ (18ಕ್ಕೆ2) ಮತ್ತು ಅರ್ಷದೀಪ್ ಸಿಂಗ್ (20ಕ್ಕೆ 2) ದಕ್ಷಿಣ ಆಫ್ರಿಕಾ ತಂಡವನ್ನು (20 ಓವರ್‌ಗಳಲ್ಲಿ 8ಕ್ಕೆ 169) ಕಟ್ಟಿಹಾಕುವಲ್ಲಿ ಯಶಸ್ವಿಯಾದರು. ಚುಟುಕು ಮಾದರಿಯಲ್ಲಿ ಭಾರತವು 2007ರಲ್ಲಿ ಪ್ರಶಸ್ತಿ ಜಯಿಸಿತ್ತು. ಆಗ ಮಹೇಂದ್ರ ಸಿಂಗ್ ಧೋನಿ ತಂಡದ ನಾಯಕ ರಾಗಿದ್ದರು. 2013ರಲ್ಲಿ ಚಾಂಪಿಯನ್ಸ್ ಟ್ರೋಫಿ ಜಯಿಸಿದ ನಂತರ ಭಾರತವು ಯಾವುದೇ ಮಾದರಿಯ ಐಸಿಸಿ ಟ್ರೋಫಿ ಗಳಿಸಿರಲಿಲ್ಲ. 2022ರ ಟಿ20 ವಿಶ್ವಕಪ್ ಸೆಮಿಫೈನಲ್‌ನಲ್ಲಿ ಸೋತಿತ್ತು.

ಐವರು ಯೋಧರು ನೀರುಪಾಲು

ನವದೆಹಲಿ/ಲೇಹ್ (ಪಿಟಿಐ): ಯುದ್ಧ ತಾಲೀಮು ನಡೆಸುತ್ತಿದ್ದ ಜೂನಿಯರ್ ಕಮಿಷನ್ ಅಧಿಕಾರಿ ಸೇರಿದಂತೆ ಐವರು ಯೋಧರು ಶ್ಯೋಕ್ ನದಿಯಲ್ಲಿ ಕೊಚ್ಚಿಹೋದ ಘಟನೆ ಪೂರ್ವ ಲಡಾಖ್‌ನ ಗಡಿ ನಿಯಂತ್ರಣ ರೇಖೆಯ (ಎಲ್‌ಒಸಿ) ಬಳಿ ಶನಿವಾರ ನಡೆದಿದೆ.

'ಮಂದಿರ್ ಮೋರ್ ಬಳಿ ರಾತ್ರಿ 1 ಗಂಟೆಗೆ ದೈನಂದಿನ ಮಿಲಿಟರಿ ತಾಲೀಮಿನ ಭಾಗವಾಗಿ ಟಿ–72 ಯುದ್ಧ ಟ್ಯಾಂಕರ್ ಅನ್ನು ಶ್ಯೋಕ್ ನದಿಯ ಇನ್ನೊಂದು ದಡಕ್ಕೆ ಸಾಗಿಸಲಾಗುತ್ತಿತ್ತು. ಈ ವೇಳೆ ನದಿಯ ನೀರಿನ ಮಟ್ಟ ದಿಢೀರ್ ಏರಿಕೆಯಾದ ಪರಿಣಾಮ ಯುದ್ಧ ಟ್ಯಾಂಕರ್ ನದಿಯಲ್ಲಿ ಸಿಲುಕಿ, ಅದರಲ್ಲಿದ್ದ ಐವರು ನೀರಿನಲ್ಲಿ ಕೊಚ್ಚಿಹೋದರು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಸ್ಥಳೀಯ ಅಧಿಕಾರಿಗಳು ಮತ್ತು ರಕ್ಷಣಾ ಪಡೆಗಳು ತಕ್ಷಣ ಸ್ಥಳಕ್ಕೆ ಧಾವಿಸಿ, ಕಾರ್ಯಾಚರಣೆ ನಡೆಸಿದ್ದರು. ಆದರೆ, ನೀರಿನ ರಭಸ ವಿಪರೀತವಾಗಿದ್ದರಿಂದ ಸೈನಿಕರ ಜೀವ ಉಳಿಸಲು ಸಾಧ್ಯವಾಗಲಿಲ್ಲ' ಎಂದು ಮಾಹಿತಿ ನೀಡಿದ್ದಾರೆ.

ಸೇನೆಯ 52ನೇ ರೆಜಿಮೆಂಟಿಗೆ ಸೇರಿದ ಎಂ.ಆರ್.ಕೆ. ರೆಡ್ಡಿ, ಸುಭಾನ್ ಖಾನ್, ಭೂಪೇಂದ್ರ ನೇಗಿ, ಇ ತೈಬಮ್ ಮತ್ತು ಸದರ್ಬೋನಿಯ ನಾಗರಾಜ್ ಮೃತ ಯೋಧರು. ಹಿಮಗಡ್ಡೆಗಳು ಕರಗುತ್ತಿರುವುದರಿಂದ ಶ್ಯೋಕ್ ನದಿಯ ನೀರಿನ ಮಟ್ಟ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದ ಯೋಜನೆಗಳಿಗೆ ಸಿಗದ ಸಹಕಾರ • ಸಂಸದರ ಮಹಾಮೌನ

ರಾಜ್ಯ ಏರಿಗೆ– ಕೇಂದ್ರ ನೀರಿಗೆ

ಒಳನೋಟ

• ಮಂಜುನಾಥ ಹೆಬ್ಬಾರ್

ನವದೆಹಲಿ: ಕಾವೇರಿ ನೀರು ಹಂಚಿಕೆಯಲ್ಲಿ ಬ್ರಿಟಿಷ್ ಸರ್ಕಾರವು ಕರ್ನಾಟಕಕ್ಕೆ ಮಾಡಿದ್ದ ಐತಿಹಾಸಿಕ ಅನ್ಯಾಯವನ್ನು ಕಾವೇರಿ ಜಲವಿವಾದ ನ್ಯಾಯಮಂಡಳಿ ಮುಂದುವರಿಸಿತ್ತು. ನ್ಯಾಯಮಂಡಳಿಯ ತೀರ್ಪು ಪ್ರಶ್ನಿಸಿ ಕರ್ನಾಟಕವು ಸುಪ್ರೀಂ ಕೋರ್ಟ್‌ ಕದ ತಟ್ಟಿತ್ತು. 2016ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯಕ್ಕೆ ಹಿನ್ನಡೆಯಾದಾಗ ರಾಜ್ಯದ ವಕೀಲರ ತಂಡದ ನೇತೃತ್ವ ವಹಿಸಿದ್ದ ಫಾಲಿ ಎಸ್. ನರೀಮನ್ ವಿರುದ್ಧ ರಾಜಕಾರಣಿಗಳು ನಂಜಿನ ಮಳೆ ಸುರಿಸಿದ್ದರು. ರಾಜ್ಯದ ಗೊಡವೆಯೇ ಬೇಡವೆಂದು ನರೀಮನ್ ದೂರ ಸರಿದಿದ್ದರು. ಆಗ ಸರ್ಕಾರದ ಪರವಾಗಿ ಕ್ಷಮೆಯಾಚಿಸಿ ಅವರ ಮನವೊಲಿಸಿದ್ದು ಆಗಿನ ಜಲಸಂಪನ್ಮೂಲ ಸಚಿವ ಎಂ.ಬಿ.ಪಾಟೀಲ ಅವರು. ಕಾವೇರಿ ಜಲವಿವಾದದ ವಿಚಾರಣೆ ಸಂದರ್ಭದಲ್ಲಿ ಪಾಟೀಲ ಅವರು ರಾಷ್ಟ್ರ ರಾಜಧಾನಿಯಲ್ಲಿ ತಿಂಗಳು ಕಾಲ ಠಿಕಾಣಿ ಹೂಡಿ ಕಾನೂನು ತಜ್ಞರೊಂದಿಗೆ ಸರಣಿ ಸಭೆಗಳನ್ನು ನಡೆಸಿ ಹುರುಪು ತುಂಬಿದ್ದರು. ಸರ್ಕಾರ ಹಾಗೂ ಕಾನೂನು ತಂಡ ಸಮನ್ವಯ ಸಾಧಿಸಿ ಹೋರಾಟ ಮಾಡಿದ್ದರಿಂದ ತಮಿಳುನಾಡಿಗೆ ಹರಿಸುವ ನೀರಿನಲ್ಲಿ 14.5 ಟಿಎಂಸಿ ಅಡಿ ಮತ್ತೆ ಕಡಿತ ಮಾಡಿತ್ತು.

ಆಳುವವರು ಹಾಗೂ ಕಾನೂನು ತಜ್ಞರು ಜತೆಗೂಡಿ ರಾಜ್ಯದ ಹಿತ ಕಾಯ್ದ ಉದಾಹರಣೆಯಿದು. ಬೆಂಗಳೂರಿನ ನೀರಿನ ದಾಹ ಈಡೇರಿಸಲು ಹೆಚ್ಚುವರಿ 6 ಟಿಎಂಸಿ ಅಡಿ ಕಾವೇರಿ ನೀರು ಬಳಕೆಗೆ ಅವಕಾಶ ಸಿಕ್ಕಿತು.

ಕಳೆದ ವರ್ಷ ಭೀಕರ ಬರದಿಂದಾಗಿ ರಾಜ್ಯ ಅತಿ ಕಷ್ಟ ಕೋಟಲೆಗಳನ್ನು ಅನುಭವಿಸಿತ್ತು.

6ನೇ ಪುಟ ನೋಡಿ



ಜಲ ಯೋಜನೆಗಳ ಕುರಿತು ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ. ಮಹದಾಯಿ ಯೋಜನೆಗೆ ಅನುಮೋದನೆ ನೀಡಲು ನ್ಯಾಯಾಲಯದಲ್ಲಿ ಪ್ರಕರಣವಿದೆ ಎಂದು ನೆಪ ಹೇಳುತ್ತಿದ್ದಾರೆ. ರಾಜ್ಯಕ್ಕೆ ಸಿಗಬೇಕಿರುವುದು ಪರಿಸರ ಹಾಗೂ ವನ್ಯಜೀವಿ ಅನುಮೋದನೆ. ಅದನ್ನು ಕೊಡಿಸಿದರೆ ಯೋಜನೆಗೆ ಚಾಲನೆ ನೀಡುತ್ತೇವೆ. ಮೇಕೆದಾಟು ಯೋಜನೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿಲ್ಲ. ವಿಸ್ತೃತ ಯೋಜನಾ ವರದಿಗೆ ಕೇಂದ್ರ ಜಲ ಆಯೋಗ ಒಪ್ಪಿಗೆ ಕೊಡಬೇಕು. ಈ ಬಗ್ಗೆ ಕೇಂದ್ರ ಸಚಿವರು ಹಾಗೂ ಸಂಸದರಿಗೆ ಮನವರಿಕೆ ಮಾಡಿಕೊಡಲಾಗಿದೆ. ಪಕ್ಷಭೇದ ಮರೆತು ರಾಜ್ಯದ ಪರ ನಿಲ್ಲುವ ಭರವಸೆ ನೀಡಿದ್ದಾರೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ



ಅನೇಕ ವಿಷಯಗಳು ಹಾಗೂ ನೀರಾವರಿ ಯೋಜನೆಗಳು ಸುದೀರ್ಘವಾಗಿ ಬಾಕಿ ಇವೆ. ಅವುಗಳ ತ್ವರಿತ ಜಾರಿಗೆ ಎಲ್ಲರೂ ಒಟ್ಟಾಗಿ ಪ್ರಯತ್ನ ಮಾಡಬೇಕು. ಬೆಂಗಳೂರಿಗೆ 15ನೇ ಹಣಕಾಸು ಆಯೋಗ ₹11 ಸಾವಿರ ಕೋಟಿ ಮೀಸಲಿಟ್ಟಿದೆ. ಅದರಲ್ಲಿ ₹6 ಸಾವಿರ ಕೋಟಿ ಬಂದಿಲ್ಲ ಎಂಬುದು ರಾಜ್ಯದ ದೂರು. ಬೆಂಗಳೂರಿನ ಪೆರಿಫೆರಲ್ ವರ್ತುಲ ರಸ್ತೆಗೆ ರಾಜ್ಯ ಸರ್ಕಾರ ಮೊದಲು ಹಣ ಮೀಸಲಿಡಬೇಕು. ಬಳಿಕ ಕೇಂದ್ರದ ಬಳಿ ಹಣ ಕೇಳಬೇಕು. ಇದು ₹29 ಸಾವಿರ ಕೋಟಿ ಯೋಜನೆ. ಇದಕ್ಕೆ ರಾಜ್ಯ ಹಣವನ್ನೇ ಮೀಸಲಿಟ್ಟಿಲ್ಲ. ಕೇಂದ್ರ–ರಾಜ್ಯ ಸರ್ಕಾರಗಳ ನಡುವೆ ಬಾಂಧವ್ಯ ಬೇಕು, ಪರಸ್ಪರ ಹೊಂದಾಣಿಕೆ ಬೇಕಿದೆ. ಸಂಘರ್ಷ ಖಂಡಿತಾ ಬೇಡ.

ಎಚ್.ಡಿ.ಕುಮಾರಸ್ವಾಮಿ, ಕೇಂದ್ರದ ಭಾರಿ ಕೈಗಾರಿಕೆ ಹಾಗೂ ಉಕ್ಕು ಸಚಿವ

ನೀಟ್ ಅಕ್ರಮ: ಗುಜರಾತಿನ ಏಳು ಕಡೆ ಸಿಬಿಐ ಶೋಧ

ನವದೆಹಲಿ (ಪಿಟಿಐ): 'ನೀಟ್‌–ಯುಜಿ' ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಗುಜರಾತ್‌ನ ಏಳು ಕಡೆಗಳಲ್ಲಿ ಶೋಧ ಕಾರ್ಯ ನಡೆಸಿದೆ ಎಂದು ಅಧಿಕಾರಿಗಳು ಶನಿವಾರ ಹೇಳಿದ್ದಾರೆ. ಈ ಪ್ರಕರಣ ಕುರಿತು ಹಿಂದಿ ಪತ್ರಿಕೆಯೊಂದರ ಪತ್ರಕರ್ತ ಜಮಾಲುದ್ದೀನ್ ಅನ್ಸಾರಿ ಅವರನ್ನು ಸಿಬಿಐ ಬಂಧಿಸಿದೆ.

ಸಿಬಿಐ ಅಧಿಕಾರಿಗಳ ತಂಡ ಆನಂದ್, ಖೇಡಾ, ಅಹಮದಾಬಾದ್ ಮತ್ತು ಗೋಧ್ರಾ ಜಿಲ್ಲೆಗಳಲ್ಲಿ ಶಂಕಿತರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸಿದೆ. 7

ವಿದೇಶಿ ವಿನಿಮಯ ಸಂಗ್ರಹ ಏರಿಕೆ 8

ವಾಲ್ಮೀಕಿ ನಿಗಮ: ₹10 ಕೋಟಿ ಜಪ್ತಿ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಹಗರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ದಳದ (ಎಸ್‌ಐಟಿ) ಪೊಲೀಸರು, ಚಿನ್ನಾಭರಣ, ಹೋಟೆಲ್ ಹಾಗೂ ಬಾರ್ ಆ್ಯಂಡ್ ರೆಸ್ಟೋರೆಂಟ್ ಮಾಲೀಕರ ಖಾತೆಗಳೂ ಸೇರಿ ಒಟ್ಟು 197 ಖಾತೆಗಳಿಂದ ಅಂದಾಜು ₹10 ಕೋಟಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಆರೋಪಿಗಳಿಂದ ₹14 ಕೋಟಿ, ಬ್ಯಾಂಕ್‌ಗಳಲ್ಲಿ ₹10 ಕೋಟಿ ಮುಟ್ಟು ಗೋಲು ಹಾಗೂ ₹4 ಕೋಟಿ ಚಿನ್ನಾಭರಣ ಜಪ್ತಿ ಮಾಡಿಕೊಂಡಿದ್ದು, ಇದುವರೆಗೂ ಈ ಪ್ರಕರಣದಲ್ಲಿ ₹28 ಕೋಟಿ ಜಪ್ತಿ ಮಾಡಿಕೊಳ್ಳಲಾಗಿದೆ. 4

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಸೂರ್ಯೋದಯ: 5:56 ಸೂರ್ಯಾಸ್ತ: 6:49 ಚಂದ್ರೋದಯ: ಮ. 12:40 ಚಂದ್ರಾಸ್ತ: ರಾ. 12:11

ಭಾನುವಾರದ ಉಷ್ಣಾಂಶ 29° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ

ತಾಪಮಾನ	ಸೋಮವಾರ	ಮಂಗಳವಾರ	ಬುಧವಾರ
	28° 21°	30° 21°	29° 21°

ಶನಿವಾರದ ಹವಾಮಾನ : ಗರಿಷ್ಠ 29° ಕನಿಷ್ಠ 21°

ಪ್ರಜಾವಾಣಿ

ಬಸವಣ್ಣ ಕುರಿತ ಪಠ್ಯದ ತಪ್ಪು ಸರಿಪಡಿಸಲು ಒತ್ತಾಯ

ಬೆಂಗಳೂರು: ರಾಜ್ಯ ಪಠ್ಯಕ್ರಮದ 9ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕದ ಬಸವಣ್ಣನವರ ಪರಿಚಯ ಅಧ್ಯಾಯದಲ್ಲಿ 'ವೀರಶೈವ' ಪದ ಕೈಬಿಟ್ಟಿರುವುದಕ್ಕೆ ಅಖಿಲ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆ ಆಕ್ಷೇಪ ವ್ಯಕ್ತಪಡಿಸಿದೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಶ್ರೀಮದ್ ವಿಭೂತಿಪುರ ವೀರಸಿಂಹಾಸನ ಮಹಾ ಸಂಸ್ಥಾನ ಮಠದ ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಪಠ್ಯದಲ್ಲಿನ ಹಲವು ತಪ್ಪುಗಳನ್ನು ಸರಿಪಡಿಸಲು ಆಗ್ರಹಿಸಿದ್ದಾರೆ.

ವೀರಶೈವ ಪದ ತೆಗೆದುಹಾಕಿರುವುದು ಸರಿಯಲ್ಲ, ಸಂಶೋಧಕ ಎಂ.ಎಂ. ಕಲಬುರಗಿ ಪ್ರಕಟಿಸಿರುವ ಸಮಗ್ರ ವಚನ ಸಂಪುಟದಲ್ಲಿನ ವಚನಗಳಲ್ಲಿ ಬಸವಣ್ಣ ಸೇರಿದಂತೆ 30ಕ್ಕೂ ಹೆಚ್ಚು ಶಿವಶರಣರು ತಮ್ಮ 142 ವಚನಗಳಲ್ಲಿ 221 ಬಾರಿ ವೀರಶೈವ ಪದ ಬಳಸಿದ್ದಾರೆ. 10 ವಚನಗಳಲ್ಲಿ 21 ಕಡೆ ಮಾತ್ರ ಲಿಂಗಾಯತ ಪದ ಬಳಕೆ ಮಾಡಿದ್ದಾರೆ. ಆದರೆ, ಬಸವಣ್ಣ ಒಂದು ವಚನದಲ್ಲೂ ಲಿಂಗಾಯತ ಪದ ಬಳಸಿಲ್ಲ. ಒಂದು ವಚನದಲ್ಲಿ ತಾವು ನಿಜ ವೀರಶೈವ ಎಂದು ಉಲ್ಲೇಖಿಸಿದ್ದಾರೆ ಎಂದಿದ್ದಾರೆ.

ಸಣ್ಣ ಹೋಟೆಲ್ ನಡೆಸುವ ದಂಪತಿ ಪುತ್ರನಿಗೆ 4, ಗಾರೆ ಕೆಲಸಗಾರರ ಪುತ್ರಿಗೆ 3 ಪದಕ

ಬಡತನದಲ್ಲಿ ಅರಳಿದ 'ಚಿನ್ನ'ದ ಪ್ರತಿಭೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಂಟ್ರಲ್ ಕಾಲೇಜಿನ ರಸಾಯನ ವಿಜ್ಞಾನ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿ ಎಂ. ಶ್ರೇಯಸ್ ಬೆಂಗಳೂರು ವಿಶ್ವವಿದ್ಯಾಲಯದ ಮೂರನೇ ಘಟಿಕೋತ್ಸವದಲ್ಲಿ ನಾಲ್ಕು ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಂಡರು.

ದಾಬಸ್‌ಪೇಟೆಯಲ್ಲಿ ಚಿಕ್ಕ ಹೋಟೆಲ್ ನಡೆಸುವ ಮಲ್ಲಿಕಾರ್ಜುನಯ್ಯ-ವನಿತಾ ದಂಪತಿ ಪುತ್ರ ಶ್ರೇಯಸ್ ರಸಾಯನ ವಿಜ್ಞಾನದಲ್ಲಿ ಸಂಶೋಧನೆ ಕೈಗೊಳ್ಳುವ ಗುರಿ ಇಟ್ಟುಕೊಂಡಿದ್ದಾರೆ. ಪಿಎಚ್.ಡಿಗೆ ಪ್ರವೇಶ ಪರೀಕ್ಷೆ ಬರೆದಿದ್ದಾರೆ.

ಬಿ.ಬಿ.ಎ.ಯಲ್ಲಿ ಮೂರು ಚಿನ್ನದ ಪದಕ ಪಡೆದ ಬನಶಂಕರಿ ಬಡಾವಣೆಯ ಕೃಷ್ಣ ಪದವಿ ಕಾಲೇಜಿನ ವಿದ್ಯಾರ್ಥಿನಿ ಆರ್. ರುತ್ ಕೂಲಿ ಕಾರ್ಮಿಕ ಕುಟುಂಬದ ಕುಡಿ. ಅಪ್ಪ ರಾಜಾ ಗಾರೆ ಕೆಲಸ, ತಾಯಿ ಸರೋಜಾ ಮನೆಗೆಲಸ ಮಾಡಿಕೊಂಡು ಮಗಳ ಶಿಕ್ಷಣಕ್ಕೆ ನೆರವಾಗಿದ್ದಾರೆ.

'ಅಪ್ಪ, ಅಮ್ಮನ ಕಷ್ಟ ನೋಡಿಕೊಂಡು ಕಷ್ಟಪಟ್ಟು ಓದಿದೆ. ಪ್ರತಿ ದಿನ ಸಂಜೆ ಮನೆಯಲ್ಲಿ ಶಾಲಾ ಮಕ್ಕಳಿಗೆ ಪಾಠ ಮಾಡಿ ನಾನೂ ಹಣ ಸಂಪಾದಿಸುತ್ತಿದ್ದೇನೆ. ಎಂ.ಬಿ.ಎ. ಮಾಡಿದ ನಂತರ ಪ್ರಾಧ್ಯಾಪಕಿಯಾಗುವ ಗುರಿ ಇಟ್ಟುಕೊಂಡಿದ್ದೇನೆ' ಎಂದು ರುತ್ ಹೇಳಿದರು.

ಆದರ್ಶ ಕಾಲೇಜಿನಲ್ಲಿ ಎಂ.ಬಿ.ಎ. ಪೂರೈಸಿರುವ ಬಿ. ಸಹನಶ್ರೀ ಕೂಡ ಕೂಲಿ ಕಾರ್ಮಿಕ ಕುಟುಂಬದ ಪುತ್ರಿ. ಪ್ರಸ್ತುತ ಅವರು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಪಿಎಚ್.ಡಿ ಅಧ್ಯಯನ ಮಾಡಿ, ಪ್ರಾಧ್ಯಾಪಕಿಯಾಗುವ ಗುರಿಯನ್ನಿಟ್ಟುಕೊಂಡಿದ್ದಾರೆ.

ಫ್ರೆಂಚ್ ಕಲಿಯಲು ಮಧ್ಯಪ್ರದೇಶದಿಂದ ಬಂದರು: ಬಿ.ಎ, ಎಂ.ಇಡಿ. ಮಾಡಿ ಶಿಕ್ಷಕಿಯಾಗಿ 27 ವರ್ಷಗಳು ಸೇವೆ ಸಲ್ಲಿಸಿದ್ದ ವೀನಲ್ ತಿವಾರಿ ಅವರು ಫ್ರೆಂಚ್ ಭಾಷಾ ವಿಷಯದಲ್ಲಿ ಎಂ.ಎ ಮಾಡಲು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಬಂದಿದ್ದರು. ಫ್ರೆಂಚ್‌ನಲ್ಲಿ ಈಗಾಗಲೆ ಏಳು ಕೃತಿಗಳನ್ನು ರಚಿಸಿರುವ ಅವರಿಗೆ ಎರಡು ಚಿನ್ನದ ಪದಕಗಳು ಒಲಿದಿವೆ.

'ಫ್ರೆಂಚ್ ವಿಭಾಗದಲ್ಲಿ ಉತ್ತಮ ಪ್ರಾಧ್ಯಾಪಕರು ಇರುವ ಕುರಿತು ಸ್ನೇಹಿತರು ಮಾಹಿತಿ ನೀಡಿದ್ದರು. ಹಾಗಾಗಿ, ಇಲ್ಲಿಗೆ ಬಂದೆ. ಎರಡು ವರ್ಷಗಳಲ್ಲಿ ಸಾಕಷ್ಟು ಕಲಿತೆ. ಎಂದಿನಂತೆ ಮತ್ತೆ ಮಧ್ಯ ಪ್ರದೇಶದಲ್ಲೇ ಶಿಕ್ಷಕಿ ವೃತ್ತಿ ಮುಂದುವರಿಸುವೆ' ಎಂದು ವೀನಲ್ ಪ್ರತಿಕ್ರಿಯಿಸಿದರು.

ಬಿ.ಕಾಂನಲ್ಲಿ ಆರ್.ಜೆ.ಎಸ್. ಪ್ರಥಮ ದರ್ಜೆ ಕಾಲೇಜಿನ ಎಸ್.ಎಸ್. ಧನ್ಯತಾ, ಅಪ್ಲೈಡ್ ಆರ್ಟ್ಸ್‌ನಲ್ಲಿ ಬೆಂಗಳೂರು ದೃಶ್ಯ ಕಲಾ ಶಾಲೆಯ ಬಿ. ಹರ್ಷಿತಾ, ಜೀವ ರಸಾಯನವಿಜ್ಞಾನದಲ್ಲಿ ಎಂ.ಎಸ್. ರಾಮಯ್ಯ ಕಾಲೇಜಿನ ಎಚ್.ಪಿ. ಗಗನಶ್ರೀ ಮತ್ತು ಸೂಕ್ಷ್ಮ ಜೀವ ವಿಜ್ಞಾನದಲ್ಲಿ ಬಿ.ಪ್ರಕೃತಿ ತಲಾ ಎರಡು ಪದಕ ಪಡೆದರು. ಒಟ್ಟು 63 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಿಸಲಾಯಿತು.



ಬೆಂಗಳೂರು ನಗರ ವಿಶ್ವವಿದ್ಯಾಲಯ ಶನಿವಾರ ಆಯೋಜಿಸಿದ್ದ ಘಟಿಕೋತ್ಸವದಲ್ಲಿ ನಾಲ್ಕು ಚಿನ್ನದ ಪದಕ ಪಡೆದ ಎಂ. ಶ್ರೇಯಸ್ ಅವರು ತಂದೆ ಮಲ್ಲಿಕಾರ್ಜುನಯ್ಯ, ತಾಯಿ ವನಿತಾ ಅವರೊಂದಿಗೆ ಸಂಭ್ರಮಿಸಿದರು
—ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್



ಬಿ.ಬಿ.ಎ. ಪದವಿಯಲ್ಲಿ ಮೂರು ಚಿನ್ನದ ಪದಕ ಪಡೆದ ಶ್ರೀ ಕೃಷ್ಣ ಪದವಿ ಕಾಲೇಜಿನ ಆರ್. ರುತ್

ಅಂಕಿ ಅಂಶ

35,912	ಪದವಿಗೆ ಅರ್ಹರಾದ ಒಟ್ಟು ವಿದ್ಯಾರ್ಥಿಗಳು
6,424	ಸ್ನಾತಕೋತ್ತರ ಪದವೀಧರರು
29,484	ಸ್ನಾತಕ ಪದವೀಧರರು
4	ಪಿಎಚ್.ಡಿ ಪಡೆದವರು
63	ಚಿನ್ನದ ಪದಕ ಪಡೆದವರು

ನಿರುದ್ಯೋಗದ ಭಯ ಹುಟ್ಟಿಸಿದ 'ಎಐ'

ಕೃತಕ ಬುದ್ಧಿಮತ್ತೆ(ಎಐ) ಮತ್ತು ಅದರ ಉದಯೋನ್ಮುಖ ತಂತ್ರಜ್ಞಾನಗಳು ಮನುಷ್ಯನ ಬದುಕಿಗೆ ನಂಬಲಾಗದ ಸಾಮರ್ಥ್ಯವನ್ನು ನೀಡುತ್ತಿದ್ದರೂ, ಉದ್ಯೋಗ ಭದ್ರತೆಯನ್ನು ಅನಿಶ್ಚಿತಗೊಳಿಸುತ್ತಿವೆ ಎಂದು ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ ಅಧ್ಯಕ್ಷ ಟಿ.ಜಿ. ಸೀತಾರಾಮ್ ಹೇಳಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯ ಶನಿವಾರ ಹಮ್ಮಿಕೊಂಡಿದ್ದ ಮೂರನೇ ವಾರ್ಷಿಕ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆ ಸಮಾಜದ ಮೇಲೆ ಬೀರುತ್ತಿರುವ ಪ್ರಭಾವ, ವ್ಯತಿರಿಕ್ತ ಪರಿಣಾಮಗಳ ಬಗ್ಗೆ ಭಯಪಡುವ ಬದಲು ಸುಸ್ಥಿರತೆ ಮತ್ತು ಬದಲಾವಣೆಯ ಹೊಸ ವಿಧಾನಗಳಿಗೆ ತೆರೆದುಕೊಳ್ಳಬೇಕು. ಅದಕ್ಕಾಗಿ ಕಲಿಕೆಯ ಉತ್ಸಾಹ ಉಳಿಸಿಕೊಂಡು, ನಿರಂತರ ಆವಿಷ್ಕಾರಗಳಿಗೆ ತೆರೆದುಕೊಳ್ಳಬೇಕು ಎಂದರು.

ವೈದ್ಯಕೀಯ ಕ್ಷೇತ್ರ ಆಧುನಿಕ ತಂತ್ರಜ್ಞಾನದ ಆಧಾರದ ಮೇಲೆ ವಿಕಸಿತಗೊಳ್ಳುತ್ತಿದೆ. ಹಾಗಾಗಿ, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಮಧ್ಯೆ ಅಂತರ ಶಿಸ್ತೀಯ ಶಿಕ್ಷಣ, ಸಂಶೋಧನೆ ಮತ್ತು ನಾವೀನ್ಯತೆ ಸಾಧಿಸಲು ತಾಂತ್ರಿಕ ಶಿಕ್ಷಣ ಪರಿಷತ್‌ನಿಂದ ಅಂತರ್ ಸಾಂಸ್ಥಿಕ ಜೈವಿಕ ವೈದ್ಯಕೀಯ ಆವಿಷ್ಕಾರ (ಐಬಿಐಪಿ) ಆರಂಭಿಸಲು ಸಿ-ಕ್ಯಾಂಪ್ (ಸೆಲ್ಯುಲರ್ ಮತ್ತು ಮಾಲಿಕ್ಯುಲರ್ ಸಂಸ್ಥೆ) ಜೊತೆ ಸಹಭಾಗಿತ್ವ ಪಡೆಯಲಾಗಿದೆ. ಆರೋಗ್ಯ ಕ್ಷೇತ್ರದಲ್ಲಿನ ಸಂಕೀರ್ಣ ಸವಾಲುಗಳನ್ನು ಎದುರಿಸಲು ಎಂಜಿನಿಯರ್‌ಗಳು ಹಾಗೂ ವೈದ್ಯರು ಈ ವೇದಿಕೆ ಮೂಲಕ ಶ್ರಮಿಸಲಿದ್ದಾರೆ. ಇದರಿಂದ ಭವಿಷ್ಯದಲ್ಲಿ ಎರಡೂ ಕ್ಷೇತ್ರಗಳ ನಡುವಿನ ಅಂತರ ಕಡಿಮೆಯಾಗಲಿದೆ ಎಂದು ಹೇಳಿದರು.

ಕ್ರಿಕೆಟಿಗ ಜಿ.ಆರ್. ವಿಶ್ವನಾಥ್, ಗೋಕುಲ ಶಿಕ್ಷಣ ದತ್ತಿ ಸಂಸ್ಥೆಯ ಅಧ್ಯಕ್ಷ ಎಂ.ಆರ್. ಜಯರಾಮ್ ಅವರಿಗೆ ಬೆಂಗಳೂರು ನಗರ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಕುಲಪತಿ ಲಿಂಗರಾಜ ಗಾಂಧಿ, ಕುಲಸಚಿವ ಟಿ. ಜವರೇಗೌಡ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಬೆಂಗಳೂರು: ಕೇಂದ್ರ ಶಿಕ್ಷಣ ಮಂತ್ರಾಲಯ ರಾಷ್ಟ್ರಮಟ್ಟದ 'ಉತ್ತಮ ಶಿಕ್ಷಕ' ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಜುಲೈ 15 ಕೊನೆಯ ದಿನ. ಪ್ರತಿ ಜಿಲ್ಲೆಯಿಂದ ಅರ್ಹ 50ರಿಂದ 60 ಶಿಕ್ಷಕರು ಅಗತ್ಯ ದಾಖಲೆಗಳನ್ನೊಂದಿಗೆ https://nationlawardstoteachers.education.gov.in/login.aspx ಮೂಲಕ ಅರ್ಜಿ ಸಲ್ಲಿಸಬೇಕು.

'ಉದ್ಯೋಗಿಗಳಲ್ಲ; ಉದ್ಯಮಿಗಳಾಗಿ'

ಎಂಎಂಸಿ ಕಾಲೇಜು ಘಟಿಕೋತ್ಸವದಲ್ಲಿ ಇಸ್ರೊ ಮಾಜಿ ಅಧ್ಯಕ್ಷ ಕೆ.ಶಿವನ್ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಆವಿಷ್ಕಾರದಲ್ಲಿ ವಿದ್ಯಾರ್ಥಿಗಳಿಗೆ ವಿಪುಲ ಅವಕಾಶಗಳಿವೆ. ಇದನ್ನು ಸದುಪಯೋಗಪಡಿಸಿಕೊಂಡು ಉದ್ಯಮಿಗಳಾಗಬೇಕು ಎಂದು ಇಸ್ರೊ ಮಾಜಿ ಅಧ್ಯಕ್ಷ ಕೆ.ಶಿವನ್ ಹೇಳಿದರು.

ಬನ್ನೇರುಘಟ್ಟ ರಸ್ತೆಯಲ್ಲಿರುವ ಎಂಎಂಸಿ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

ವಿಜ್ಞಾನ, ತಂತ್ರಜ್ಞಾನವು ಶರವೇಗದಲ್ಲಿ ಪ್ರಗತಿ ಸಾಧಿಸುತ್ತಿದೆ. ಯುವಕರು ಉದ್ಯೋಗಿಗಳಾಗುವ ಕನಸು ಕಾಣುವ ಬದಲು ಉದ್ಯಮಿಗಳಾಗಿ ದೇಶದ ಆರ್ಥಿಕ ಪ್ರಗತಿಗೆ ಕೊಡುಗೆ ನೀಡಬೇಕು ಎಂದರು.

'ಇಸ್ರೊದಿಂದ ಗಗನಯಾತ್ರೆ ಹಮ್ಮಿಕೊಳ್ಳಲಾಗುತ್ತಿದೆ. ಗಗನಯಾತ್ರಿಗಳನ್ನು 400 ಕಿ.ಮೀ ಎತ್ತರಕ್ಕೆ ಕೊಂಡೊಯ್ಯುವ ಯೋಜನೆ ಇದಾಗಿದೆ. ಇಸ್ರೊ 2035ರ ವೇಳೆಗೆ ಬಾಹ್ಯಾಕಾಶ ನಿಲ್ದಾಣದಂತಹ ಯೋಜನೆಗಳನ್ನು ಕೈಗೊಳ್ಳಲಿದೆ. 2040ರ ವೇಳೆಗೆ ನಮ್ಮ ವಿಜ್ಞಾನಿಗಳು ಬಾಹ್ಯಾಕಾಶಕ್ಕೆ ತೆರಳಿ ಸಂಶೋಧನೆ ನಡೆಸಲಿದ್ದಾರೆ. ಇದನ್ನೆಲ್ಲ ಸಾಧಿಸಲು ಯುವಕರ ಸಹಕಾರ ಅಗತ್ಯ' ಎಂದು ತಿಳಿಸಿದರು.

ಇಸ್ರೊ ಪ್ರೊಫೆಸರ್ ಪಿ.ಜಿ. ದಿವಾಕರ್ ಮಾತನಾಡಿ, 'ಪ್ರಸ್ತುತ ಇಸ್ರೊ ಮಾಡುತ್ತಿರುವ ಕೆಲಸವನ್ನೇ ನವೋದ್ಯಮ, ಎಂಎಸ್‌ಎಂಇ ಮತ್ತು ಇನ್‌ಕ್ಯುಬೇಷನ್ ಕೇಂದ್ರಗಳು ಮಾಡುತ್ತಿರುವುದರಿಂದ ಅವಕಾಶಗಳು ಜಾಸ್ತಿಯಾಗಿವೆ. ಪದವಿ ಬಳಿಕ ಎಲ್ಲರೂ ಇಸ್ರೊ ಸಂಸ್ಥೆಗೆ ಸೇರಬೇಕೆಂದಿಲ್ಲ. ಇದೇ ಕೆಲಸ ಮಾಡುವ ಕಂಪನಿಗಳಲ್ಲಿ ಕೆಲಸ ಪಡೆಯಬಹುದು' ಎಂದು ಹೇಳಿದರು.

ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದ 800 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಎಂಎಂಸಿ ಕಾಲೇಜು ಅಧ್ಯಕ್ಷ ಕೆ.ಆರ್.ಪರಮಹಂಸ, ಉಪಾಧ್ಯಕ್ಷೆ ಕೆ.ಗೀತಾ ಪರಮಹಂಸ, ಕಾರ್ಯಾಧ್ಯಕ್ಷ ರಾಹುಲ್ ಕಲ್ಲೂರಿ, ಶೈಕ್ಷಣಿಕ ಸಲಹೆಗಾರ ಆರ್.ನಾಗರಾಜ್, ಪ್ರಾಂಶುಪಾಲ ಕೆ.ಕುಮಾರ್ ಭಾಗವಹಿಸಿದ್ದರು.



ಬನ್ನೇರುಘಟ್ಟ ರಸ್ತೆಯಲ್ಲಿರುವ ಎಂಎಂಸಿ ಕಾಲೇಜಿನಲ್ಲಿ ಶನಿವಾರ ಘಟಿಕೋತ್ಸವ ನಡೆಯಿತು



ಪುಸ್ತಕ ಬಿಡುಗಡೆ

ನಗರದ ಪಿಇಎಸ್ ವಿಶ್ವವಿದ್ಯಾನಿಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಮಚಂದ್ರಾಪುರ ಮಠದ ಪೀಠಾಧಿಪತಿ ರಾಘವೇಶ್ವರ ಭಾರತೀ ಸ್ವಾಮೀಜಿ ಬರೆದ 'ಭಾವರಾಮಾಯಣ ರಾಮಾವತರಣ'ಕೃತಿಯನ್ನು ಮಂತ್ರಾಲಯ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ಬಿಡುಗಡೆ ಮಾಡಿದರು. ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ಶಿವರಾಜ ಪಾಟೀಲ್ ಪಾಲ್ಗೊಂಡಿದ್ದರು
–ಪ್ರಜಾವಾಣಿ ಚಿತ್ರ

ಡಿಡಿಯುಟಿಟಿಎಲ್‌ನಲ್ಲಿ ಅಕ್ರಮ ಪ್ರಕರಣ

ಶಂಕರಪ್ಪ ಜಾಮೀನು ಅರ್ಜಿ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ (ಡಿಡಿಯುಟಿಟಿಎಲ್) ನಡೆದಿದೆ ಎನ್ನಲಾದ ₹47 ಕೋಟಿ ಅಕ್ರಮ ಹಗರಣದ ಆರೋಪಿಯಾಗಿ ನ್ಯಾಯಾಂಗ ಬಂಧನದಲ್ಲಿರುವ ಡಿಡಿಯುಟಿಟಿಎಲ್‌ನ ಈ ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಎಸ್.ಶಂಕರಪ್ಪ ಅವರಿಗೆ ಜಾಮೀನು ನೀಡಲು ಸೆಷನ್ಸ್ ಕೋರ್ಟ್ ನಿರಾಕರಿಸಿದೆ.

ಈ ಕುರಿತಂತೆ ಎಸ್.ಶಂಕರಪ್ಪ ನಿಯಮಿತ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ 51ನೇ ಕೋರ್ಟ್ ನ್ಯಾಯಾಧೀಶ ಯಶವಂತ ಕುಮಾರ್ ಈ ಕುರಿತಂತೆ ಆದೇಶಿಸಿದ್ದಾರೆ.

'ಮೇಲ್ನೋಟಕ್ಕೆ ಆರೋಪಿಯ ವಿರುದ್ಧದ ಆಪಾದನೆಗಳು ಗಂಭೀರವಾಗಿವೆ. ಸಾರ್ವಜನಿಕರ ತೆರಿಗೆಯ ಬೃಹತ್ ಮೊತ್ತ ದುರ್ಬಳಕೆ ಆಗಿರುವ ಆರೋಪ ಹಾಗೂ ಇದಕ್ಕೆ ಸಂಬಂಧಿಸಿದ ತನಿಖೆ ಇನ್ನೂ ಪೂರ್ಣಗೊಂಡಿಲ್ಲ. ತನಿಖಾಧಿಕಾರಿ ಹೇಳಿಕೆ ಅನುಸಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನಷ್ಟು ದಾಖಲೆಗಳನ್ನು ಕಲೆ ಹಾಕುವ ಅಗತ್ಯವಿದೆ. ಇನ್ನೂ ಕೆಲವರು ಆರೋಪಿಗಳನ್ನು ಬಂಧಿಸಬೇಕಿದೆ. ಒಂದು ವೇಳೆ ಶಂಕರಪ್ಪ ಅವರನ್ನು ಈ ಹಂತದಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ ಸಾಕ್ಷ್ಯ ನಾಶ ಮಾಡುವ ಸಾಧ್ಯತೆಗಳಿವೆ. ಆದ್ದರಿಂದ, ಜಾಮೀನು ಕೋರಿಕೆ ಅರ್ಜಿಯನ್ನು ತಿರಸ್ಕರಿಸಲಾಗುತ್ತಿದೆ' ಎಂದು ನ್ಯಾಯಾಧೀಶರು ಆದೇಶದಲ್ಲಿ ವಿವರಿಸಿದ್ದಾರೆ.

ಪ್ರಕರಣವೇನು?: ಡಿಡಿಯುಟಿಟಿಎಲ್ ನಲ್ಲಿ 2021ರಿಂದ 2023ರ ನಡುವೆ ತುಂಡು ಗುತ್ತಿಗೆ ಹೆಸರಿನಲ್ಲಿ ನಡೆದಿದೆ ಎನ್ನಲಾದ ₹47 ಕೋಟಿ ಅಕ್ರಮದ ಬಗ್ಗೆ ಹಾಲಿ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಸಿ.ಎನ್. ಶಿವಪ್ರಕಾಶ್, ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. 2023ರ ಸೆಪ್ಟೆಂಬರ್ 23 ರಂದು ಎಫ್‌ಐಆರ್ ದಾಖಲಾಗಿತ್ತು.

ವಾರ್ತಾ ಇಲಾಖೆಯ ಉಪನಿರ್ದೇಶಕ ಹುದ್ದೆಯಿಂದ ಅಮಾನತ್ ಆಗಿರುವ, ಶಂಕರಪ್ಪ ಈ ಹಿಂದೆ ಡಿಡಿಯುಟಿಟಿಎಲ್ ಎಂ.ಡಿಯಾಗಿ ಕಾರ್ಯನಿರ್ವಹಿಸಿದ್ದರು. ಈ ವೇಳೆ ಅಕ್ರಮ ನಡೆದಿದೆ ಎಂಬ ದೂರನ್ನು ಆಧರಿಸಿ ಶಂಕರಪ್ಪ ವಿರುದ್ಧ ಭಾರತೀಯ ದಂಡ ಸಂಹಿತೆ-1860ರ ಕಲಂ 409 (ಸರ್ಕಾರಿ ನೌಕರನಿಂದ ನಡೆದಿರುವ ಅಪರಾಧಿಕ ನಂಬಿಕೆ ದ್ರೋಹ), 420 (ವಂಚನೆ), 465 (ಸುಳ್ಳು ದಾಖಲೆ ಸೃಷ್ಟಿ), 471 (ಸುಳ್ಳು ದಾಖಲೆಯನ್ನು ನೈಜ ಎಂದು ಬಳಸುವುದು), 468 (ವಂಚಿಸುವ ಉದ್ದೇಶಕ್ಕಾಗಿ ಸುಳ್ಳು ದಾಖಲೆ ಸೃಷ್ಟಿ ಯಾ ಬನಾವಟ್) ಹಾಗೂ 120-ಬಿ (ಅಪರಾಧಿಕ ಒಳಸಂಚು) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಸಿಐಡಿ ಪ್ರಕರಣದ ತನಿಖೆ ನಡೆಸುತ್ತಿದೆ.

ಬಿಎಚ್‌ಇಎಲ್–ದೀಪಾಂಜಲಿನಗರ ಜಂಕ್ಷನ್‌ನಲ್ಲಿ ವಾಹನ ದಟ್ಟಣೆಯ ಆತಂಕ; ಅಭಿವೃದ್ಧಿ ಸ್ಥಗಿತ

ಮೈಸೂರು ರಸ್ತೆಗೆ ನೈಸ್ ಲಿಂಕ್ ರಸ್ತೆ ಸಂಪರ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ಬಿಎಚ್‌ಇಎಲ್ ಜಂಕ್ಷನ್‌ನಲ್ಲಿ ನೈಸ್ ರಸ್ತೆಯ ಲಿಂಕ್ ರಸ್ತೆ ಜೋಡಣೆ ಕಾರ್ಯ ಆರಂಭವಾಗಿದೆ. ರಸ್ತೆ ವಿನ್ಯಾಸ ನಕ್ಷೆ ಹಾಗೂ ಸಂಚಾರ ದಟ್ಟಣೆ ನಿಯಂತ್ರಣದ ವಿಷಯವಾಗಿ ಬಿಬಿಎಂಪಿ ಅಧಿಕಾರಿಗಳು ಹಾಗೂ ಸಂಚಾರ ಪೊಲೀಸರು ಪರಿಶೀಲನೆ ಆರಂಭಿಸಿದ್ದಾರೆ.

ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಲಿಂಕ್ ರಸ್ತೆಯ ಕಾಮಗಾರಿಗೆ ನೈಸ್ ಸಂಸ್ಥೆ ಕಳೆದವಾರ ಚಾಲನೆ ನೀಡಿದೆ. ನ್ಯಾಯಾಲಯದಲ್ಲಿ ಕಾಮಗಾರಿಗೆ ಅನುಮತಿ ಸಿಕ್ಕಿರುವುದರಿಂದ ಕಾಮಗಾರಿ ಆರಂಭಿಸಲಾಗಿದೆ. ನೈಸ್ ಲಿಂಕ್ ರಸ್ತೆ ಇಲ್ಲಿ ತೆರೆದುಕೊಂಡರೆ, ವಾಹನ ಸಂಚಾರ ಹೆಚ್ಚಾಗುತ್ತದೆ. ದಟ್ಟಣೆಯ ಸಮಸ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಹೀಗಾಗಿ, ಬಿಎಚ್‌ಇಎಲ್ ಜಂಕ್ಷನ್‌ನಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಯನ್ನು ಬಿಬಿಎಂಪಿ ಸದ್ಯಕ್ಕೆ ಸ್ಥಗಿತಗೊಳಿಸಿದೆ.

ಬಿಎಚ್‌ಇಎಲ್ ಜಂಕ್ಷನ್‌ನಲ್ಲಿ ಈಗಾಗಲೇ ನಿತ್ಯವೂ ಬೆಳಿಗ್ಗೆ 9ರಿಂದ ರಾತ್ರಿ 11ರವರೆಗೂ ವಾಹನ ದಟ್ಟಣೆ ಉಂಟಾಗುತ್ತಿದೆ. ಇನ್ನು ನೈಸ್ ಲಿಂಕ್ ರಸ್ತೆಯೂ ಇಲ್ಲಿ ತೆರೆದುಕೊಂಡು, ವಾಹನಗಳ ಆಗಮನ–ನಿರ್ಗಮನಕ್ಕೆ ಅನುವಾದರೆ ಜಂಕ್ಷನ್‌ನಲ್ಲಿ ವಾಹನದಟ್ಟಣೆ ಅತಿಯಾಗುತ್ತದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.



ಮೈಸೂರು ರಸ್ತೆಯ ಬಿಎಚ್‌ಇಎಲ್ ಜಂಕ್ಷನ್ ಸಮೀಪ ನೈಸ್ ಲಿಂಕ್ ರಸ್ತೆ ಕಾಮಗಾರಿ ನಡೆಯುತ್ತಿದೆ –ಪ್ರಜಾವಾಣಿ ಚಿತ್ರ

ಬಿಬಿಎಂಪಿ ಬಿಎಚ್‌ಇಎಲ್ ಜಂಕ್ಷನ್ ಅಭಿವೃದ್ಧಿ ಕಾಮಗಾರಿಯನ್ನು ನಡೆಸುತ್ತಿದ್ದು, ಇದರಿಂದ ರಸ್ತೆ ವಿಸ್ತೀರ್ಣ ಒಂದಷ್ಟು ಕಡಿಮೆಯಾಗಿದೆ. ನೈಸ್ ರಸ್ತೆಯೂ ಬಂದರೆ ಸಮಸ್ಯೆಯಾಗುತ್ತದೆ ಎಂಬುದನ್ನು ಅರಿತಿರುವ ಪಾಲಿಕೆ ಎಂಜಿನಿಯರ್‌ಗಳು, ಈ ಬಗ್ಗೆ ಕ್ರಮ ಕೈಗೊಳ್ಳಲು ರಸ್ತೆ ಮೂಲಸೌಕರ್ಯದ ಮುಖ್ಯ ಎಂಜಿನಿಯರ್‌ಗೆ ಮನವಿ ಮಾಡಿಕೊಂಡಿದ್ದಾರೆ. ಜಂಕ್ಷನ್ ಮಧ್ಯಭಾಗದಲ್ಲಿ ಕಾರ್ಯನಿರ್ವಹಿಸದಂತೆ ಸೂಚನೆ ಬಂದಿದೆ. ಹೀಗಾಗಿ ಬಿಬಿಎಂಪಿ ಕಾಮಗಾರಿಯನ್ನು ಬಹುತೇಕ ಸ್ಥಗಿತಗೊಳಿಸಿದೆ.

ದಟ್ಟಣೆಯಾಗದಂತೆ ಕ್ರಮ: ಅನುಚೇತ್

‘ಮೈಸೂರು ರಸ್ತೆಗೆ ನೈಸ್ ಲಿಂಕ್ ರಸ್ತೆಯನ್ನು ಇನ್ನೂ ಜೋಡಣೆ ಮಾಡಿಲ್ಲ, ಕಾಮಗಾರಿ ನಡೆಯುತ್ತಿದೆ. ವಾಹನ ಸಂಚಾರ ದಟ್ಟಣೆ ಉಂಟಾಗದಂತೆ ಕ್ರಮ ಕೈಗೊಳ್ಳಲಾಗುತ್ತದೆ. ಮೈಸೂರು ರಸ್ತೆಯಲ್ಲಿ ವಾಹನ ದಟ್ಟಣೆ ನಿಯಂತ್ರಿಸಿ, ಸುಗಮ ಸಂಚಾರಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದು ನಗರ ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ಹೇಳಿದರು.

ನಾಯಂಡಹಳ್ಳಿ ಕಡೆಯಿಂದ ಮೈಸೂರು ರಸ್ತೆಯಲ್ಲಿ ಬಿಎಚ್‌ಇಎಲ್ ಜಂಕ್ಷನ್ ಮೂಲಕ ಮೇಲ್ಸೇತುವೆಯಿಂದ ಗಾಳಿ ಆಂಜನೇಯ ದೇವಸ್ಥಾನದವರೆಗೆ ಏಕಮುಖ ಸಂಚಾರವಿದೆ. ಗಾಳಿ ಆಂಜನೇಯ ದೇವಸ್ಥಾನದಿಂದ ಬಿಎಚ್‌ಇಎಲ್ ಜಂಕ್ಷನ್‌ವರೆಗೂ ಏಕಮುಖ ಸಂಚಾರವಿದೆ. ಆದರೆ, ದೀಪಾಂಜಲಿ ನಗರದ ಕಡೆಗೆ ಹೋಗುವಾಗ ಎರಡೂ ಬದಿಯ ವಾಹನಗಳು ಜಂಕ್ಷನ್‌ನಲ್ಲಿ ಒಂದೆಡೆ ಸೇರುವುದರಿಂದ ಇಲ್ಲಿ ಅತಿಹೆಚ್ಚಿನ ದಟ್ಟಣೆ ಉಂಟಾಗುತ್ತಿದೆ. ಅಲ್ಲದೆ, ಮೈಸೂರು ರಸ್ತೆ ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿ ಉಂಟಾಗುವ ವಾಹನ ದಟ್ಟಣೆಯಿಂದ ಎರಡೂ ಏಕಮುಖ ರಸ್ತೆಗಳಲ್ಲಿ ವಾಹನಗಳು ನಿಲ್ಲುತ್ತಿವೆ. ಜಂಕ್ಷನ್ ಅಭಿವೃದ್ಧಿ ಆರಂಭವಾದ ನಂತರ ಸಮಸ್ಯೆ ಇನ್ನೂ ಹೆಚ್ಚಾಗಿತ್ತು. ಇದನ್ನು ನಿಯಂತ್ರಿಸಲು ಸಂಚಾರ ಪೊಲೀಸರನ್ನು ನಿಯೋಜಿಸಲಾಗಿದೆ.

ಬಿಎಚ್‌ಇಎಲ್ ಜಂಕ್ಷನ್‌ನಲ್ಲೇ ನೈಸ್ ಲಿಂಕ್ ರಸ್ತೆ ಆರಂಭವಾದರೆ ಉಲ್ಬಣಿಸುವ ಸಮಸ್ಯೆಯನ್ನು ನಿಯಂತ್ರಿಸುವ ಬಗ್ಗೆ ಬಿಬಿಎಂಪಿ ಹಾಗೂ ಪೊಲೀಸರು ಯೋಜನೆ ರೂಪಿಸುತ್ತಿದ್ದಾರೆ.

ಕ್ರಮವಿಲ್ಲ: ‘ಬಿಎಚ್‌ಇಎಲ್ ಜಂಕ್ಷನ್, ಗಾಳಿ ಆಂಜನೇಯ ದೇವಸ್ಥಾನ, ಸ್ಯಾಟಲೈಟ್ ಬಸ್ ನಿಲ್ದಾಣ ಬಳಿ ನಿತ್ಯವೂ ವಾಹನ ದಟ್ಟಣೆ ಉಂಟಾಗುತ್ತಲೇ ಇದೆ. ಸಂಚಾರ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ. ದೀಪಾಂಜಲಿನಗರ ನಮ್ಮ ಮೆಟ್ರೊ ನಿಲ್ದಾಣ ಕೆಳಭಾಗದಲ್ಲಿ ರಸ್ತೆ ಕಿರಿದಾಗಿದ್ದು, ಹಾಳಾಗಿದೆ. ಇದರಿಂದ ಸಮಸ್ಯೆಗಳು ಹೆಚ್ಚಾಗಿವೆ’ ಎಂದು ವಾಹನ ಸವಾರ ಜಗದೀಶ್ ದೂರಿದರು.

‘ತುರ್ತು ಪರಿಸ್ಥಿತಿ ದಿನಗಳನ್ನು ನೆನಪಿನಲ್ಲಿಡಬೇಕು’

ನವದೆಹಲಿ (ಪಿಟಿಐ): ‘ಪ್ರಜಾಸತ್ತಾತ್ಮಕ ವ್ಯವಸ್ಥೆ ಮತ್ತು ಹಕ್ಕುಗಳನ್ನು ಅಪಾಯಕ್ಕೆ ತಳ್ಳಿದ್ದ ಸಂದರ್ಭದ ಸೃಷ್ಟಿಗೆ ಕಾರಣವಾದ ‘ಜನರು’, ಅವರ ಒಲವು ಮತ್ತು ಅದಕ್ಕೆ ಕಾರಣಗಳನ್ನು ತಿಳಿಯಲು 1975ರಲ್ಲಿ ಹೇರಲಾದ ತುರ್ತು ಪರಿಸ್ಥಿತಿಯ ದಿನಗಳನ್ನು ಸದಾ ನೆನಪಿನಲ್ಲಿಡಬೇಕು’ ಎಂದು ಆರ್‌ಎಸ್‌ಎಸ್‌ನ ಹಿರಿಯ ಮುಖಂಡ ಸುನಿಲ್ ಅಂಬೇಕರ್ ಹೇಳಿದರು.

ಆಗ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷವನ್ನು ಪರೋಕ್ಷವಾಗಿ ಉಲ್ಲೇಖಿಸಿ, ‘ಭಾರತ ಸ್ವತಂತ್ರ ಗಣರಾಜ್ಯವಾದ 25 ವರ್ಷಗಳ ಒಳಗೆ ತುರ್ತು ಪರಿಸ್ಥಿತಿಯನ್ನು ಹೇರಲಾಯಿತು. ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಅಪಾಯಕ್ಕೆ ದೂಡಲಾಯಿತು’ ಎಂದು ಹೇಳಿದರು.

‘ಈ ಬೆದರಿಕೆ ವಿದೇಶದಿಂದ ಬಂದಿದ್ದಲ್ಲ; ನಮ್ಮದೇ ರಾಜಕೀಯ ವ್ಯವಸ್ಥೆಯಿಂದ ಬಂದೊದಗಿತ್ತು’ ಎಂದರು.

ಆರ್‌ಎಸ್‌ಎಸ್ ಅಂಗಸಂಸ್ಥೆ ಇಂದ್ರಪ್ರಸ್ಥ ವಿಶ್ವ ಸಂವಾದ ಕೇಂದ್ರದಲ್ಲಿ ಆಯೋಜಿಸಿದ್ದ ಸಮಾರಂಭವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಹಾಲಿನ ದರ ಇಳಿಕೆಗೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲಿನ ದರ ಏರಿಕೆ ಹಿಂಪಡೆಯುವಂತೆ ಆಗ್ರಹಿಸಿ ಬಿಜೆಪಿ ರೈತ ಮೋರ್ಚಾ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು. ಪ್ರತಿಭಟನಾ ಸ್ಥಳದಲ್ಲೇ ಹಾಲು ಕಾಯಿಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಎನ್. ರವಿಕುಮಾರ್, ‘ಹಾಲಿನ ದರ ಏರಿಕೆಯಿಂದ ಗ್ರಾಹಕರಿಗೆ ಹೊರೆಯಾಗಿದೆ. ಇದರಿಂದ ರೈತರಿಗೂ ಅನುಕೂಲ ಆಗಿಲ್ಲ. ದರ ಏರಿಕೆಯ ಮೂಲಕ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ಜನರ ಮೇಲೆ ಬರೆ ಎಳೆದಿದೆ’ ಎಂದು ಟೀಕಿಸಿದರು.

‘ಈ ಸರ್ಕಾರ ಕಿಸಾನ್ ಸಮ್ಮಾನ್ ಯೋಜನೆಯನ್ನು ಸ್ಥಗಿತಗೊಳಿಸಿದೆ. ಹಾಲಿನ ಪ್ರೋತ್ಸಾಹ ಧನವನ್ನೂ ಎಂಟು ತಿಂಗಳಿಂದ ರೈತರಿಗೆ ಪಾವತಿಸಿಲ್ಲ. ರೈತರ ನೆರವಿಗೆ ಬಾರದ ಸರ್ಕಾರ, ಅವರ ಹೆಸರಿನಲ್ಲಿ ದರ ಹೆಚ್ಚಿಸುವುದು ಯಾವ ನ್ಯಾಯ’ ಎಂದು ಕೇಳಿದರು.

ಬಿಜೆಪಿ ರೈತ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿ ಮಾತನಾಡಿ, ‘ಹಾಲಿನ ದರ ಏರಿಕೆ ವಿಚಾರದಲ್ಲಿ ರಾಜ್ಯ ಸರ್ಕಾರ ಮೊಂಡು ವಾದ ಬಿಡಬೇಕು. ತಕ್ಷಣವೇ ದರ ಹೆಚ್ಚಳ ಹಿಂಪಡೆಯಬೇಕು’ ಎಂದು ಆಗ್ರಹಿಸಿದರು.

ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಸಪ್ತಗಿರಿ ಗೌಡ, ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಕೆ. ರಾಮಮೂರ್ತಿ, ಪಕ್ಷದ ಪದಾಧಿಕಾರಿಗಳು, ಮೋರ್ಚಾದ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಹಾಲಿನ ದರ ಇಳಿಕೆ ಮಾಡುವಂತೆ ಆಗ್ರಹಿಸಿ ಬಿಜೆಪಿ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು. ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರೈತ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿ, ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಸೇರಿದಂತೆ ಪಕ್ಷದ ಮುಖಂಡರು ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಆರೋಪಿಗಳ ನಂಟಿನ ತನಿಖೆ

ತುಮಕೂರು– ಬೆಂಗಳೂರಿನಲ್ಲಿ ಮಕ್ಕಳ ಮಾರಾಟ ಜಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು ಹಾಗೂ ಬೆಂಗಳೂರಿನಲ್ಲಿ ಮಕ್ಕಳ ಮಾರಾಟ ಜಾಲದಲ್ಲಿ ಬಂಧಿತ ಆರೋಪಿಗಳ ನಡುವೆ ಪರಸ್ಪರ ನಂಟಿತ್ತೇ ಎಂಬುದನ್ನು ಪತ್ತೆ ಹಚ್ಚಲು ಸಿಐಡಿ ಪೊಲೀಸರು ತನಿಖೆಗೆ ಮುಂದಾಗಿದ್ದಾರೆ.

ತುಮಕೂರು ಜಿಲ್ಲೆಯಲ್ಲಿ ಮಕ್ಕಳ ಕಳ್ಳತನ, ಮಾರಾಟ ಜಾಲ ಸಕ್ರಿಯವಾಗಿದ್ದು ಕಳೆದ ವಾರ ಐದು ಮಕ್ಕಳನ್ನು ರಕ್ಷಿಸಿ, ಆರೋಗ್ಯ ಇಲಾಖೆಯ ಫಾರ್ಮಾಸಿಸ್ಟ್, ಇಬ್ಬರು ಸ್ಟಾಫ್ ನರ್ಸ್ ಸೇರಿದಂತೆ 7 ಮಂದಿಯನ್ನು ಪೊಲೀಸರು ಬಂಧಿಸಿದ್ದರು.

ಕಳೆದ ನವೆಂಬರ್‌ನಲ್ಲಿ ಕರ್ನಾಟಕ ಹಾಗೂ ತಮಿಳುನಾಡಿನಲ್ಲಿ ಸಕ್ರಿಯವಾಗಿದ್ದ ಹಸುಗೂಸುಗಳ ಮಾರಾಟ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿ 10 ಮಂದಿಯನ್ನು ಬಂಧಿಸಿದ್ದರು. ಈ ಎರಡು ತಂಡಗಳ ನಡುವೆ ನಂಟಿನ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಸಿಐಡಿ ಪೊಲೀಸರು ಹೇಳಿದರು.

‘ಬೆಂಗಳೂರಿನಲ್ಲಿ ಬಂಧಿಸಿದ್ದ ಆರೋಪಿಗಳು ತಮಿಳುನಾಡಿನ ಕೆಲವು ಆಸ್ಪತ್ರೆಗಳ ವೈದ್ಯರ ಜೊತೆಗೆ ಸಂಪರ್ಕ ಹೊಂದಿದ್ದರು. ಹಣದ ಅವಶ್ಯವಿರುವ ಮಹಿಳೆಯರನ್ನು ಪತ್ತೆ ಮಾಡುತ್ತಿದ್ದರು. ಅವರಿಗೆ ಕೃತಕ ಗರ್ಭಧಾರಣೆಗೆ ಒಳಗಾಗುವಂತೆ ಮನವೊಲಿಸುತ್ತಿದ್ದರು. ಕೃತಕ ಗರ್ಭಧಾರಣೆಗೆ ಒಳಗಾದ ಮಹಿಳೆಯರಿಗೆ ಹಣ ನೀಡುತ್ತಿದ್ದರು. ಗರ್ಭಿಣಿಯರಿಗೆ ಆರೋಪಿಗಳೇ ಆರೈಕೆ ಮಾಡುತ್ತಿದ್ದರು. ನಂತರ, ₹8ರಿಂದ ₹10 ಲಕ್ಷಕ್ಕೆ ಮಕ್ಕಳನ್ನು ಮಾರಾಟ ಮಾಡುತ್ತಿದ್ದರು’ ಎಂದು ತನಿಖೆಯಿಂದ ಗೊತ್ತಾಗಿತ್ತು.

ತುಮಕೂರಿನಲ್ಲಿ ಬಂಧಿತ ಆರೋಪಿಗಳು, ವಿವಾಹಿತ ಮಹಿಳೆಗೆ ಜನಿಸಿದ ಮಗುವನ್ನು ಪಡೆದುಕೊಂಡು ಅದನ್ನು ಮಧ್ಯವರ್ತಿಗಳ ಮೂಲಕ ₹2 ಲಕ್ಷದಿಂದ ₹3 ಲಕ್ಷದವರೆಗೂ ಮಾರಾಟ ಮಾಡುತ್ತಿದ್ದರು. ಈ ಎರಡು ತಂಡಗಳ ನಡುವೆ ಸಂಪರ್ಕವಿತ್ತೇ ಎಂಬುದನ್ನು ಪತ್ತೆ ಹಚ್ಚಲು ಸ್ಥಳೀಯ ಪೊಲೀಸರಿಂದ ಮಾಹಿತಿ ಪಡೆದುಕೊಳ್ಳಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಪೋಷಕರ ವಿರುದ್ಧ ಪ್ರಕರಣ: ಮಕ್ಕಳ ಕಳ್ಳ ಸಾಗಣೆ ಮಾಡುತ್ತಿದ್ದ ಆರೋಪಿಗಳಿಂದ ಮಕ್ಕಳನ್ನು ಅಕ್ರಮವಾಗಿ ಖರೀದಿಸಿದ್ದ ಆರೋಪದ ಮೇಲೆ ಪೋಷಕರ ವಿರುದ್ಧ ಸಿಐಡಿ ಪೊಲೀಸ್ ಠಾಣೆಯಲ್ಲಿ ಇದುವರೆಗೂ ಐದು ಪ್ರಕರಣಗಳು ದಾಖಲಾಗಿವೆ. ಕಳೆದ ನವೆಂಬರ್‌ನಲ್ಲಿ ಆರೋಪಿಗಳಿಂದ ಪೋಷಕರು ಮಕ್ಕಳನ್ನು ಖರೀದಿಸಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿತ್ತು.

‘ಮಕ್ಕಳ ಮೂಲ ಪೋಷಕರನ್ನು ವಿಚಾರಣೆ ನಡೆಸಲಾಗಿದೆ. ಮಕ್ಕಳನ್ನು ಖರೀದಿಸಿದ ಪೋಷಕರು, ಮಕ್ಕಳನ್ನು ಚೆನ್ನಾಗಿ ಆರೈಕೆ ಮಾಡುತ್ತಿದ್ದಾರೆ. ಹೀಗಾಗಿ ಪ್ರಕರಣದ ತನಿಖೆಯನ್ನು ಹೇಗೆ ನಡೆಸುವುದು ಎಂದು ಮಕ್ಕಳ ಕಲ್ಯಾಣ ಸಮಿತಿಯ ಸಲಹೆಯನ್ನು ಸಿಐಡಿ ಕೇಳಿದೆ. ಕಾನೂನು ಬದ್ಧವಾಗಿ ಮಕ್ಕಳನ್ನು ದತ್ತು ಪಡೆಯುವುದಕ್ಕೆ ಅವಕಾಶವಿದೆ. ಆದರೆ, ಮಕ್ಕಳ ಕಳ್ಳ ಸಾಗಣೆ ಮಾಡುವ ಆರೋಪಿಗಳಿಂದ ಖರೀದಿಸುವುದು ಅಪರಾಧ ಎಂದು ಸಮಿತಿ ತಿಳಿಸಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಆದಾಯ ಸಂಗ್ರಹ: ಸಲಹೆಗೆ ತಜ್ಞರ ಸಮಿತಿ

ನವದೆಹಲಿ: ಕರ್ನಾಟಕ ಸರ್ಕಾರದ ಆದಾಯ ಕ್ರೋಡೀಕರಣ ಸುಧಾರಿಸಲು ಸಲಹೆ ನೀಡಲು ಅರ್ಥಶಾಸ್ತ್ರಜ್ಞರನ್ನು ಒಳಗೊಂಡ ತಜ್ಞರ ಸಮಿತಿ ರಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಹೇಳಿದರು.

ಕೇಂದ್ರ ಸಚಿವರ ಭೇಟಿಗಾಗಿ ದೆಹಲಿಗೆ ಬಂದಿರುವ ಸಿದ್ದರಾಮಯ್ಯ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ‘ಆದಾಯ ಸುಧಾರಿಸಲು ಮತ್ತು ವ್ಯರ್ಥ ವೆಚ್ಚ ಕಡಿಮೆ ಮಾಡಲು ಹೊಸ ಮಾರ್ಗಗಳನ್ನು ಸೂಚಿಸಲು ಸಮಿತಿಯನ್ನು ಕೇಳಲಾಗುವುದು’ ಎಂದು ಅವರು ತಿಳಿಸಿದರು.



ಬಸವನಗುಡಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ‘ಪ್ಲಾಸ್ಟಿಕ್ ಚೀಲಗಳನ್ನು ಬಳಸಬೇಡಿ, ಬಟ್ಟೆ ಚೀಲಗಳನ್ನು ಬಳಸಿ’ ಅಭಿಯಾನಕ್ಕೆ ಬಿಬಿಎಂಪಿ ದಕ್ಷಿಣ ವಲಯದ ವಿಶೇಷ ಆಯುಕ್ತರಾದ ವಿನೋತ್ ಪ್ರಿಯಾ ಅವರು ಶನಿವಾರ ಚಾಲನೆ ನೀಡಿದರು. ಸಂಘದ ಅಧ್ಯಕ್ಷ ಕೆ.ಎನ್. ರಾಜು, ಕಾರ್ಯದರ್ಶಿ ವಿ.ಜೆ. ಪ್ರಸಾದ್ ಹಾಗೂ ಉಪಾಧ್ಯಕ್ಷ ಬಿ.ಎಸ್. ಮನೋಹರ್ ಉಪಸ್ಥಿತರಿದ್ದರು

‘ಅತ್ಯುತ್ತಮ ಪೊಲೀಸ್ ವ್ಯವಸ್ಥೆ’

ಸೇವೆಯಿಂದ ಡಿಜಿಪಿ ಕಮಲ್ ಪಂತ್ ನಿವೃತ್ತಿ, ಬೀಳ್ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ರಾಜ್ಯದಲ್ಲಿ ಅತ್ಯುತ್ತಮ ಪೊಲೀಸ್ ವ್ಯವಸ್ಥೆಯಿದ್ದು, ಇಲಾಖೆಯಲ್ಲಿ ಸೌಜನ್ಯವಿದೆ. ಇಂತಹ ಇಲಾಖೆಯಲ್ಲಿ 30 ವರ್ಷ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿದ್ದೇ ನನ್ನ ಪುಣ್ಯ’ ಎಂದು ನಿವೃತ್ತರಾದ ರಾಜ್ಯ ಅಗ್ನಿಶಾಮಕ ದಳದ ಡಿಜಿಪಿ ಕಮಲ್ ಪಂತ್ ಅವರು ಅಭಿಪ್ರಾಯಪಟ್ಟರು.

ನಗರದ ಕೋರಮಂಗಲದ ಕೆಎಸ್‌ಆರ್‌ಪಿ ಪರೇಡ್ ಮೈದಾನದಲ್ಲಿ ಶನಿವಾರ ನಡೆದ ವಿಶೇಷ ಕವಾಯತು ಹಾಗೂ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಬೇರೆ ರಾಜ್ಯಗಳ ಪೊಲೀಸ್ ಇಲಾಖೆಯನ್ನೂ ನಾನು ಹತ್ತಿರದಿಂದ ಗಮನಿಸಿದ್ದೇನೆ. ಇಲ್ಲಿರುವಷ್ಟು ಉತ್ತಮ ವ್ಯವಸ್ಥೆ ಬೇರೆ ಯಾವ ರಾಜ್ಯಗಳಲ್ಲೂ ಇಲ್ಲ. 1990ರ ಸಂದರ್ಭದಲ್ಲಿ ಬೇರೆ ರೀತಿಯ ಸಮಸ್ಯೆಗಳನ್ನು ಸಮಾಜ ಎದುರಿಸುತ್ತಿತ್ತು. ಈಗ ಬೇರೆ ಸಮಸ್ಯೆ, ಸವಾಲುಗಳಿವೆ. ಇಲಾಖೆಗೆ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಬರುತ್ತಿರುವುದು ಉತ್ತಮ ಬೆಳವಣಿಗೆ’ ಎಂದು ಹೇಳಿದರು.

‘ಪ್ರತಿಯೊಬ್ಬರಿಗೆ ಒಂದು ಸಿದ್ಧಾಂತ ಇರುತ್ತದೆ. ನ್ಯಾಯವನ್ನು ಎತ್ತಿ ಹಿಡಿಯುವ ಸಿದ್ಧಾಂತದ ಅಡಿ ನಾನು ಕೆಲಸ ಮಾಡಿದ್ದೇನೆ. ಯಾವಾಗಲೂ ನ್ಯಾಯ ಕಾಪಾಡಬೇಕು’ ಎಂದು ಹೇಳಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಸೇರಿದಂತೆ ಹಲವು ಅಧಿಕಾರಿಗಳು ಹಾಜರಿದ್ದರು.



ಸೇವೆಯಿಂದ ನಿವೃತ್ತರಾದ ಕಮಲ್ ಪಂತ್ (ಎಡದಿಂದ ಮೂರನೆಯವರು) ಅವರಿಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ (ಎಡದಿಂದ ಎರಡನೆಯರು) ಅವರು ಸ್ಮರಣಿಕೆ ನೀಡಿ ಗೌರವಿಸಿದರು

ಹಾರ್ನ್ ವಿಚಾರಕ್ಕೆ ಕಾರು ಚಾಲಕನಿಗೆ ನಿಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಜಾಪುರ ಮುಖ್ಯರಸ್ತೆಯಲ್ಲಿ ಹಾರ್ನ್ ವಿಚಾರಕ್ಕೆ ಬೈಕ್ ಸವಾರ ಹಾಗೂ ಕಾರು ಚಾಲಕನ ನಡುವೆ ಗಲಾಟೆ ನಡೆದಿದೆ.

‘ಸರ್ಜಾಪುರ ಮುಖ್ಯರಸ್ತೆಯಲ್ಲಿ ಕಾರು ಚಾಲಕ ತೆರಳುತ್ತಿದ್ದರು. ಸಿಗ್ನಲ್‌ನಲ್ಲಿ ಕೆಂಪು ದೀಪ ಕಂಡಿದ್ದರಿಂದ ವಾಹನಗಳ ನಿಲುಗಡೆ ಮಾಡಿದ್ದರು. ಅದೇ ವೇಳೆ ಬೈಕ್ ಸವಾರ ಕಾರಿನ ಮುಂಭಾಗ ಬಂದು ನಿಂತಿದ್ದಾನೆ. ಕೆಲ ಕ್ಷಣಗಳ ಬಳಿಕ ಟ್ರಾಫಿಕ್ ಸಿಗ್ನಲ್‌ನಲ್ಲಿ ಹಳದಿ ದೀಪ ಬಿದ್ದಿದ್ದರಿಂದ ಎಲ್ಲ ವಾಹನ ಮುಂದಕ್ಕೆ ಸಾಗಿವೆ. ಆಗ ಕಾರು ಚಾಲಕ ಕೂಡ ಮುಂದೆ ಚಲಾಯಿಸಲು ಹಾರ್ನ್ ಮಾಡಿದ್ದಾನೆ. ಅಷ್ಟಕ್ಕೆ ಕೋಪಗೊಂಡ ಬೈಕ್ ಸವಾರ ಬೈಕ್‌ನಿಂದ ಇಳಿದು ಕಾರು ಚಾಲಕನಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ ಎನ್ನಲಾಗಿದೆ.

ಈ ದೃಶ್ಯಗಳು ಕಾರಿನಲ್ಲಿದ್ದ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಈ ವಿಡಿಯೊಗಳು ವೈರಲ್ ಆಗಿವೆ. ಬೈಕ್ ಸವಾರನನ್ನು ರಿಂಕು ಎಂದು ಗುರುತಿಸಲಾಗಿದೆ. ಆದರೆ, ಇದುವರೆಗೂ ದೂರು ದಾಖಲಾಗಿಲ್ಲ’ ಎಂದು ಪೊಲೀಸರು ಮಾಹಿತಿ ನೀಡಿದರು.

ನಗರದಲ್ಲಿ ಇಂದು


ಸಂಘ ದಿನಾಚರಣೆ, ಹೊಯ್ಸಳ ಮಾಲೆ ಪುಸ್ತಕ ಬಿಡುಗಡೆ: ಅತಿಥಿಗಳು: ಎಂ.ಎನ್. ವೆಂಕಟಾಚಲಯ್ಯ, ತೇಜಸ್ವಿ ಸೂರ್ಯ, ಸಿ.ಕೆ. ರಾಮಮೂರ್ತಿ, ಉದಯ್ ಬಿ. ಗರುಡಾಚಾರ್, ರವಿ ಸುಬ್ರಮಣ್ಯ, ಅಧ್ಯಕ್ಷತೆ: ಎಚ್.ವಿ. ಸತ್ಯನಾರಾಯಣ, ಆಯೋಜನೆ: ಹೊಯ್ಸಳ ಕರ್ನಾಟಕ ಸಂಘ, ಸ್ಥಳ: ಚಾಮರಾಜು ಕಲ್ಯಾಣ ಮಂದಿರ, ಜಯನಗರ 3ನೇ ಬ್ಲಾಕ್, ಬೆಳಿಗ್ಗೆ 10

‘ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿಗಳ ಸಾರಸ್ವತ ಯೋಗದಾನ’ದ ಕುರಿತು ವಿಚಾರಗೋಷ್ಠಿ, ಗೌರವ ಸಮರ್ಪಣೆ: ಉದ್ಘಾಟನೆ: ಶತಾವಧಾನಿ ಆರ್. ಗಣೇಶ್, ಅತಿಥಿಗಳು: ಪಾದೇಕಲ್ಲು ವಿಷ್ಣು ಭಟ್ಟ, ಕೆ.ಜಿ. ನಾರಾಯಣ ಪ್ರಸಾದ್, ಆಯೋಜನೆ: ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಸ್ಥಳ: ಡಿವಿಜಿ ಸಭಾಂಗಣ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಎನ್.ಆರ್. ಕಾಲೊನಿ, ಬೆಳಿಗ್ಗೆ 10ರಿಂದ

‘ಪಾರ್ವತೀಸುತರ ಸಂಸ್ಮರಣೆ, ಸವಿ ಸವಿ ನೆನಪು’ ಗೀತ ನೃತ್ಯ ನಾಟಕಗಳ ಮಾಧುರ್ಯ ಮಿಲನ: ಅಧ್ಯಕ್ಷತೆ: ವಿಜಯ್ ಹಾವನೂರ್, ಅತಿಥಿಗಳು: ಶಂಕರ್ ಶಾನಭಾಗ್, ಲಹರಿ ವೇಲು, ಗೀತಾ ಸತ್ಯಮೂರ್ತಿ, ಗಾಯಿತ್ರಿ ಕೇಶವಮೂರ್ತಿ, ವಿಷ್ಣು ರಾಮನ್, ಆಯೋಜನೆ: ಎ. ಜೀಸ್ ಕಲಾಶ್ರೀ ಪಬ್ಲಿಕ್ ಚಾರಿಟಬಲ್ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10


‘ವಿಎಸ್‌ಕೆ ಮಾಧ್ಯಮ ಪ್ರಶಸ್ತಿ’ಗಳ ಪ್ರದಾನ: ಪ್ರಶಸ್ತಿ ಪುರಸ್ಕೃತರು: ಸುದರ್ಶನ್ ಚನ್ನಂಗಿಹಳ್ಳಿ (ತಿ.ತಾ. ಶರ್ಮ ಪತ್ರಿಕೋದ್ಯಮ ಪ್ರಶಸ್ತಿ), ಅಜಿತ್ ಹನಮಕ್ಕನವರ್ (ಚಂದ್ರಶೇಖರ ಭಂಡಾರಿ ಪತ್ರಿಕೋದ್ಯಮ ಪ್ರಶಸ್ತಿ), ಶೋಭಾ ಎಚ್.ಜಿ (ಬೆ.ಸು.ನಾ ಮಲ್ಯ ಪತ್ರಿಕೋದ್ಯಮ ಪ್ರಶಸ್ತಿ), ಪ್ರೇಮಶೇಖರ (ಹೊ.ವೆ. ಶೇಷಾದ್ರಿ ಅಂಕಣಕಾರ ಪ್ರಶಸ್ತಿ), ಪೂರ್ವಿ ಜಯರಾಜ್ (ವಿಎಸ್‌ಕೆ ಡಿಜಿಟಲ್ ಮಾಧ್ಯಮ ಪ್ರಶಸ್ತಿ), ಅತಿಥಿಗಳು: ಪ್ರಫುಲ್ಲ ಕೇತ್ಕರ್, ಪಿ. ವಾಮನ್ ಶೆಣೈ, ಆಯೋಜನೆ: ವಿಶ್ವ ಸಂವಾದ ಕೇಂದ್ರ, ಸ್ಥಳ: ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

ವರ್ಷದ ಲೇಖಕಿ ‘ಅಂಕಿತ ಪುಸ್ತಕ ಪುರಸ್ಕಾರ’ ಪ್ರದಾನ: ಬರಗೂರು ರಾಮಚಂದ್ರಪ್ಪ, ಪ್ರಶಸ್ತಿ ಪುರಸ್ಕೃತರು: ಬಾನು ಮುಷ್ತಾಕ್, ಡಾ.ಎಚ್.ಎಸ್. ಅನುಪಮಾ, ಪ್ರತಿಭಾ ನಂದಕುಮಾರ್, ಅಭಿನಂದನಾ ನುಡಿ: ಸಂಧ್ಯಾ ಹೆಗಡೆ ದೊಡ್ಡಹೊಂಡ, ಉಪಸ್ಥಿತಿ: ಪ್ರಕಾಶ್ ಕಂಬತ್ತಹಳ್ಳಿ, ಅಧ್ಯಕ್ಷತೆ: ಎಚ್.ಎಲ್. ಪುಷ್ಪ, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30



ಬರಗೂರು ರಾಮಚಂದ್ರಪ್ಪ

ಮೈಸೂರು: 'ಲೋಕಸಭೆ ಚುನಾವಣೆಯಲ್ಲಿ ದೇಶದ ಮತದಾರರು ಕೋಮುವಾದ ಹಾಗೂ ಜಾತಿವಾದದ ವಿರುದ್ಧ ಮತ ಚಲಾಯಿಸಿದ್ದಾರೆ' ಎಂದು ಉದ್ಯಮಿ ಕ್ಯಾ. ಜಿ.ಆರ್. ಗೋಪಿನಾಥ್ ಶನಿವಾರ ಇಲ್ಲಿ ಪ್ರತಿಪಾದಿಸಿದರು.

ಮೈಸೂರು ಓಪನ್ ಫೋರಂ ಸಂಘಟನೆ ಇಲ್ಲಿನ ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್ ಸಭಾಂಗಣದಲ್ಲಿ ಏರ್ಪಡಿಸಿದ್ದ 'ನಮ್ಮ ಕಾಲದ ಪ್ರಮುಖ ಕಾಳಜಿಗಳು' ಕುರಿತ ಸಂವಾದದಲ್ಲಿ ಮಾತನಾಡಿದರು.

'ಜೈ ಹನುಮಾನ್ ಘೋಷಣೆ ಕೂಗಿದವರು ಹಾಗೂ ರಾಮಮಂದಿರ ಕಟ್ಟಿದವರಿಗೆ ಮತ ಚಲಾವಣೆಯಾಗಿಲ್ಲ. ದೇಶದಲ್ಲಿ ಹಬ್ಬಿರುವ ಹಸಿವಿನ ಪರವಾಗಿ ಮತ ಚಲಾಯಿಸಿದ್ದಾರೆ. ಮೋದಿ ಸರ್ವಾಧಿಕಾರಿ ಅಲ್ಲದಿರಬಹುದು, ಆದರೆ ಪ್ರಜಾಪ್ರಭುತ್ವವಾದಿಯಂ-ತೂ ಅಲ್ಲ. ಹಿಂದುತ್ವಕ್ಕಿಂತ ಅಧಿಕಾರ ಮುಖ್ಯವೆಂಬುದು ಅವರಿಗೆ ಮನವರಿಕೆಯಾಗಿದೆ. ಬಿಜೆಪಿಗಿಂತ ಪ್ರಬಲವಾಗಿ ಹಿಂದುತ್ವವನ್ನು ಪ್ರತಿಪಾದಿಸಿದ್ದ ಶಿವಸೇನಾ ಈಗ ಕಾಂಗ್ರೆಸ್, ಎನ್‌ಸಿಪಿ ಜೊತೆ ಕೈ ಜೋಡಿಸಿರುವ ಉದಾಹರಣೆ ಅವರ ಮುಂದಿದೆ' ಎಂದು ಹೇಳಿದರು.

ಇವತ್ತು ಸಾಮಾಜಿಕ ಅಸಹಿಷ್ಣುತೆ ಹೆಚ್ಚಾಗಿದೆ. ಇನ್ನಾದರೂ ನಾವು ಸಹಿಷ್ಣುತೆ ಬೆಳೆಸಿಕೊಳ್ಳಬೇಕಿದೆ' ಎಂದು ಹೇಳಿದರು.

ಮೇಜರ್ ಜನರಲ್ ಎಸ್.ಜಿ. ಒಂಭತ್ಕರೆ, 'ಡೆಕ್ಕನ್ ಹೆರಾಲ್ಡ್' ಸಹಾಯಕ ಸಂಪಾದಕ ಎಸ್. ರಘೋತ್ತಮ ಹಾಗೂ ಕಾರ್ಯಕ್ರಮ ಸಂಚಾಲಕ ರವಿ ಜೋಶಿ ಸಂವಾದದಲ್ಲಿ ಪಾಲ್ಗೊಂಡರು.

ರಾಮನಗರದಲ್ಲಿ ಬಯಲಿಗೆ ಬಂದ ಅಕ್ರಮ • ಗ್ರಂಥಾಲಯದಲ್ಲಿ ಕುಳಿತೇ ಚಟುವಟಿಕೆ

ಟ್ರ್ಯಾಕ್ಟರ್ ನೋಂದಣಿ: ರಾಜ್ಯವ್ಯಾಪಿ ಜಾಲ

• ಓದೇಶ ಸಕಲೇಶಪುರ

ರಾಮನಗರ: ಹಳೆ ಮತ್ತು ಹೊಸ ಟ್ರ್ಯಾಕ್ಟರ್‌ಗಳಿಗೆ ಅಕ್ರಮವಾಗಿ ನಕಲಿ ದಾಖಲೆ ಮತ್ತು ಪ್ರಮಾಣಪತ್ರ ಸೃಷ್ಟಿಸಿ ಹೊಸ ನೋಂದಣಿ ಸಂಖ್ಯೆ ನೀಡಿ ಹಣ ಮಾಡುತ್ತಿದ್ದ ಜಾಲ ಕೇವಲ ರಾಮ-ನಗರವಷ್ಟೇ ಅಲ್ಲ ಇಡೀ ರಾಜ್ಯವನ್ನು ವ್ಯಾಪಿಸಿರುವುದು ಲೋಕಾಯುಕ್ತ ಪೊಲೀಸರ ಪ್ರಾಥಮಿಕ ತನಿಖೆಯಲ್ಲಿ ಕಂಡುಬಂದಿದೆ.

ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ವಂಚಿಸಿರುವ ಜಾಲದಲ್ಲಿ ಆರ್‌ಟಿಒ ಇಲಾಖೆಯ ಅಧಿಕಾರಿಗಳು ಮತ್ತು ಏಜೆಂಟರು ಮಾತ್ರವಲ್ಲ, ಕಂದಾಯ ಇಲಾಖೆ ಅಧಿಕಾರಿಗಳು ಸಹ ಭಾಗಿಯಾಗಿರುವ ಶಂಕೆ ವ್ಯಕ್ತವಾಗಿದೆ. ಹಾಗಾಗಿ, ಪೊಲೀಸರು ತಮ್ಮ ತನಿಖೆ ವ್ಯಾಪ್ತಿಯನ್ನು ಕಂದಾಯ ಇಲಾಖೆ ಹಾಗೂ ರಾಜ್ಯದ ಇತರ ಜಿಲ್ಲೆಗಳಿಗೂ ವಿಸ್ತರಿಸಲು ಮುಂದಾಗಿದ್ದಾರೆ.

ವಶಕ್ಕೆ ಪಡೆಯಲು ತಯಾರಿ: 'ಪ್ರಕರಣ ಸಂಬಂಧ ಸದ್ಯ ನ್ಯಾಯಾಂಗ ಬಂಧನದಲ್ಲಿರುವ ರಾಮನಗರ ಪ್ರಾದೇಶಿಕ ಸಾರಿಗೆ ಅಧಿಕಾರಿ ಶಿವಕುಮಾರ್, ಪ್ರಥಮ ದರ್ಜೆ ಸಹಾಯಕ ರಚಿತ್ ರಾಜ್ ಹಾಗೂ ಏಜೆಂಟ್ ಟ್ರ್ಯಾಕ್ಟರ್ ಸತೀಶನನ್ನು ಮತ್ತಷ್ಟು ವಿಚಾರಣೆಗೆ ಒಳಪಡಿಸಬೇಕಿದೆ. ಅದಕ್ಕಾಗಿ, ಸೋಮವಾರ ಮೂವರನ್ನು ವಶಕ್ಕೆ ಪಡೆಯಲು ತಯಾರಿ ನಡೆಸಿದ್ದೇವೆ' ಎಂದು ಲೋಕಾಯುಕ್ತ ಎಸ್.ಪಿ ಡಾ. ಕೆ. ವಂಶಿಕೃಷ್ಣ 'ಪ್ರಜಾವಾಣಿ'ಗೆ ತಿಳಿಸಿದರು.



ಅಕ್ರಮ ನೋಂದಣಿ ಜಾಲವು ಸೃಷ್ಟಿಸುತ್ತಿದ್ದ ನಕಲಿ ಬೋನಫೈಡ್ ಪ್ರಮಾಣಪತ್ರದಲ್ಲಿ ಕಂದಾಯ ಇಲಾಖೆ ಸಿಬ್ಬಂದಿ ಸಹ ಭಾಗಿಯಾದ ಶಂಕೆಯಿದೆ. ಈ ಬಗ್ಗೆಯೂ ತನಿಖೆ ನಡೆಯಲಿದೆ.

ಕೆ.ವಂಶಿಕೃಷ್ಣ,
ಲೋಕಾಯುಕ್ತ ಎಸ್.ಪಿ, ರಾಮನಗರ

'ದಾಳಿ ವೇಳೆ ರಾಮನಗರ ಕಚೇರಿಯಲ್ಲಿ ಶುಕ್ರವಾರ ರಾತ್ರಿ 2 ಗಂಟೆಯವರೆಗೆ ಶೋಧ ನಡೆಸಿದ್ದು, ಅಕ್ರಮಕ್ಕೆ ಸಂಬಂಧಿಸಿದಂತೆ ಸುಮಾರು ಮೂರು ಸಾವಿರ ದಾಖಲೆ ಜಪ್ತಿ ಮಾಡಲಾಗಿದೆ. ವಿವಿಧ ತಾಲ್ಲೂಕು ಹಾಗೂ ಜಿಲ್ಲೆಗಳ ಈ ದಾಖಲೆಗಳ ಪರಿಶೀಲನೆ ನಡೆಯುತ್ತಿದೆ. ಜಾಲದಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಆಗಿರುವ ನಷ್ಟವನ್ನು ನಿಖರವಾಗಿ ಅಂದಾಜಿಸಲಾಗುತ್ತಿದೆ' ಎಂದು ಅವರು ಹೇಳಿದರು.

ಒಂದೇ ಟ್ರ್ಯಾಕ್ಟರ್ 2 ವಿಳಾಸದಲ್ಲಿ ನೋಂದಣಿ

ಮೊದಲಿಗೆ ವ್ಯಕ್ತಿಯೊಬ್ಬರ ಹೆಸರಿನಲ್ಲಿ ಬೇರೆ ಕಡೆ ತಾತ್ಕಾಲಿಕವಾಗಿ ನೋಂದಣಿಯಾಗಿರುವ ಟ್ರ್ಯಾಕ್ಟರ್ ಅನ್ನು ಕೆಲ ವರ್ಷಗಳ ಬಳಿಕ ರಾಮನಗರದಲ್ಲಿ ಅದೇ ವ್ಯಕ್ತಿ ಹೆಸರಿನ ನಕಲಿ ವಿಳಾಸದ ದಾಖಲೆ ಸೃಷ್ಟಿಸಿ ನೋಂದಣಿ ಮಾಡಲಾಗಿದೆ.

ತುಮಕೂರು ಜಿಲ್ಲೆಯ ತಿಪಟೂರು ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಶಿವಾನಂದಮೂರ್ತಿ ಎಂಬಾತನ ಹೆಸರಿನಲ್ಲಿ 2018ರಲ್ಲಿ ನೋಂದಣಿಯಾಗಿದ್ದ ಟ್ರ್ಯಾಕ್ಟರ್ ಅನ್ನು 2024ರಲ್ಲಿ ರಾಮನಗರ ತಾಲ್ಲೂಕಿನ ನಕಲಿ ವಿಳಾಸದಲ್ಲಿ ಬೇರೆ ಸಂಖ್ಯೆಯೊಂದಿಗೆ ನೋಂದಣಿ ಮಾಡಲಾಗಿದೆ. ಎಲ್ಲಾ ನೋಂದಣಿಗಳಿಗೂ ನಕಲಿ ಬೋನಫೈಡ್ ಪ್ರಮಾಣಪತ್ರ ಸೃಷ್ಟಿಸಲಾಗಿದೆ ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.

ಇದೇ ರೀತಿ ಮಂಡ್ಯ, ಮೈಸೂರು, ಉತ್ತರಕನ್ನಡ, ಚಿಕ್ಕ-ಬಳ್ಳಾಪುರ, ಕೋಲಾರ, ಬೆಂಗಳೂರು ಸೇರಿದಂತೆ ವಿವಿಧ ಭಾಗದಲ್ಲಿ ಮೊದಲಿಗೆ ತಾತ್ಕಾಲಿಕವಾಗಿ ನೋಂದಣಿಯಾಗಿದ್ದ ಟ್ರ್ಯಾಕ್ಟರ್‌ಗಳಿಗೆ ನಂತರ ನಕಲಿ ದಾಖಲೆ ಸೃಷ್ಟಿಸಿ ಸ್ಥಳೀಯ ನಕಲಿ ವಿಳಾಸದಲ್ಲಿ ನೋಂದಣಿ ಮಾಡಿಸಲಾಗಿದೆ. ಇದಕ್ಕಾಗಿ, ಟ್ರ್ಯಾಕ್ಟರ್ ಮಾಲೀಕರಿಂದ ಆರೋಪಿಗಳು ಹಣ ಪಡೆದಿದ್ದಾರೆ ಎಂದು ಮೂಲಗಳು ಹೇಳಿವೆ.

ಕೃಷಿ ಬಳಕೆ ಹೆಸರಲ್ಲೇ ನೋಂದಣಿ: ಜಮೀನು ಹೊಂದಿರುವ ರೈತರಿಗೆ ಉಳುಮೆ ಸೇರಿದಂತೆ ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ ಟ್ರ್ಯಾಕ್ಟರ್ ಖರೀದಿಸಿದಾಗ ಅವರಿಗೆ ಸರ್ಕಾರ ತೆರಿಗೆ ವಿನಾಯಿತಿ ನೀಡಿದೆ. ಅದಕ್ಕಾಗಿ, ರೈತರು ತಮ್ಮ ಜಮೀನಿನ ಪಹಣಿ ಪತ್ರವನ್ನು ತಹಶೀಲ್ದಾರ್ ಕಚೇರಿಗೆ ಸಲ್ಲಿಸಿ ಅವರಿಂದ ಬೋನ ಫೈಡ್ (ಕಾನೂನಾತ್ಮಕ ದೃಢೀಕರಣ) ಪ್ರಮಾಣಪತ್ರ ಸಲ್ಲಿಸಬೇಕು. ನೋಂದಣಿ ಸಮಯದಲ್ಲಿ ಈ ಪ್ರಮಾಣಪತ್ರ ಸಲ್ಲಿಸಿದರೆ ಮಾತ್ರ ತೆರಿಗೆ ವಿನಾಯಿತಿ ಸಿಗಲಿದೆ. ಇಲದಿದ್ದರೆ, ವ್ಯವಸಾಯೇತರ ಚಟುವಟಿಕೆಗೆಂದು ನೋಂದಣಿಯಾಗುವ ಟ್ರ್ಯಾಕ್ಟರ್ ಅಧಿಕ ಶುಲ್ಕದ ಜೊತೆಗೆ ಕಾಲಕಾಲಕ್ಕೆ ಇತರ ತೆರಿಗೆ ಮತ್ತು ಶುಲ್ಕ ಕಟ್ಟಬೇಕು. ಆದರೆ, ಬೋನಫೈಡ್ ಪ್ರಮಾಣಪತ್ರ ಇದ್ದರೆ ಇದಾವುದೂ ಅನ್ವಯವಾಗಲ್ಲ.

ಆರೋಪಿಗಳು ಬಹುತೇಕ ಟ್ರ್ಯಾಕ್ಟರ್‌ಗಳಿಗೆ ನಕಲಿ ಬೋನಫೈಡ್ ಪ್ರಮಾಣಪತ್ರ ಸೃಷ್ಟಿಸಿ ನೋಂದಣಿ ಮಾಡಿದ್ದಾರೆ. ಇದಕ್ಕಾಗಿ ತಹಶೀಲ್ದಾರ್ ಸಹಿ ಕೂಡ ನಕಲಿ ಮಾಡಲಾಗಿದೆ. ಇಷ್ಟೊಂದು ಪ್ರಮಾಣದಲ್ಲಿ ಅಕ್ರಮ ಎಸಗಿರುವುದಕ್ಕೆ ಕಂದಾಯ ಇಲಾಖೆಯಲ್ಲಿರುವವರೂ ಕೈ ಜೋಡಿಸಿರುವ ಶಂಕೆ ವ್ಯಕ್ತವಾಗಿದೆ. ಆ ಆಯಾಮದಲ್ಲೂ ತನಿಖೆ ನಡೆಸಲಾಗು-ತ್ತಿದೆ.

ದಲ್ಲಾಳಿ ಟ್ರ್ಯಾಕ್ಟರ್ ಸತೀಶ್ ಜಾಲದ ಮಾಸ್ಟರ್‌ಮೈಂಡ್ ಎನ್ನಲಾಗಿದೆ. ಈತನೇ ವಿವಿಧ ಜಿಲ್ಲೆಗಳಲ್ಲಿ ಸಂಪರ್ಕ ಸಾಧಿಸಿ ಟ್ರ್ಯಾಕ್ಟರ್‌ಗಳನ್ನು ರಾಮನಗರದಲ್ಲಿ ಆರ್‌ಟಿಒದಲ್ಲಿ ನೋಂದಣಿ ಮಾಡಿಸುವಂತೆ ಮನವೊಲಿಸುತ್ತಿದ್ದ. ರಾಮನಗರ ತಾಲ್ಲೂಕಿನ ಸುಗ್ಗನಹಳ್ಳಿಯಲ್ಲಿರುವ ಗ್ರಂಥಾಲಯದಲ್ಲಿ ನಕಲಿ ಬೋನಫೈಡ್ ಪ್ರಮಾಣಪತ್ರ ತಯಾರಿಸುವ ಜೊತೆಗೆ ಆರ್‌ಟಿಒ ಕಚೇರಿ ಅಧಿಕಾರಿಗಳ ಲಾಗಿನ್ ಬಳಸಿ ನೋಂದಣಿ ಪೂರ್ಣಗೊಳಿಸ-ಲಾಗುತ್ತಿತ್ತು ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.

ರಾಮನಗರ ಆರ್‌ಟಿಒ ಕಚೇರಿಯಲ್ಲಿ ಟ್ರ್ಯಾಕ್ಟರ್‌ಗಳ ಅಕ್ರಮ ನೋಂದಣಿ ಜಾಲ ಪತ್ತೆಯಾಗಿರುವ ಬೆನ್ನಲ್ಲೇ ಲೋಕಾಯುಕ್ತ ಪೊಲೀಸರು ಬೇರೆ ಜಿಲ್ಲೆಗಳ ಆರ್‌ಟಿಒ ಕಚೇರಿಗಳಲ್ಲಿ ಪರಿಶೀಲನೆ ನಡೆಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಸದ್ಯ ನೋಂದಣಿಯಾಗಿರುವ ಟ್ರ್ಯಾಕ್ಟರ್‌ಗಳ ಮೊದಲ ತಾತ್ಕಾಲಿಕ ವಿಳಾಸಗಳ ಬಗ್ಗೆಯೂ ತನಿಖೆ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

'ಕನ್ನಡ ಗೊತ್ತಿರದ ಸಚಿವ ಕಪ್ಪುಚುಕ್ಕೆ'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಮಧು ಬಂಗಾರಪ್ಪ ಅವರಿಗೆ ಕನ್ನಡದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ಕನ್ನಡ ಸರಿಯಾದ ಓದಲು ಬಾರದ ಅವರು ಶಿಕ್ಷಣ ಸಚಿವರಾಗಿದ್ದು ಈ ಸರ್ಕಾರಕ್ಕೆ ಕಪ್ಪುಚುಕ್ಕೆ' ಎಂದು ಸಾಹಿತಿ ಕುಂ.ವೀರಭದ್ರಪ್ಪ ಟೀಕಿಸಿದರು.

ಶನಿವಾರ ಇಲ್ಲಿ ಜಿಲ್ಲಾ 11ನೇ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿದ ಅವರು, 'ಶಿಕ್ಷಣ ಸಚಿವರನ್ನು ಬದಲಿಸಲು ಹೇಳಿ' ಎಂದು ವೇದಿಕೆ ಮೇಲಿದ್ದ ಶಾಸಕ ಎಚ್.ವೈ.ಮೇಟಿ ಅವರಿಗೆ ಕೋರಿದರು.

'ಸಚಿವರಿಗೆ ತಲೆ ಕೂದಲು ಬಗ್ಗೆ ಕೇಳಿದರೆ, ಮೋದಿಯ ಗಡ್ಡದ ಬಗ್ಗೆ ಮಾತನಾಡುತ್ತಾರೆ. ತಲೆಗೂದಲು ಮತ್ತು ಗಡ್ಡದ ವ್ಯತ್ಯಾಸ ಅರಿಯುವಷ್ಟು ಸಾಮಾನ್ಯ ಪ್ರಜ್ಞೆ ಅವರಿಗಿಲ್ಲ' ಎಂದು ವ್ಯಂಗ್ಯವಾಡಿದರು.

ಕೊಡಗು: ತಗ್ಗಿದ ಮಳೆ ಪ್ರಮಾಣ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಶನಿವಾರ ಮಳೆ ಗಣನೀಯವಾಗಿ ತಗ್ಗಿದೆ. ಹಾರಂಗಿ ಜಲಾಶಯಕ್ಕೆ ಒಳ ಹರಿವಿನ ಪ್ರಮಾಣ 1,577 ಕ್ಯುಸೆಕ್‌ಗೆ ಇಳಿಕೆಯಾಗಿದೆ. ಮುಂಜಾಗ್ರತಾ ಕ್ರಮವಾಗಿ ಎಲ್ಲ ಗಾಜಿನ ಸೇತುವೆ (ಗ್ಲಾಸ್ ಬ್ರಿಡ್ಜ್)ಗಳ ಬಳಕೆಯನ್ನು ನಿರ್ಬಂಧಿಸಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶ ಹೊರಡಿಸಿದ್ದಾರೆ.

ಶನಿವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ 24 ಗಂಟೆಗಳಲ್ಲಿ ಭಾಗಮಂಡಲ ಹೋಬಳಿ ವ್ಯಾಪ್ತಿಯಲ್ಲಿ 7 ಸೆಂ.ಮೀ ಹಾಗೂ ಪೊನ್ನಂಪೇಟೆ ಹೋಬಳಿಯಲ್ಲಿ 4 ಸೆಂ.ಮೀನಷ್ಟು ಮಳೆ ಸುರಿದಿರುವುದು ದಾಖಲಾಗಿದೆ. ಮಡಿಕೇರಿ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಹಾಗೂ ನಾಪೋಕ್ಲು ವ್ಯಾಪ್ತಿಯಲ್ಲಿ 2 ಸೆಂ.ಮೀ ಮಾತ್ರವೇ ಮಳೆಯಾಗಿದೆ.



ಕೊಡಗು ಜಿಲ್ಲೆಯ ಚೆಯ್ಯಂಡಾಣೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೇಲಾವರ ಜಲಪಾತ ಧುಮ್ಮಿಕ್ಕುತ್ತಿದೆ

ಹೇಮಾವತಿ ಜಲಾಶಯಕ್ಕೆ ಒಳಹರಿವು ಹೆಚ್ಚಳ(ಹಾಸನ ವರದಿ): ಮಲೆನಾಡು ಭಾಗದಲ್ಲಿ ಉತ್ತಮ ಮಳೆ ಆಗುತ್ತಿರುವ ಕಾರಣ, ಜಿಲ್ಲೆಯ ಗೊರೂರಿನಲ್ಲಿರುವ ಹೇಮಾವತಿ ಜಲಾಶಯಕ್ಕೆ ಒಳಹರಿವು ಹೆಚ್ಚಳವಾಗಿದೆ. ಶನಿವಾರ 5864 ಕ್ಯುಸೆಕ್ ಒಳಹರಿವು ದಾಖಲಾಗಿದೆ.

ಜಲಾಶಯದ ಗರಿಷ್ಠ ಮಟ್ಟ 2922 ಅಡಿ ಇದ್ದು, ಶನಿವಾರ 2887 ಅಡಿ ನೀರಿತ್ತು. ಅದರಲ್ಲಿ ಬಳಕೆಗೆ 8.390 ಟಿಎಂಸಿ ನೀರು ಲಭ್ಯವಾಗಿದೆ. ಕಳೆದ ವರ್ಷ ಮಳೆಯಿಲ್ಲದೆ ಕುಡಿಯುವ ನೀರಿಗೂ ಪರಿತಪಿಸುವಂತಾಗಿತ್ತು. ಈಗ ಸುರಿಯುತ್ತಿರುವ ಮಳೆಯಿಂದ ಜಲಾಶಯದಲ್ಲಿ ಸಂಗ್ರಹ ಸ್ವಲ್ಪ ಏರಿದೆ. ನೀರಿನ ಬವಣೆ ಸದ್ಯಕ್ಕೆ ನೀಗಿದಂತಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್ *	124.80	92.80	18,644	496
ಹಾರಂಗಿ	2,859	2,836.40	1,577	200
ಕಬಿನಿ	2284.00	2,275.06	17,873	2,000
ಹೇಮಾವತಿ	2,922	2,887.60	5,862	250
ಲಿಂಗನಮಕ್ಕಿ	1,819	1,749.45	9,184	2,348
ಸೂಪಾ (ಮೀ)	564	525.80	3,197	773.56
ಮಾಣಿ	594	572.30	2,190	000
ತುಂಗಭದ್ರಾ	1,633	1,581.56	1,880	297
ಮಲಪ್ರಭಾ	2079.5	2,041.90	000	194
ಘಟಪ್ರಭಾ	2175	2,099.05	3,681	100
ಭದ್ರಾ	186	123.4	6,376	346
ಆಲಮಟ್ಟಿ (ಮೀ)	519.60	510.89	7,895	430
ನಾರಾಯಣಪುರ (ಮೀ)	492.25	489.20	205.72	94.72

* ನೆಲಮಟ್ಟದಿಂದ

ವಾಲ್ಮೀಕಿ ನಿಗಮ: ₹10 ಕೋಟಿ ಜಪ್ತಿ

ಖಾತೆದಾರರಿಗೆ ಕಮಿಷನ್ ನೀಡಿ ಹಣ ಡ್ರಾ, ಆರೋಪಿಗಳ ಪತ್ತೆಗಾಗಿ ಶೋಧ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಇದುವರೆಗೂ ಈ ಪ್ರಕರಣ ₹28 ಕೋಟಿ ಜಪ್ತಿ
- ಪ್ರಕರಣದಲ್ಲಿ ಬಂಧಿತರ ಸಂಖ್ಯೆ 11ಕ್ಕೆ ಏರಿಕೆ
- ಕೆಲವು ಖಾತೆಗಳಲ್ಲಿರುವ ₹45 ಕೋಟಿ ಡ್ರಾ ಮಾಡದಂತೆ ನಿರ್ಬಂಧ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಹಗರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ದಳದ (ಎಸ್‌ಐಟಿ) ಪೊಲೀಸರು, ಚಿನ್ನಾಭರಣ, ಹೋಟೆಲ್ ಹಾಗೂ ಬಾರ್ ಆ್ಯಂಡ್ ರೆಸ್ಟೋರೆಂಟ್ ಮಾಲೀಕರ ಖಾತೆಗಳೂ ಸೇರಿ ಒಟ್ಟು 197 ಖಾತೆಗಳಿಂದ ಅಂದಾಜು ₹10 ಕೋಟಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಆರೋಪಿಗಳಿಂದ ₹14 ಕೋಟಿ, ಬ್ಯಾಂಕ್‌ಗಳಲ್ಲಿ ₹10 ಕೋಟಿ ಮುಟ್ಟುಗೋಲು ಹಾಗೂ ₹4 ಕೋಟಿ ಚಿನ್ನಾಭರಣ ಜಪ್ತಿ ಮಾಡಿಕೊಂಡಿದ್ದು, ಇದುವರೆಗೂ ಈ ಪ್ರಕರಣದಲ್ಲಿ ₹28 ಕೋಟಿ ಜಪ್ತಿ ಮಾಡಿಕೊಂಡಂತೆ ಆಗಿದೆ ಎಂದು ಎಸ್‌ಐಟಿ ಪೊಲೀಸರು ಹೇಳಿದರು.

ಹೈದರಾಬಾದ್‌ಗೆ ತೆರಳಿರುವ ಎಸ್‌ಐಟಿ ಪೊಲೀಸರು ಮತ್ತೊಬ್ಬ ಆರೋಪಿ ಶ್ರೀನಿವಾಸ್ ಎಂಬುವವರನ್ನು ಬಂಧಿಸಿದ್ದಾರೆ. ಶ್ರೀನಿವಾಸ್ ಮಧ್ಯ-ವರ್ತಿಯಾಗಿ ಕೆಲಸ ಮಾಡುತ್ತಿದ್ದರು. ಪ್ರಕರಣದಲ್ಲಿ ಬಂಧಿತರ ಸಂಖ್ಯೆ 11ಕ್ಕೆ ಏರಿಕೆ ಆಗಿದೆ. ಕಳೆದ ವಾರ ಬಂಧಿಸಿರುವ ದಾವಣಗೆರೆ ಜಿಲ್ಲೆ ಚನ್ನಗಿರಿಯ ಸಾಯಿತೇಜ ಹಾಗೂ ತೇಜ ತಮ್ಮಯ್ಯ ಅವರನ್ನು ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ. ಕಾರ್ತಿ ಶ್ರೀನಿವಾಸ್ ಎಂಬಾತ ತಲೆಮರೆಸಿಕೊಂಡಿದ್ದು ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಹೈದರಾಬಾದ್‌ನ 'ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ- ಆಪರೇಟಿವ್ ಸೊಸೈಟಿ'ಯ (ಎಫ್‌ಎಫ್‌ಸಿಸಿಎಸ್‌ಎಲ್) ವಿವಿಧ ಖಾತೆಗಳಿಗೆ ವಾಲ್ಮೀಕಿ ನಿಗಮದ ಖಾತೆಯಿಂದ ₹94.73 ಕೋಟಿ ಹಣ ವರ್ಗಾವಣೆ ಆಗಿತ್ತು. ಈ ಬ್ಯಾಂಕ್‌ನ ಖಾತೆಯಿಂದ ಬಾರ್ ಆ್ಯಂಡ್ ರೆಸ್ಟೋರೆಂಟ್, ಚಿನ್ನಾಭರಣ ಅಂಗಡಿ, ಹೋಟೆಲ್ ಮಾಲೀಕರು ಹಾಗೂ ಕೆಲವು ಕಂಪನಿಗಳ ಮಾಲೀಕರ ಖಾತೆಗಳಿಗೆ ಹಣ ವರ್ಗಾವಣೆ ಆಗಿರುವುದನ್ನು ಪತ್ತೆ ಹಚ್ಚಲಾಗಿದ್ದು, ಈ ಖಾತೆಗಳಿಂದ ಹಣ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಈ ಖಾತೆಗಳಲ್ಲಿನ ವ್ಯವಹಾರ ಸ್ಥಗಿತಗೊಳಿಸಲಾಗಿದೆ. ಕಂಪನಿಗಳ ಮಾಲೀಕರನ್ನು ವಿಚಾರಣೆ ನಡೆಸಲಾಗಿದೆ' ಎಂದು ಎಸ್‌ಐಟಿ ಪೊಲೀಸರು ಹೇಳಿದರು.

'ಎಫ್‌ಎಫ್‌ಸಿಸಿಎಸ್‌ಎಲ್ ಅಧ್ಯಕ್ಷ ಸತ್ಯನಾರಾಯಣ ಹಾಗೂ ಮಧ್ಯವರ್ತಿಗಳಾದ ಸತ್ಯನಾರಾಯಣ ವರ್ಮಾ, ಚಂದ್ರಮೋಹನ್ ಹಾಗೂ ಜಗದೀಶ್ ಎಂಬುವವರನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಬೇರೆ ಬೇರೆ ಖಾತೆಗಳಿಗೆ ಹಣ ವರ್ಗಾವಣೆ ಮಾಡಿರುವ ವಿಚಾರವನ್ನು ಬಾಯ್ಬಿಟ್ಟಿದ್ದರು. ಆ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆ-ಸಲಾಗುತ್ತಿದೆ. ಎಫ್‌ಎಫ್‌ಸಿಸಿಎಸ್‌ಎಲ್ ಸೇರಿದಂತೆ ಕೆಲವು ಖಾತೆಗಳಲ್ಲಿ ₹45 ಕೋಟಿ ಹಣವಿದ್ದು ಆ ಹಣವನ್ನು ಡ್ರಾ ಮಾಡದಂತೆ ನಿರ್ಬಂಧ ವಿಧಿಸಲಾಗಿದೆ' ಎಂದು ತನಿಖಾಧಿಕಾರಿಯೊಬ್ಬರು ಹೇಳಿದರು.

'ಖಾತೆಗಳಿಗೆ ₹5 ಲಕ್ಷ, ₹10 ಲಕ್ಷ ಹಾಗೂ ₹20 ಲಕ್ಷದಂತೆ ವರ್ಗಾವಣೆ ಮಾಡಲಾಗಿದೆ. ಖಾತೆದಾರರಿಗೆ ಕಮಿಷನ್ ನೀಡಿ ಹಣವನ್ನು ನಗದು ರೂಪದಲ್ಲಿ ಆರೋಪಿಗಳು ಪಡೆದು-ಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಇಡೀ ಪ್ರಕರಣದ ಪ್ರಮುಖ ಆರೋಪಿ ಸತ್ಯನಾರಾಯಣ ವರ್ಮಾ. ಎಫ್‌ಎಫ್‌ಸಿಸಿಎಸ್‌ಎಲ್ ಅಧ್ಯಕ್ಷರ ಜತೆಗೆ ಇವರು ಸೇರಿಕೊಂಡು ಕೃತ್ಯ ಎಸಗಿದ್ದಾರೆ. ಇದೇ ರೀತಿಯ ವಂಚನೆಯನ್ನು ಆಂಧ್ರಪ್ರದೇಶ ಹಾಗೂ ತೆಲಂಗಾಣದಲ್ಲೂ ವರ್ಮಾ ನಡೆಸಿದ್ದು ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಹುಬ್ಬಳ್ಳಿ–ಧಾರವಾಡ ರಾಮಪ್ಪ ಮೇಯರ್

ಪ್ರಜಾವಾಣಿ ವಾರ್ತೆ



ರಾಮಪ್ಪ ಬಡಿಗೇರ



ದುರ್ಗಮ್ಮ ಬಿಜವಾಡ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ 23ನೇ ಮೇಯರ್ ಆಗಿ ಬಿಜೆಪಿಯ ರಾಮಪ್ಪ ಬಡಿಗೇರ ಮತ್ತು ಉಪಮೇಯರ್ ಆಗಿ ದುರ್ಗಮ್ಮ ಬಿಜವಾಡ ಆಯ್ಕೆಯಾದರು. ಇಲ್ಲಿ ಶನಿವಾರ ನಡೆದ ಚುನಾವಣೆಯಲ್ಲಿ ಇಬ್ಬರೂ ತಲಾ 47 ಮತ ಪಡೆದು ಜಯಗಳಿಸಿದರು.

ಕಾಂಗ್ರೆಸ್‌ನಿಂದ ಮೇಯರ್ ಸ್ಥಾನಕ್ಕೆ ಸ್ಪರ್ಧಿಸಿದ್ದ ಇಮ್ರಾನ್ ಎಲಿಗಾರ ಮತ್ತು ಉಪ ಮೇಯರ್ ಅಭ್ಯರ್ಥಿ ಮಂಗಳಮ್ಮ ಹಿರೇಮನಿ ತಲಾ 36 ಮತ ಗಳಿಸಿದರು. ಮೇಯರ್ ಸ್ಥಾನಕ್ಕೆ ಮಾತ್ರ ಸ್ಪರ್ಧಿಸಿದ್ದ ಎಐಎಂಐಎಂ ಪಕ್ಷದ ಹುಸೇನಬಿ ನಾಲತವಾಡ 3 ಮತ ಪಡೆದರು.

ಮೂವರು ದರೋಡೆಕೋರರ ಬಂಧನ

ಪ್ರಜಾವಾಣಿ ವಾರ್ತೆ

ಲಿಂಗಸುಗೂರು (ರಾಯಚೂರು ಜಿಲ್ಲೆ): ಬಂಧಿಸಲು ಬಂದಿದ್ದ ಪೊಲೀಸರ ಮೇಲೆ ದಡೋರೆಕೋರರು ವಾಹನ ಹಾಯಿಸಿ ಕೊಲೆ ಮಾಡಲು ಯತ್ನಿಸಿದ ಘಟನೆ ಪಟ್ಟಣದಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ದರೋಡೆಕೋರರ ತಂಡ ಸ್ಕಾರ್ಪಿಯೊದಲ್ಲಿ ತಿಂಥಣಿ ಬ್ರಿಡ್ಜ್‌ನಿಂದ ಲಿಂಗಸುಗೂರು ಕಡೆಗೆ ಹೊರಟಿರುವ ಮಾಹಿತಿ ದೊರೆತ ತಕ್ಷಣ ಪೊಲೀಸರು ಕಾರ್ಯಾಚರಣೆಗೆ ಇಳಿದರು. ಮಾಣಿಕೇಶ್ವರಿ ಮಠದ ಬಳಿ ಬರುತ್ತಿದ್ದಂತೆಯೇ ದರೋಡೆಕೋರರು ವಾಹನವನ್ನು ಪೊಲೀಸ್ ಜೀಪ್‌ಗೆ ಬಲವಾಗಿ ಡಿಕ್ಕಿ ಹೊಡೆಸಿದ್ದಾರೆ. ಅಲ್ಲದೆ ಖಾರದಪುಡಿ, ರಾಡ್, ಮಚ್ಚುಗಳಿಂದ ಪೊಲೀಸರ ಮೇಲೆ ಹಲ್ಲೆಗೆ ಯತ್ನಿಸಿದರು. ಎರಡೂ ತಂಡಗಳ ಮಧ್ಯೆ ನಡೆದ ಜಟಾಪಟಿಯಲ್ಲಿ ಪೊಲೀಸರು ಮೂವರನ್ನು ಬಂಧಿಸಿದ್ದಾರೆ.

ಬಂಧಿತರನ್ನು ಯಾದಗಿರಿಯ ಗುರುರಾಜ ಸುರೇಶ ಚವ್ಹಾಣ, ಯಾದಗಿರಿ ಜಿಲ್ಲೆಯ ಕನ್ಯಾಕೋಳೂರು ತಾಂಡಾದ ಕುಮಾರ ಯಮನಪ್ಪ ಚವ್ಹಾಣ, ಜಿನಕೇರಿ ತಾಂಡಾದ ಸುರೇಶ ಪೂಲಸಿಂಗ್ ರಾಠೋಡ ಎಂದು ಗುರುತಿಸಲಾಗಿದೆ. ಕನ್ಯಾಕೋಳೂರು ತಾಂಡಾದ ತಿಪ್ಪಣ್ಣ ಚಂದಪ್ಪ ರಾಠೋಡ ಮತ್ತು ಮಾನಪ್ಪ ಓಂ ರಾಠೋಡ ಪರಾರಿಯಾಗಿದ್ದಾರೆ.

ದರೋಡೆಕೋರರ ಬಂಧನಕ್ಕೆ ಪೊಲೀಸರಿಗೆ ನೆರವಾದ ಲಿಂಗಸುಗೂರಿನ ವೀರೇಶ ಮುದಿಯಪ್ಪ ಭಜಂತ್ರಿ, ನಾರಾಯಣ ಹನುಮಂತ ಕ್ಷತ್ರೀಯ, ಪೊಲೀಸ್ ಕಾನ್‌ಸ್ಟೆಬಲ್‌ಗಳಾದ ರಂಗನಾಥ ಹೊನ್ನಪ್ಪ, ಸಿದ್ದಪ್ಪ ಮಾನಪ್ಪ, ಶರಣಬಸವ ಸಾಬಣ್ಣ ಅವರಿಗೆ ಗಾಯಗಳಾಗಿದ್ದು, ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಲಿಂಗಸುಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಂಬುಲೆನ್ಸ್-ಬೈಕ್ ಡಿಕ್ಕಿ ಮೂವರು ಯುವಕರ ಸಾವು

ಪ್ರಜಾವಾಣಿ ವಾರ್ತೆ

ಶಿಕಾರಿಪುರ/ನ್ಯಾಮತಿ: ತಾಲ್ಲೂಕಿನ ತರಲಘಟ್ಟ ಗ್ರಾಮದ ಸಮೀಪ ಶುಕ್ರವಾರ ರಾತ್ರಿ ಆಂಬುಲೆನ್ಸ್ ಹಾಗೂ ಬೈಕ್ ಮಧ್ಯೆ ಡಿಕ್ಕಿ ಸಂಭವಿಸಿ ದಾವಣಗೆರೆ ಜಿಲ್ಲೆ ನ್ಯಾಮತಿ ತಾಲ್ಲೂಕಿನ ಹೊಸಜೋಗ ಗ್ರಾಮದ ಪ್ರಸನ್ನ (27), ಅಜಯ್ (22) ಹಾಗೂ ಕಾರ್ತಿಕ್ (21) ಮೃತಪಟ್ಟರು.

ಮೂವರು ಸ್ನೇಹಿತರು ಶಿಕಾರಿಪುರದಲ್ಲಿ ವಿವಾಹ ಆರತಕ್ಷತೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಊರಿಗೆ ಮರಳುತ್ತಿದ್ದರು. ಹಾವೇರಿ ಜಿಲ್ಲೆ ಮಾಸೂರು ಸರ್ಕಾರಿ ಆಸ್ಪತ್ರೆಯ ಆಂಬುಲೆನ್ಸ್ ಶಿವಮೊಗ್ಗದ ಆಸ್ಪತ್ರೆಗೆ ರೋಗಿಯನ್ನು ಬಿಟ್ಟು ಹಿಂತಿರುಗುವಾಗ ಡಿಕ್ಕಿ ಸಂಭವಿಸಿದೆ. ಈ ಬಗ್ಗೆ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸರ್ಕಾರಿ ಹಣ: ಬಹುಹಂತದ ನಿಗಾಕ್ಕೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಉದ್ದಿಮೆಗಳು, ನಿಗಮ, ಮಂಡಳಿ, ಸ್ಥಳೀಯ ಸಂಸ್ಥೆಗಳು ಸೇರಿದಂತೆ ರಾಜ್ಯ ಸರ್ಕಾರದಿಂದ ಅನುದಾನ ಪಡೆಯುವ ಎಲ್ಲ ಸಂಸ್ಥೆಗಳು ಮತ್ತು ಅರೆ ಸ್ವಾಯತ್ತ ಸಂಸ್ಥೆಗಳ ಹಣಕಾಸಿನ ವಹಿವಾಟಿನ ಮೇಲೆ ಬಹುಹಂತದ ನಿಗಾ ಇರಿಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಸುತ್ತೋಲೆ ಹೊರಡಿಸಿದ್ದಾರೆ.

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಹಣದ ಅಕ್ರಮ ವರ್ಗಾವಣೆ ಮಾಡಿರುವ ಹಗರಣ ಸೇರಿದಂತೆ ಹಲವು ಸಂಸ್ಥೆಗಳಲ್ಲಿ ಆರ್ಥಿಕ ಅವ್ಯವಹಾರಗಳು ನಡೆದಿರುವುದು ಪತ್ತೆಯಾಗಿದೆ. ಈ ಕಾರಣದಿಂದ ಎಲ್ಲ ಇಲಾಖಾ ಮುಖ್ಯಸ್ಥರಿಗೂ ಮಂಗಳವಾರ ಸುತ್ತೋಲೆ ಹೊರಡಿಸಿರುವ ಗೋಯಲ್, ಸರ್ಕಾರಿ ವಿಶ್ವವಿದ್ಯಾಲಯಗಳು, ವೈದ್ಯಕೀಯ ಕಾಲೇಜುಗಳಲ್ಲೂ ನಿಗಾ ಇರಿಸುವಂತೆ ನಿರ್ದೇಶನ ನೀಡಿದ್ದಾರೆ.

ಇಲಾಖಾ ಮುಖ್ಯಸ್ಥರಿಗೂ ಹೊಣೆ

ನಿಗಮ, ಮಂಡಳಿ, ಸ್ವಾಯತ್ತ ಸಂಸ್ಥೆಗಳ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಆಯಾ ಇಲಾಖೆಗಳ ಕಾರ್ಯ-ದರ್ಶಿಗಳು ಈ ಎಲ್ಲ ಸಂಸ್ಥೆಗಳ ಹಣಕಾಸು ವಹಿವಾಟಿನ ಮೇಲೆ ನಿಗಾ ಇರಿಸಬೇಕು. ತಮ್ಮ ಇಲಾಖೆಗಳ ವ್ಯಾಪ್ತಿಯ ಸಂಸ್ಥೆಗಳ ಬ್ಯಾಂಕ್ ಖಾತೆಗಳ ವಿವರ ಸಂಗ್ರಹಿಸುವುದರ ಜತೆಗೆ ಅವುಗಳನ್ನು ಖಜಾನೆ ಜತೆ ಜೋಡಿಸಬೇಕು ಎಂದು ಮುಖ್ಯ ಕಾರ್ಯದರ್ಶಿ ಸುತ್ತೋಲೆಯಲ್ಲಿ ನಿರ್ದೇಶನ ನೀಡಿದ್ದಾರೆ.



ರಜನೀಶ್ ಗೋಯಲ್

ಚಾಲ್ತಿ ಖಾತೆ, ಉಳಿತಾಯ ಖಾತೆ, ನಿಶ್ಚಿತ ಠೇವಣಿ ಸೇರಿದಂತೆ ಎಲ್ಲ ಬ್ಯಾಂಕ್ ಖಾತೆಗಳ ಆರಂಭಿಕ ಮತ್ತು ಅಂತ್ಯದ ಶಿಲ್ಕಿನ ಕುರಿತು ಪ್ರತಿ ತಿಂಗಳು ಸಮಗ್ರ ಪರಿಶೀಲನೆ ನಡೆಸಬೇಕು. ನಿಶ್ಚಿತ ಠೇವಣಿಯ ಮೊತ್ತ, ಅವಧಿ ಪೂರ್ಣಗೊಳ್ಳುವುದು (ಮೆಚ್ಯುರಿಟಿ), ಬಡ್ಡಿ ಪಾವತಿ ಬಗ್ಗೆಯೂ ನಿಗಾ ಇರಿಸಬೇಕು. ಈ ಎಲ್ಲ ಸಂಸ್ಥೆಗಳ ಹಣಕಾಸಿನ ವಹಿವಾಟಿನ ಕುರಿತು ಮೂರನೇ ವ್ಯಕ್ತಿಗಳಿಂದ ತಪಾಸಣೆ ಮಾಡಿಸಬೇಕು. ಆಂತರಿಕ ಲೆಕ್ಕಪರಿಶೋಧಕರಿಂದ ಈ ಬಗ್ಗೆ ವರದಿ ಪಡೆದು ಸಂಸ್ಥೆಗಳ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಬೇಕು. ಆಯಾ ಸಂಸ್ಥೆಗಳ ಹಣಕಾಸು ವ್ಯವಹಾರಗಳ ಕುರಿತು ಬ್ಯಾಂಕ್‌ಗಳಿಂದ ದಾಖಲೆಗಳನ್ನು ಪಡೆದು, ಪ್ರತ್ಯೇಕವಾಗಿ ನಿರ್ವಹಣೆ ಮಾಡಬೇಕು ಎಂದು ಸೂಚಿಸಿದ್ದಾರೆ.

ಹೊರ ಊರುಗಳಲ್ಲಿ ಹೂಡಿಕೆ ನಿರ್ಬಂಧ: ಯಾವುದೇ ಸಂಸ್ಥೆಗಳು ತಮ್ಮ ಕೇಂದ್ರ ಸ್ಥಾನದ ನಗರದಿಂದ ಹೊರಗಿರುವ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡುವಂತಿಲ್ಲ. ಹೂಡಿಕೆಯ ಮೊತ್ತವನ್ನು ಆಯಾ ಸಂಸ್ಥೆಗಳ ಹೆಸರಿನಲ್ಲೇ ತೆರೆದ ಖಾತೆಗಳಿಗೆ ಇಂಟರ್‌ನೆಟ್ ಬ್ಯಾಂಕಿಂಗ್ ಅಥವಾ ಆರ್‌ಟಿಜಿಎಸ್ ಮೂಲಕ ಮಾತ್ರ ವರ್ಗಾಯಿಸಬೇಕು ಎಂಬ ನಿರ್ಬಂಧ ವಿಧಿಸಲಾಗಿದೆ.

2015ರ ಕಾಯ್ದೆ ಮರು ಜಾರಿ, ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟ

ಸಿಬಿಎಸ್‌ಇ, ಐಸಿಎಸ್‌ಇಗೂ ಕನ್ನಡ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಬಿಎಸ್‌ಇ ಹಾಗೂ ಐಸಿಎಸ್‌ಇ ಸೇರಿದಂತೆ ಕೇಂದ್ರ ಪಠ್ಯಕ್ರಮ ಅನುಸರಿಸುವ ಎಲ್ಲಾ ಖಾಸಗಿ ಶಾಲೆಗಳು ಇನ್ನು ಮುಂದೆ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಲಿಸುವುದು ಕಡ್ಡಾಯ.

ಕರ್ನಾಟಕ ಶಿಕ್ಷಣ ಸಂಸ್ಥೆಗಳ (ನಿರಾಕ್ಷೇಪಣಾ ಪ್ರಮಾಣಪತ್ರ ಮತ್ತು ನಿಯಂತ್ರಣದ ವಿತರಣೆ) ಕಾಯ್ದೆಯನ್ನು ಮರು ಜಾರಿಗೊಳಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ನಿಯಮಗಳು ಕನ್ನಡ ಭಾಷಾ ಕಲಿಕೆ ಕಾಯಿದೆ–2015ಕ್ಕೆ ಅನುಗುಣವಾಗಿದ್ದು, ಎಲ್ಲಾ ಶಾಲೆಗಳಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಲಿಸುವುದನ್ನು ಕಡ್ಡಾಯ-ಗೊಳಿಸಿದೆ.

ಹಿಂದೆ ಇದ್ದ ನಿಯಮವೇ ಮರು ಜಾರಿ

2015ರ ಪ್ರಕಾರ ಕೇಂದ್ರೀಯ ಪಠ್ಯಕ್ರಮದ ಶಾಲೆಗಳಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಬೋಧಿಸಲು ನಿಯಮ ರೂಪಿಸಲಾಗಿತ್ತು. ಆದರೆ, ಈ ನಿಯಮಗಳಿಗೆ 2022ರಲ್ಲಿ ತಿದ್ದುಪಡಿ ತಂದಿದ್ದ ರಾಜ್ಯ ಸರ್ಕಾರ ದ್ವಿತೀಯ ಅಥವಾ ತೃತೀಯ ಭಾಷೆಯಾಗಿ ಕಲಿಸಲು ಅವಕಾಶ ಮಾಡಿಕೊಟ್ಟಿತ್ತು. ಸರ್ಕಾರದ ಈ ನಿರ್ಧಾರಕ್ಕೆ ಸಾಹಿತಿಗಳು, ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ ನಂತರ ಮತ್ತೆ 2015ರ ಕಾಯ್ದೆಯ ಮರು ಜಾರಿಗೆ ಇದೇ ಮಾರ್ಚ್‌ನಲ್ಲಿ ತಿದ್ದುಪಡಿ ಮಾಡಿ, ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಅಂತಿಮವಾಗಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

ನಿಯಮಗಳನ್ನು ಪಾಲನೆ ಮಾಡುವ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡಲಿದೆ. ಯಾವುದೇ ಹೊಸ ಶಾಲೆ ಅಥವಾ ಅಸ್ತಿತ್ವದಲ್ಲಿರುವ ಶಾಲೆಯು ಸಿಬಿಎಸ್‌ಇ, ಐಸಿಎಸ್‌ಇಗೆ ಸಂಯೋಜಿತವಾಗಲು ನಿರಾಕ್ಷೇಪಣಾ ಪತ್ರ ಅತ್ಯಗತ್ಯ.

ಕೇಂದ್ರ ಪಠ್ಯಕ್ರಮ ಅನುಸರಿಸುವ ಶಾಲೆಗಳು ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಲಿಸುವುದನ್ನು ಕಡ್ಡಾಯಗೊಳಿಸಿ 2015ರಲ್ಲೇ ಕಾಯ್ದೆ ರೂಪಿಸಿದ್ದರೂ, ನಿಯಮಗಳನ್ನು ಖಾಸಗಿ ಶಾಲೆಗಳು ಪಾಲಿಸಿರಲಿಲ್ಲ. ಕಾಯ್ದೆ ವಿರೋಧಿಸಿ ಹಲವು ಶಾಲಾ ಆಡಳಿತ ಮಂಡಳಿಗಳು, ಪೋಷಕರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅಂದು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ಇಂದಿಗೂ ಬಾಕಿ ಇವೆ.

'ಶಾಲೆಗಳಲ್ಲಿ ಕನ್ನಡ ಕಲಿಸಲು ನಮ್ಮ ವಿರೋಧವಿಲ್ಲ. ಆದರೆ, ಅದನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಲಿಸಬೇಕು ಎಂಬ ಒತ್ತಡಬೇಡ. ಆಯ್ಕೆಯ ವಿಷಯವನ್ನು ಶಾಲೆಗಳು ಮತ್ತು ಪೋಷಕರಿಗೆ ಬಿಡಬೇಕು' ಎಂದು ಸ್ವತಂತ್ರ ಸಿಬಿಎಸ್‌ಇ ಶಾಲೆಗಳ ಸಂಘದ ಆಡಳಿತ ಮಂಡಳಿ ಅಧ್ಯಕ್ಷ ಎಂ.ಶ್ರೀನಿವಾ-ಸನ್ ಹೇಳಿದ್ದಾರೆ.

'ಬೆಂಗಳೂರಿನಲ್ಲಿ ಕನ್ನಡಿಗರ-ಷ್ಟೇ ಇಲ್ಲ. ಇತರೆ ರಾಜ್ಯಗಳಿಂದ ವಲಸೆ ಬಂದಿರುವ ಸಾಕಷ್ಟು ಕುಟುಂಬಗಳಿವೆ. ಅವರ ಮಕ್ಕಳು ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಲಿಯಲು ಕಷ್ಟವಾಗುತ್ತದೆ. ಈಗ ಬಲವಂತವಾಗಿ ಕಲಿಸಿದರೂ 10ನೇ ತರಗತಿಯಲ್ಲಿ ಸಂಕಷ್ಟಕ್ಕೆ ಸಿಲುಕುತ್ತಾರೆ' ಎನ್ನುವುದು ಖಾಸಗಿ ಶಾಲೆಗಳ ವಾದ.

ಎನ್‌ಡಿಆರ್‌ಎಫ್ ಸಿಬ್ಬಂದಿಗೆ 'ಅಪಾಯ ಭತ್ಯೆ'

ನವದೆಹಲಿ (ಪಿಟಿಐ): ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) ಸಿಬ್ಬಂದಿಗೆ ಶೇ 40 'ತೊಂದರೆ ಮತ್ತು ಅಪಾಯ ಭತ್ಯೆ' ನೀಡುವುದಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಶನಿವಾರ ಘೋಷಿಸಿದ್ದಾರೆ.

ಈಚೆಗೆ ಹಿಮಾಚಲ ಪ್ರದೇಶದ ಮಣಿರಂಗ್ ಶಿಖರವನ್ನು ಯಶಸ್ವಿಯಾಗಿ ಏರಿ ಹಿಂತಿರುಗಿದ್ದ ಎನ್‌ಡಿಆರ್‌ಎಫ್‌ನ 35 ಜನರ ಸಾಹಸ ತಂಡಕ್ಕೆ ಅಭಿನಂದನೆ ಸಲ್ಲಿಸುವ ವೇಳೆ ಅಮಿತ್ ಶಾ ಅವರು ಈ ಘೋಷಣೆ ಮಾಡಿದ್ದಾರೆ.

ಅಪಾಯ ಭತ್ಯೆಯು ವಿಪತ್ತು ನಿರ್ವಹಣೆಯಂತಹ ಸವಾಲಿನ ಸಂದರ್ಭದಲ್ಲಿ ತಮ್ಮ ಜೀವ ಪಣಕ್ಕಿಟ್ಟು ಜನರ ಜೀವ ರಕ್ಷಿಸುವ ಎನ್‌ಡಿಆರ್‌ಎಫ್ ಸಿಬ್ಬಂದಿಯ ಬದುಕಿನಲ್ಲಿ ಬದಲಾವಣೆ ತರಲಿದೆ. ಇದರಿಂದ ಎನ್‌ಡಿಆರ್‌ಎಫ್‌ನ ಎಲ್ಲ 16,000 ಸಿಬ್ಬಂದಿಗೆ ಅನುಕೂಲವಾಗಲಿದೆ. ಅಲ್ಲದೆ, ರಾಷ್ಟ್ರೀಯ ಭದ್ರತಾ ಪಡೆ(ಎನ್‌ಎಸ್‌ಜಿ) ಹಾಗೂ ವಿಶೇಷ ಭದ್ರತಾ ಪಡೆಯ (ಎಸ್‌ಪಿಜಿ) ಸಿಬ್ಬಂದಿಗೂ ಶೇ.25 ತೊಂದರೆ ಮತ್ತು ಅಪಾಯ ಭತ್ಯೆ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿರುವುದಾಗಿ ಅವರು ಹೇಳಿದ್ದಾರೆ.

ಇದೇ ವೇಳೆ ಎನ್‌ಡಿಆರ್‌ಎಫ್, ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆ(ಸಿಎಪಿಎಫ್) ಸೇರಿದಂತೆ ಕೇಂದ್ರ ಸರ್ಕಾರದ ಅಡಿ ಬರುವ ಭದ್ರತಾ ಪಡೆಗಳಲ್ಲಿ 'ಕ್ರೀಡಾ ಸಂಸ್ಕೃತಿ' ವೃದ್ಧಿಸಲು ಕ್ರಮ ಕೈಗೊಳ್ಳುವುದಾಗಿಯೂ ಕೇಂದ್ರ ಗೃಹ ಸಚಿವರು ಹೇಳಿದ್ದಾರೆ.

ವಿದ್ಯುತ್ ಯೋಜನೆ: ಪ್ರಧಾನಿ ಮೋದಿ ವಿರುದ್ಧ ಜೈರಾಮ್ ರಮೇಶ್ ಕಿಡಿ

'ಚೀನಾ ನೆರವು ಪಡೆದ ಅದಾನಿ'


ಜೈರಾಮ್ ರಮೇಶ್

ನವದೆಹಲಿ (ಪಿಟಿಐ): 'ಸೌರ ವಿದ್ಯುತ್ ಉತ್ಪಾದನಾ ಯೋಜನೆ'ಗೆ ನೆರವಾಗಲು ಅದಾನಿ ಸಂಸ್ಥೆಯು ಚೀನಾದ ಎಂಟು ಕಂಪನಿಗಳ ನೆರವು ಪಡೆಯಲಿದೆ ಎಂಬ ಪತ್ರಿಕಾ ವರದಿಯನ್ನು ಉಲ್ಲೇಖಿಸಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಶನಿವಾರ ಕಿಡಿಕಾರಿದ್ದಾರೆ.

'ದೇಶದ ತೆರಿಗೆದಾರರ ಹಣವು ಚೀನಾದ ಕಂಪನಿಗಳಿಗೆ ಹೋಗದಂತೆ ನೋಡಿಕೊಳ್ಳಬೇಕು' ಎಂದು ಈ ವೇಳೆ ಒತ್ತಾಯಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ರಮೇಶ್, '2020ರ ಜೂನ್ 19ರಂದು ಗಲ್ವಾನ್ ಘರ್ಷಣೆ ಬಳಿಕ 'ಅಜೈವಿಕ' ಪ್ರಧಾನಮಂತ್ರಿ ದೇಶದ ಜನತೆ ಉದ್ದೇಶಿಸಿ, 'ನಮ್ಮ ಗಡಿಯನ್ನು ಯಾರೂ ಪ್ರವೇಶಿಸಿಲ್ಲ. ಯಾವ ಪ್ರದೇಶವನ್ನೂ ಆಕ್ರಮಿಸಿಲ್ಲ' ಎಂದಿದ್ದರು.

'ಈಗಿದ್ದರೂ 'ಟೆಂಪೋವಾಲಾ' ಸ್ನೇಹಿತರೊಬ್ಬರಿಗೆ ಸಹಾಯ ಮಾಡಲು ಚೀನಾದ ಉದ್ಯೋಗಿಗಳಿಗೆ ಉದಾರವಾಗಿ ವೀಸಾ ನೀಡಲು ಯಾವುದೇ ಹಿಂಜರಿಕೆ ಪ್ರದರ್ಶಿಸಿಲ್ಲ' ಎಂದಿದ್ದಾರೆ.

'ಅದಾನಿ ಸೋಲಾರ್ ಸಂಸ್ಥೆಯು ಚೀನಾದಿಂದ ಕೆಲವು ಎಂಜಿನಿಯರ್‌ಗಳನ್ನು ಕರೆಸಲು ಕೇಂದ್ರದಿಂದ ಅನುಮತಿ ಕೋರಿದ ಕುರಿತು ಪತ್ರಿಕಾ ವರದಿಯನ್ನು ಪೋಸ್ಟ್ ಜೊತೆ ಟ್ಯಾಗ್ ಮಾಡಿದ್ದಾರೆ.

ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು 'ಅದಾನಿ, ಅಂಬಾನಿಯನ್ನು ಟೀಕಿಸುವುದನ್ನು ಏಕೆ ನಿಲ್ಲಿಸಿದ್ದಾರೆ. ಅವರ ಪಕ್ಷವು ಟೆಂಪೊ ಲೋಡ್‌ನಷ್ಟು ಹಣ ಪಡೆದಿದೆಯೇ?' ಎಂದು ಲೋಕಸಭಾ ಚುನಾವಣಾ ಪ್ರಚಾರದ ವೇಳೆ ರಾಹುಲ್ ಗಾಂಧಿ ಗುರಿಯಾಗಿಸಿಕೊಂಡು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದರು. ಇದನ್ನು ನೆನಪಿಸಿ ಜೈರಾಮ್ ರಮೇಶ್ ಅವರು 'ಎಕ್ಸ್'ನಲ್ಲಿ ಬರೆದಿದ್ದಾರೆ.

ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್ಐ) ಯೋಜನೆ ಅಡಿಯಲ್ಲಿ ಜನರ ತೆರಿಗೆ ಹಣದ ಲಾಭ ಪಡೆಯುವ ಅದಾನಿ ಸಂಸ್ಥೆಯು, ತನ್ನ ಸೌರ ವಿದ್ಯುತ್ ಉತ್ಪಾದನಾ ಯೋಜನೆಗೆ ಚೀನಾದ ಎಂಟು ಕಂಪನಿಗಳ ನೆರವು ಪಡೆದಿದ್ದು, 30 ಚೀನಾ ಉದ್ಯೋಗಿಗಳಿಗೆ ವೀಸಾ ನೀಡಲು ವಿಶೇಷ ಅನುಮತಿಗೆ ಮನವಿ ಮಾಡಿದೆ' ಎಂದು ರಮೇಶ್ ಅವರು ಸಾಮಾಜಿಕ ಜಾಲತಾಣದಲ್ಲಿ ಬಹಿರಂಗಪಡಿಸಿದ್ದಾರೆ.

'ಕಲ್ಲಿದ್ದಲು, ಇಂಧನ ತಯಾರಿಕಾ ಉಪಕರಣಗಳಲ್ಲಿ ಹೆಚ್ಚಿನ 'ಇನ್‌ವಾಯ್ಸಿಂಗ್' ಸೃಷ್ಟಿಸಿ ಮೋದಾನಿ (ಮೋದಿ–ಅದಾನಿ) ಹಲವಾರು ಅಕ್ರಮ ಎಸಗಿದ್ದಾರೆ. ಚಾಂಗ್ ಚುಂಗ್–ಲಿಂಗ್, ನಾಸಿರ್ ಅಲಿ ಶಬಾನ್ ಅಲಿ ಅವರು ಇದನ್ನು ವ್ಯವಸ್ಥಿತವಾಗಿ ಕಾರ್ಯಗತಗೊಳಿಸಿದ್ದಾರೆ. ಹೀಗಿದ್ದರೂ ಪಾಲುದಾರ ಹಾಗೂ ಅಕ್ರಮ ಸ್ವಹಿತಾಸಕ್ತಿಗಳ ಲಾಭ ಮಾಡಿಕೊಳ್ಳುವ ಪ್ರಧಾನಿ ಅವರು ದೇಶದ ಭದ್ರತಾ ವಿಚಾರವನ್ನು ಏಕೆ ಪರಿಗಣಿಸಿಲ್ಲ' ಎಂದು ರಮೇಶ್ ಪ್ರಶ್ನಿಸಿದ್ದಾರೆ.

'ಮೋದಿ, ಯೋಗಿಯನ್ನು ದೂಷಿಸದಿರಿ'

ಶಿವಪುರಿ (ಮಧ್ಯಪ್ರದೇಶ), (ಪಿಟಿಐ): 'ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ಪಕ್ಷದ ಕಳಪೆ ಸಾಧನೆಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ದೂಷಿಸಬಾರದು' ಎಂದು ಬಿಜೆಪಿಯ ನಾಯಕಿ ಉಮಾ ಭಾರತಿ ಶನಿವಾರ ಇಲ್ಲಿ ಅಭಿಪ್ರಾಯಪಟ್ಟಿದ್ದಾರೆ.

'ಉತ್ತರ ಪ್ರದೇಶದ ಫಲಿತಾಂಶವನ್ನು ರಾಮನ ಮೇಲೆ ಜನರ ಭಕ್ತಿ ಕಡಿಮೆಯಾಗಿದೆ ಎಂದು ಅರ್ಥೈಸಿಕೊಳ್ಳಬೇಕಿಲ್ಲ. ಪ್ರತಿಯೊಬ್ಬ ರಾಮಭಕ್ತನೂ ಬಿಜೆಪಿಗೆ ಮತ ಹಾಕುತ್ತಾನೆ ಎಂಬ ದುರಹಂಕಾರ ನಮಗೆ ಬೇಡ. ನಮಗೆ ಮತ ನೀಡದವರು ರಾಮ ಭಕ್ತರಲ್ಲ ಎಂದು ಭಾವಿಸಬಾರದು. ಇದು ನಿರ್ಲಕ್ಷ್ಯದ ಫಲಿತಾಂಶವಾಗಿದೆಯೇ ಹೊರತು ಬೇರೇನೂ ಅಲ್ಲ' ಎಂದು ಅವರು ಪ್ರತಿಕ್ರಿಯಿಸಿದರು.

ಅಕ್ರಮ ಮದ್ಯ: ಕಾನೂನಿಗೆ ತಿದ್ದುಪಡಿ

ಚೆನ್ನೈ (ಪಿಟಿಐ): ಜನರ ಜೀವಕ್ಕೆ ಕಂಟಕ ತರುವ ಅಕ್ರಮ ಮದ್ಯ ತಯಾರಿಕೆ, ಸಂಗ್ರಹ ಮತ್ತು ಮಾರಾಟಕ್ಕೆ ವಿಧಿಸಲಾಗುವ ಶಿಕ್ಷೆ ಮತ್ತು ದಂಡದ ಪ್ರಮಾಣ ಹೆಚ್ಚಿಸಲು ತಮಿಳುನಾಡು ನಿಷೇಧ ಕಾಯ್ದೆ–1937ಕ್ಕೆ ಸರ್ಕಾರವು ಶನಿವಾರ ತಿದ್ದುಪಡಿ ಮಾಡಿತು.

ಸರ್ಕಾರವು ಅಧಿಸೂಚನೆ ಹೊರಡಿಸಿದ ದಿನದಿಂದ ತಮಿಳುನಾಡು ನಿಷೇಧ (ತಿದ್ದುಪಡಿ) ಕಾಯ್ದೆ–2024 ಜಾರಿಗೆ ಬರಲಿದ್ದು, ರಾಜ್ಯದಿಂದ ಅಕ್ರಮ ಮದ್ಯ ದಂಧೆಯನ್ನು ಸಂಪೂರ್ಣವಾಗಿ ಹೋಗಲಾಡಿಸುವ ಗುರಿ ಹೊಂದಿದೆ.

ಕಲ್ಲಕುರಿಚ್ಚಿ ಘಟನೆಯ ಹಿನ್ನೆಲೆಯಲ್ಲಿ ಸರ್ಕಾರವು ಕಾನೂನಿಗೆ ತಿದ್ದುಪಡಿ ತಂದಿದ್ದು, ಕಾಯ್ದೆಯ ಸೆಕ್ಷನ್ 4, 5, 6, 7 ಮತ್ತು 11ರ ಅಡಿ ಶಿಕ್ಷೆ ಮತ್ತು ದಂಡದ ಪ್ರಮಾಣ ಹೆಚ್ಚಿಸಬಹುದಾಗಿದೆ.

ಪಾಸ್‌ಪೋರ್ಟ್ ಕೇಂದ್ರಗಳಲ್ಲಿ ಸಿಬಿಐ ಶೋಧ

ಮುಂಬೈ: ಮುಂಬೈ ಮತ್ತು ಮಹಾರಾಷ್ಟ್ರದ ಮತ್ತಿತರ ಕಡೆಗಳಲ್ಲಿ ಇರುವ ಪಾಸ್‌ಪೋರ್ಟ್ ಸೇವಾ ಕೇಂದ್ರಗಳಲ್ಲಿ ದೊಡ್ಡ ಮಟ್ಟದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ತನಿಖೆಯ ಭಾಗವಾಗಿ ಕೇಂದ್ರೀಯ ತನಿಖಾ ದಳವು (ಸಿಬಿಐ) ಹಲವು ಕಡೆಗಳಲ್ಲಿ ಶನಿವಾರ ಶೋಧ ನಡೆಸಿತು.

ಲಭ್ಯವಿರುವ ಮಾಹಿತಿ ಪ್ರಕಾರ, ಮುಂಬೈ ಮತ್ತು ನಾಸಿಕ್‌ನ 33 ಕಡೆಗಳಲ್ಲಿ ಶೋಧ ನಡೆಸಲಾಗಿದೆ.

ಇದಕ್ಕೆ ಸಂಬಂಧಿಸಿದ 32 ಶಂಕಿತರ ವಿರುದ್ಧ 12 ಪ್ರಕರಣಗಳನ್ನು ದಾಖಲಿಸಿಕೊಂಡಿದೆ.

ಜಮ್ಮು–ಕಾಶ್ಮೀರ: ಗಡಿಭಾಗದಲ್ಲಿ ಗುಂಡಿನ ಚಕಮಕಿ

ಮೆಂಧಾರ್/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿನ ಗಡಿಭಾಗದಲ್ಲಿ ಸಣ್ಣಪ್ರಮಾಣದ ಗುಂಡಿನ ಚಕಮಕಿ ನಡೆದಿದೆ.

ಕೃಷ್ಣ ಘಾಟ್‌ನಲ್ಲಿರುವ ಫಾರ್ವರ್ಡ್ ಇಂಡಿಯನ್ ಪೋಸ್ಟ್ ಬಳಿ ಗಡಿಯುದ್ದಕ್ಕೂ ಶುಕ್ರವಾರದ ರಾತ್ರಿ ಗುಂಡಿನ ದಾಳಿ ನಡೆದಿದ್ದು, ಭದ್ರತಾ ಪಡೆಯು ಪ್ರತಿದಾಳಿ ನಡೆಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ದಲಿತ ಸಂಸದನ ಕಣಕ್ಕಿಳಿಸಲು ಚಿಂತನೆ

'ಇಂಡಿಯಾ' ಕೂಟದ ತಂತ್ರಗಾರಿಕೆ

ಪ್ರಜಾವಾಣಿ ವಾರ್ತೆ


ರಾಹುಲ್ ಗಾಂಧಿ

ನವದೆಹಲಿ: ಲೋಕಸಭೆಯ ಉಪಸಭಾಪತಿ ಆಯ್ಕೆಯ ವಿಚಾರದಲ್ಲಿ 'ಇಂಡಿಯಾ' ಕೂಟವು ವಿನೂತನ ತಂತ್ರದ ಮೊರೆಹೋಗಿದೆ. ಸಮಾಜವಾದಿ ಪಕ್ಷದ ಸಂಸದ ಅವಧೇಶ್ ಪ್ರಸಾದ್ ಅವರನ್ನು 'ಇಂಡಿಯಾ' ಕೂಟದ ಅಭ್ಯರ್ಥಿಯಾಗಿ ಕಣಕ್ಕಿಳಿಸುವ ಮೂಲಕ ಪ್ರಬಲ ಅಸ್ತ್ರ ಪ್ರಯೋಗಿಸಲು ಮುಂದಾಗಿದೆ.

ಪ್ರಸಾದ್ ಅವರು ಉತ್ತರ ಪ್ರದೇಶದ ಫೈಜಾಬಾದ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದು, ಇದೇ ಕ್ಷೇತ್ರದ ವ್ಯಾಪ್ತಿಯಲ್ಲಿಯೇ ಅಯೋಧ್ಯೆ ಬರುತ್ತದೆ.ರಾಮಲಲ್ಲಾನ ಪ್ರಾಣ ಪ್ರತಿಷ್ಠಾಪನೆಯ ನಡುವೆಯೂ ಬಿಜೆಪಿ ಅಭ್ಯರ್ಥಿ ಲಲ್ಲು ಸಿಂಗ್ ಅವರನ್ನು ಪ್ರಸಾದ್ 54,567 ಮತಗಳಿಂದ ಸೋಲಿಸಿದ್ದರು.

ಎನ್‌ಡಿಎ ಉಪಸಭಾಪತಿ ಸ್ಥಾನವನ್ನೂ ತಮ್ಮ ಕೂಟದವರಿಗೇ ಕೊಡಲು ಇಚ್ಛಿಸುತ್ತಿದ್ದು, ವಿರೋಧಿ ಕೂಟಕ್ಕೆ ಬಿಟ್ಟುಕೊಡುವ ಸಾಧ್ಯತೆಗಳಿಲ್ಲ ಎನ್ನಲಾಗುತ್ತಿದೆ. ಹೀಗಿರುವಾಗ ದಲಿತ ಸಮುದಾಯಕ್ಕೆ ಸೇರಿದ್ದು, ಸಾಮಾನ್ಯ ಕ್ಷೇತ್ರದಲ್ಲಿ ಗೆದ್ದಿರುವ ಅವದೇಶ್ ಪ್ರಸಾದ್ ಅವರನ್ನು ಅಭ್ಯರ್ಥಿಯನ್ನಾಗಿ ಮಾಡುವ ಮೂಲಕ ಬಲವಾದ ಸಂದೇಶ ರವಾನಿಸಲು 'ಇಂಡಿಯಾ' ಕೂಟ ಮುಂದಾಗಿದೆ.

ಈ ಸಂಬಂಧ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಮತ್ತು ಟಿಎಂಸಿ ಮುಖಂಡ ಅಭಿಷೇಕ್ ಬ್ಯಾನರ್ಜಿ ಮಾತುಕತೆಯನ್ನೂ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎನ್‌ಡಿಎ ಕೂಟದಲ್ಲಿ 293 ಸಂಸದರಿದ್ದರೆ, 'ಇಂಡಿಯಾ' ಕೂಟದಲ್ಲಿ 236 ಸಂಸದರಿದ್ದಾರೆ. ಉಳಿದಂತೆ ಆರು ಪಕ್ಷಗಳಿಗೆ ಸೇರಿದ 9 ಸಂಸದರು ಯಾವ ಕೂಟಕ್ಕೂ ಸೇರಿಲ್ಲ.

ಉಪಸಭಾಪತಿ ಚುನಾವಣೆಯನ್ನು ಆದಷ್ಟು ಬೇಗ ನಡೆಸುವಂತೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆಯಲು 'ಇಂಡಿಯಾ' ಕೂಟ ತೀರ್ಮಾನಿಸಿದೆ.

17ನೇ ಲೋಕಸಭೆಯ ಉದ್ದಕ್ಕೂ ಡೆಪ್ಯುಟಿ ಸ್ಪೀಕರ್ ಕುರ್ಚಿ ಖಾಲಿಯಾಗಿಯೇ ಇತ್ತು.

ಚುನಾವಣಾ ಫಲಿತಾಂಶ ಮೋದಿಯ ನೈತಿಕ ಸೋಲು: ಸೋನಿಯಾ ಗಾಂಧಿ



ನವದೆಹಲಿ (ಪಿಟಿಐ): 'ಲೋಕಸಭೆ ಚುನಾವಣೆಯ ತೀರ್ಪು ಪ್ರಧಾನಿ ನರೇಂದ್ರ ಮೋದಿ ಅವರ ವೈಯಕ್ತಿಕ, ರಾಜಕೀಯ ಮತ್ತು ನೈತಿಕ ಸೋಲನ್ನು ಸೂಚಿಸುತ್ತದೆ' ಎಂದು ಕಾಂಗ್ರೆಸ್‌ನ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಪ್ರತಿಪಾದಿಸಿದ್ದಾರೆ.

'ತನ್ನನ್ನು ತಾನು ದೈವಿಕ ಶಕ್ತಿ ಎಂದು ಘೋಷಿಸಿಕೊಂಡ ಮೋದಿ ಅವರನ್ನು ಮತ್ತು ಅವರ ದ್ವೇಷದ ರಾಜಕಾರಣವನ್ನು ಈ ಚುನಾವಣಾ ಫಲಿತಾಂಶ ತಿರಸ್ಕರಿಸಿದೆ. ಆದರೆ ಅವರು ಏನೂ ಆಗಿಲ್ಲವೆಂಬಂತೆ ಮುಂದುವರಿದಿದ್ದಾರೆ' ಎಂದು ಅವರು ಇಂಗ್ಲಿಷ್ ಪತ್ರಿಕೆಯೊಂದಕ್ಕೆ ಬರೆದಿರುವ ಲೇಖನದಲ್ಲಿ ಹೇಳಿದ್ದಾರೆ.

ಪ್ರಧಾನಿ ಅವರ ಪ್ರತಿನಿಧಿಗಳು ಸ್ಪೀಕರ್ ಸ್ಥಾನಕ್ಕೆ ಸರ್ವಾನುಮತದ ಬೆಂಬಲ ಕೋರಿದಾಗ, 'ಇಂಡಿಯಾ' ಒಕ್ಕೂಟ ಆರಂಭದಲ್ಲಿ ಸಮ್ಮತಿಸಿತ್ತು. ಆದರೆ ಸಂಪ್ರದಾಯದಂತೆ ವಿರೋಧ ಪಕ್ಷದವರಿಗೆ ಉಪ ಸ್ಪೀಕರ್ ಸ್ಥಾನ ನೀಡುವಂತೆ ಕೋರಿದಾಗ ಆ ಮನವಿಯನ್ನು ಅವರು ತಿರಸ್ಕರಿಸಿದರು ಎಂದು ಅವರು ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ.

ಇದರ ಬೆನ್ನಲ್ಲೇ ಸ್ಪೀಕರ್ ಮತ್ತು ಪ್ರಧಾನಿ ಅವರು ತುರ್ತುಪರಿಸ್ಥಿತಿ ಬಗ್ಗೆ ಪ್ರಸ್ತಾಪಿಸಿ, ಗಮನ ಬೇರೆಡೆಗೆ ಸೆಳೆಯಲು ತಂತ್ರ ರೂಪಿಸಿದರು. ತುರ್ತು ಪರಿಸ್ಥಿತಿಗೆ ಸಂಬಂಧಿಸಿದಂತೆ ದೇಶದ ಜನರು 1977ರಲ್ಲಿ ನೀಡಿದ್ದ ತೀರ್ಪನ್ನು ನಾವು ಸ್ವೀಕರಿಸಿದ್ದೇವೆ' ಎಂದು ಅವರು ಹೇಳಿದ್ದಾರೆ.

ಜುಲೈ 1ರಿಂದ ಜಾರಿಗೆ ಬರಲಿರುವ ಮೂರು ಅಪರಾಧ ಕಾನೂನುಗಳು ಸಂಸತ್ತಿನ ಸಂಪೂರ್ಣ ಪರಿಶೀಲನೆಗೆ ಒಳಪಡುವವರೆಗೆ ಹಿಂತೆಗೆದುಕೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ. 146 ಸಂಸತ್ ಸದಸ್ಯರನ್ನು ಅಮಾನತು ಮಾಡಿದ್ದ ಸಂದರ್ಭದಲ್ಲಿ ಈ ಕಾಯ್ದೆಗಳಿಗೆ ಸಂಬಂಧಿಸಿದ ಮಸೂದೆಗಳನ್ನು ಅಂಗೀಕರಿಸಲಾಗಿತ್ತು. ಹೀಗಾಗಿ ಅವುಗಳನ್ನು ಪೂರ್ಣವಾಗಿ ಪರಿಶೀಲಿಸುವ ಅಗತ್ಯವಿದೆ ಎಂದು ಅವರು ಒತ್ತಾಯಿಸಿದ್ದಾರೆ.

ವೈದ್ಯಕೀಯ ಪ್ರವೇಶ ಪರೀಕ್ಷೆ 'ನೀಟ್' ಕುರಿತು ಪ್ರಸ್ತಾಪಿಸಿರುವ ಅವರು, 'ಪರೀಕ್ಷಾ ಪೇ ಚರ್ಚಾ' ಮಾಡುವ ಪ್ರಧಾನಿ ಅವರು 'ನೀಟ್' ಅಕ್ರಮಗಳ ಬಗ್ಗೆ ಏಕೆ ಮೌನವಾಗಿದ್ದಾರೆ ಎಂದು ಪ್ರಶ್ನಿಸಿದ್ದಾರೆ.

ಸಿಪಿಎಂ ಭೂಮಿ, ಠೇವಣಿ ಜಪ್ತಿ

ಕೊಚ್ಚಿ (ಪಿಟಿಐ): ಕರುವನ್ನೂರು ಸರ್ವೀಸ್ ಕೋ–ಆಪರೇಟಿವ್ ಬ್ಯಾಂಕ್ ಹಗರಣದ ಅಕ್ರಮ ಹಣ ವರ್ಗಾವಣೆಯಲ್ಲಿ ಸಿಪಿಎಂ ಭಾಗಿಯಾಗಿರುವುದು ಕಂಡುಬಂದ ಬೆನ್ನಲ್ಲೇ ಜಾರಿ ನಿರ್ದೇಶನಾಲಯವು ಪಕ್ಷಕ್ಕೆ ಸೇರಿದ ಭೂಮಿ, ₹63 ಲಕ್ಷ ಬ್ಯಾಂಕ್ ಠೇವಣಿಯನ್ನು ಜಪ್ತಿ ಮಾಡಿದೆ ಅಧಿಕೃತ ಮೂಲಗಳು ತಿಳಿಸಿವೆ.

ತನ್ನ ಮೇಲಿನ ಆರೋಪ ಹಾಗೂ ತಪ್ಪು ಎಸಗಿರುವುದನ್ನು ಸಿಪಿಎಂ ತಿರಸ್ಕರಿಸಿದೆ.

ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಆಸ್ತಿ ಜಪ್ತಿ ಮಾಡಲು ತಾತ್ಕಾಲಿಕ ಆದೇಶ ಹೊರಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ತ್ರಿಶೂರ್ ಜಿಲ್ಲೆಯಲ್ಲಿದ್ದ ₹10 ಲಕ್ಷ ಮೌಲ್ಯದ ಭೂಮಿ, ರಾಜಕೀಯ ಪಕ್ಷವು ಬಹಿರಂಗಪಡಿಸದ ಐದು ಬ್ಯಾಂಕ್ ಖಾತೆಗಳಲ್ಲಿ ಇಡಲಾದ ₹63 ಲಕ್ಷ ಠೇವಣಿಯನ್ನು ಜಪ್ತಿ ಮಾಡಲಾಗಿದೆ.

ಜಾರಿ ನಿರ್ದೇಶನಾಲಯ ಮಾಡಿದ ಎಲ್ಲ ಆರೋಪಗಳನ್ನು ಸಿಪಿಎಂ ನಿರಾಕರಿಸಿದ್ದು, ಕಾನೂನು ಹೋರಾಟ ನಡೆಸುವುದಾಗಿ ತಿಳಿಸಿದೆ.

'ವಿವಿಧ ಪ್ರಕರಣಗಳಲ್ಲಿ ವಿರೋಧ ಪಕ್ಷಗಳು, ಮುಖಂಡರನ್ನು ರಾಜಕೀಯ ಕಾರಣದಿಂದ ಇ.ಡಿ ಗುರಿಯಾಗಿಸುತ್ತಿದೆ. ಪಕ್ಷ ವಿರುದ್ಧ ಯಾವುದೇ ಸಾಕ್ಷಿ ಸಂಗ್ರಹಿಸದೇ, ಗೊಂದಲ ಸೃಷ್ಟಿಸುತ್ತಿದೆ' ಎಂದು ತಿಳಿಸಿದೆ.

ಬಿಜೆಪಿ: ನಡ್ಡಾ ಅವಧಿ ವಿಸ್ತರಣೆ ಸಾಧ್ಯತೆ

ಪ್ರಜಾವಾಣಿ ವಾರ್ತೆ


ಜೆ.ಪಿ.ನಡ್ಡಾ

ನವದೆಹಲಿ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಜೆ.ಪಿ.ನಡ್ಡಾ ಅವರ ಅವಧಿ ಭಾನುವಾರ ಕೊನೆಗೊಳ್ಳಲಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಸಂಪುಟ ಸೇರಿರುವ ನಡ್ಡಾ ಅವರ ಪಕ್ಷದ ಅಧ್ಯಕ್ಷ ಹುದ್ದೆಯ ಅವಧಿ ಮತ್ತೊಮ್ಮೆ ವಿಸ್ತರಣೆ ಆಗುವ ಸಾಧ್ಯತೆ ಇದ್ದು, ಮುಂದಿನ ವರ್ಷದ ಜನವರಿವರೆಗೆ ಅವರು ಮುಂದುವರೆಯುತ್ತಾರೆ ಎಂದು ಮೂಲಗಳು ತಿಳಿಸಿವೆ.

ನಡ್ಡಾ ಅವರ ಮೂರು ವರ್ಷದ ಎರಡನೇ ಅವಧಿಯು ಜನವರಿ 2024ಕ್ಕೆ ಅಂತ್ಯಗೊಂಡಿತ್ತು. ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಅವರ ಅವಧಿಯನ್ನು ವಿಸ್ತರಿಸಲಾಗಿತ್ತು.

'ಪಕ್ಷದ ಆಂತರಿಕ ಚುನಾವಣೆಯು ದೀರ್ಘ ಪ್ರಕ್ರಿಯೆಯಾಗಿದೆ. ಪ್ರತಿ ರಾಜ್ಯ ಘಟಕವೂ ಹಲವು ಚುನಾವಣೆಗಳನ್ನು ನಡೆಸಬೇಕಾಗುತ್ತದೆ. ಅದಕ್ಕೆ ಎರಡರಿಂದ ಮೂರು ತಿಂಗಳು ಕಾಲ ಹಿಡಿಯುತ್ತದೆ. ನಡ್ಡಾಜೀ ಅದನ್ನೆಲ್ಲ ನೋಡಿಕೊಳ್ಳಲಿದ್ದಾರೆ' ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಇದೇ ವೇಳೆ, ಪಕ್ಷವು ಹಲವು ಮಂದಿ ಕಾರ್ಯಾಧ್ಯಕ್ಷರನ್ನು ನೇಮಿಸುವ ಸಾಧ್ಯತೆ ಹೆಚ್ಚಾಗಿದೆ. ಅಮಿತ್ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ನಡ್ಡಾ ಕಾರ್ಯಾಧ್ಯಕ್ಷರಾಗಿದ್ದರು.

ತೊಡಕು, ಅಡ್ಡಿ ಆತಂಕದ ನಡುವೆ...

- 5,225 ಕಿ.ಮೀ. ಉದ್ದದ 39 ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾರ್ಪಡಿಸಬೇಕು ಎಂದು ಕರ್ನಾಟಕ ಸರ್ಕಾರ ಆರು ವರ್ಷಗಳ ಹಿಂದೆಯೇ ಪ್ರಸ್ತಾವ ಸಲ್ಲಿಸಿದೆ. ಮುಖ್ಯಮಂತ್ರಿ, ಲೋಕೋಪಯೋಗಿ ಸಚಿವರು ಹಾಗೂ ಸಂಸದರು ಈ ಸಂಬಂಧ ಒತ್ತಡ ಹೇರಿದ್ದಾರೆ.
- ಮಂಗಳೂರು-ಬೆಂಗಳೂರು ಸಂಪರ್ಕಿಸುವ ಶಿರಾಡಿ ಘಾಟಿಯಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಸುರಂಗ ನಿರ್ಮಿಸಬೇಕು ಎಂಬ ಬೇಡಿಕೆ. ಇದಕ್ಕೆ ಪರಿಸರವಾದಿಗಳ ವಿರೋಧ ಇದೆ.
- ಬೆಂಗಳೂರಿನ ಹೊರವರ್ತುಲ ರಸ್ತೆಯಲ್ಲಿ ದಟ್ಟಣೆ ಸಮಸ್ಯೆ ನಿವಾರಿಸಲು ನೈಸ್ ರಸ್ತೆಯ ಮಾದರಿಯಲ್ಲೇ ತುಮಕೂರು ರಸ್ತೆಯಿಂದ ಹೊಸೂರು ರಸ್ತೆವರೆಗೆ ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ನಿರ್ಮಿಸುವ ಯೋಜನೆಗೆ ಕೇಂದ್ರ ಸರ್ಕಾರದಿಂದ ₹6 ಸಾವಿರ ಕೋಟಿ ನೆರವು ಕೇಳಲಾಗಿದೆ. ಈ ಪ್ರಸ್ತಾವಕ್ಕೆ ಹಣಕಾಸು ಸಚಿವಾಲಯ ಸಹಮತ ವ್ಯಕ್ತಪಡಿಸಿಲ್ಲ.
- ಪಶ್ಚಿಮಘಟ್ಟದ ಜೀವ ವೈವಿಧ್ಯದ ಸಂರಕ್ಷಣೆಗೆ ಉದ್ದೇಶದಿಂದ ಡಾ.ಕೆ.ಕಸ್ತೂರಿ ರಂಗನ್ ಸಮಿತಿಯನ್ನು ಕೇಂದ್ರ ಸರ್ಕಾರ ಸಮಿತಿ ರಚಿಸಿತ್ತು. ಪಶ್ಚಿಮಘಟ್ಟದ ಶೇ 37ರಷ್ಟು ಅರಣ್ಯ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸಬೇಕು ಎಂದು ಸಮಿತಿ ಶಿಫಾರಸು ಮಾಡಿತ್ತು. ಈ ವರದಿಯನ್ನು ತಿರಸ್ಕರಿಸಬೇಕು ಎಂದು ಕರ್ನಾಟಕ ಸರ್ಕಾರವು ಕೇಂದ್ರಕ್ಕೆ ಶಿಫಾರಸು ಮಾಡಿದೆ.
- ರಾಜ್ಯದ ರಾಯಚೂರಿನಲ್ಲಿ ಏಮ್ಸ್ ಸ್ಥಾಪಿಸಬೇಕು ಎಂದು ಒತ್ತಾಯಿಸಿ ಸಚಿವರು ಹಾಗೂ ಸಂಸದರ ನಿಯೋಗವು ಆರೋಗ್ಯ ಸಚಿವರಿಗೆ ಎರಡು ಸಲ ಮನವಿ ಸಲ್ಲಿಸಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಎರಡು ಬಾರಿ ಪತ್ರ ಬರೆದಿದ್ದರು.
- ಹಾಸನ ಅಥವಾ ಮೈಸೂರಿನಲ್ಲಿ ಐಐಟಿ (ಭಾರತೀಯ ತಂತ್ರಜ್ಞಾನ ಸಂಸ್ಥೆ) ಸ್ಥಾಪಿಸಬೇಕು ಎಂದು ರಾಜ್ಯ ಸರ್ಕಾರ ಮನವಿ ಮಾಡಿದೆ. ಈ ವಿಷಯದಲ್ಲಿ ಪ್ರಧಾನಿ ಮಧ್ಯಪ್ರವೇಶಿಸಬೇಕು ಎಂದು ಹಕ್ಕೊತ್ತಾಯ ಮಂಡಿಸಿದೆ. ಅದೂ ಕಾರ್ಯಗತವಾಗಿಲ್ಲ.
- ಬೆಂಗಳೂರಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ 'ನಮ್ಮ ಮೆಟ್ರೊ' ಮೂರನೇ ಹಂತದ ಯೋಜನೆಗೆ ಅನುಮೋದನೆ ಕೋರಿ ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಸರಿಸುಮಾರು ಒಂದೂವರೆ ವರ್ಷಗಳು ಕಳೆದಿವೆ. ಇದಕ್ಕೆ ಕೇಂದ್ರದಿಂದ ಒಪ್ಪಿಗೆ ಸಿಕ್ಕಿಲ್ಲ. ₹15,611 ಕೋಟಿ ಮೊತ್ತದ ಯೋಜನೆಯ ಎರಡು ಕಾರಿಡಾರ್‌ಗಳಲ್ಲಿ ಒಟ್ಟು 44.65 ಕಿಲೋ ಮೀಟರ್‌ನಷ್ಟು ಮೆಟ್ರೊ ರೈಲು ಮಾರ್ಗ ನಿರ್ಮಿಸುವ ಯೋಜನೆ ಇದಾಗಿದೆ.



ರಾಜ್ಯ ಏರಿಗೆ– ಕೇಂದ್ರ ನೀರಿಗೆ



ಒಂದನೇ ಪುಟದಿಂದ..

ಅಂತಹ ಸಂಕಷ್ಟದ ಸಮಯದಲ್ಲಿ ಕಾವೇರಿ ನೀರು ಬಿಡುಗಡೆಗೆ ಪಟ್ಟು ಹಿಡಿದು ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಪ್ರಕರಣದ ವಿಚಾರಣೆಯ ದಿನದಂದು ಜಲಸಂಪನ್ಮೂಲ ಸಚಿವರು ಹಾಜರಿರುವುದು 'ಸಂಪ್ರದಾಯ'. ಸೆಪ್ಟೆಂಬರ್ 21ರಂದು ಸುಪ್ರೀಂ ಕೋರ್ಟ್ ಆದೇಶ ಪ್ರಕಟಿಸುವುದಿತ್ತು. ಅಂದು ಬೆಳಿಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿ ಮನವಿ ಪತ್ರ ಅರ್ಪಿಸಿ ರಾಜ್ಯದ ಹಿತ ಕಾಯುವಂತೆ ಕೋರಿಕೊಂಡರು. ಬಳಿಕ ಸಚಿವರು ಕರ್ನಾಟಕ ಭವನ ಸೇರಿಕೊಂಡರು. ಬೆಳಿಗ್ಗೆಯಿಂದ ಸಂಜೆವರೆಗೆ ಆಪ್ತರೊಂದಿಗೆ ಸಮಾಲೋಚನೆ ಹಾಗೂ 'ವಿಶ್ರಾಂತಿ'ಗೆ ಸಮಯ ಮೀಸಲಿಟ್ಟರು. ತಮಿಳುನಾಡಿಗೆ ನೀರು ಬಿಡುಗಡೆ ಮಾಡಬೇಕೆಂಬ ಕಾವೇರಿ ನೀರು ನಿರ್ವಹಣಾ ಮಂಡಳಿಯ ನಿರ್ದೇಶನದಲ್ಲಿ ಮಧ್ಯ ಪ್ರವೇಶಿಸುವುದಿಲ್ಲ ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು.

ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದ ಯೋಜನೆಗಳ ಅನುಮೋದನೆಯ ವಿಚಾರ ತೆಗೆದುಕೊಂಡರೆ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು ನಿರ್ಲಕ್ಷ್ಯ ಧೋರಣೆಯನ್ನು ಅನುಸರಿಸುತ್ತಲೇ ಇದೆ. ಕರ್ನಾಟಕವು ಬಿಜೆಪಿಗೆ ದಕ್ಷಿಣ ರಾಜ್ಯಗಳ ಹೆಬ್ಬಾಗಿಲು ಎಂದೇ ಹೇಳಿಕೊಂಡರೂ, ಹೆಚ್ಚು ಸಂಸದರನ್ನು ನೀಡಿದರೂ ರಾಜ್ಯಕ್ಕೆ ರಾಜಕೀಯ ಅನುಕೂಲ ಆಗಿದ್ದು ಕಡಿಮೆಯೇ ಎನ್ನುವುದಕ್ಕೆ ಸಾಲು ಸಾಲು ಉದಾಹರಣೆ ಕಾಣಬಹುದು.

ಕರ್ನಾಟಕವು ದೇಶದ ಆರ್ಥಿಕತೆಗೆ ಅತಿ ದೊಡ್ಡ ಮಟ್ಟದ ಸಂಪನ್ಮೂಲ ನೀಡುತ್ತಿದೆ. ರಾಜ್ಯದಿಂದ ಕೇಂದ್ರಕ್ಕೆ ಸಲ್ಲಿಕೆಯಾಗುತ್ತಿರುವ ಜಿಎಸ್‌ಟಿ ಮೊತ್ತವೇ ವಾರ್ಷಿಕ ₹1.20 ಲಕ್ಷ ಕೋಟಿಗಳಷ್ಟು. ಆದರೆ, ರಾಜ್ಯದ ಅಭಿವೃದ್ಧಿ ಯೋಜನೆಗಳ ವಿಷಯದಲ್ಲಿ ಕೇಂದ್ರದ ನೆರವು ನಿರೀಕ್ಷಿತ ಮಟ್ಟದಲ್ಲಿ ಸಿಗುತ್ತಿಲ್ಲ. ಈ ವಿಷಯ ಕೇಂದ್ರ ಹಾಗೂ ರಾಜ್ಯ ಸರ್ಕಾರದ ನಡುವೆ ಸಂಘರ್ಷಕ್ಕೂ ಕಾರಣವಾಗಿದೆ.

ಅರಣ್ಯ ದಾಟೀತೇ 'ಮೇಕೆದಾಟು': ಮೇಕೆದಾಟು ಯೋಜನೆ ಕಾಂಗ್ರೆಸ್ ಸರ್ಕಾರದ ಕನಸಿನ ಯೋಜನೆ. ಸಮತೋಲನ ಜಲಾಶಯ ನಿರ್ಮಿಸಿ 64 ಟಿಎಂಸಿ ನೀರು ಸಂಗ್ರಹಿಸುವುದು ಹಾಗೂ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರಿನ ದಾಹ ತಣಿಸಲು ಆರು ಟಿಎಂಸಿ ಅಡಿಗಳಷ್ಟು ನೀರು ಪೂರೈಸುವುದು ಈ ಯೋಜನೆಯ ಸಾರ. ಎಂ.ಬಿ.ಪಾಟೀಲ ಅವರು ಜಲಸಂಪನ್ಮೂಲ ಸಚಿವರಾಗಿದ್ದ ಹೊತ್ತಿನಲ್ಲೇ ಈ ಯೋಜನೆಯ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿದ್ದು. ಈ ಯೋಜನೆಗಾಗಿ 5,400 ಹೆಕ್ಟೇರ್ ಅರಣ್ಯ ಭೂಮಿ ಬಳಸಲಾಗುತ್ತದೆ ಎಂದು ರಾಜ್ಯ ಸರ್ಕಾರ ಹೇಳಿಕೊಂಡಿತು. ಇಷ್ಟೊಂದು ಕಾಡು ನಾಶಗೊಳಿಸಿ ಬೆಂಗಳೂರಿಗೆ ನೀರು ಹರಿಸುವ ಅಗತ್ಯವಿದೆಯೇ. 'ಈ ಯೋಜನೆಗೆ ಬಳಸುವ ಅರ್ಧಾಂಶ ಹಣವನ್ನು ಬಳಸಿ ಬೆಳ್ಳಂದೂರು, ವರ್ತೂರಿನಂತಹ ದೊಡ್ಡ ಕೆರೆಗಳನ್ನು ಪುನರುಜ್ಜೀವನಗೊಳಿಸಬಹುದಲ್ಲವೇ' ಎಂಬ ಜಲತಜ್ಞರ ಸಲಹೆಗೆ ಸರ್ಕಾರ ಕಿವಿಗೊಡಲಿಲ್ಲ. 2019ರಲ್ಲಿ ರಾಜ್ಯ ಸರ್ಕಾರ ಡಿಪಿಆರ್ ಸಲ್ಲಿಸಿತು. ಆಯೋಗವು ಅದನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಸಾಗ ಹಾಕಿತು. ಈ ವಿಷಯವನ್ನು ಸಭೆಯ ಕಾರ್ಯಸೂಚಿಯಲ್ಲಿ ಸೇರಿಸಬೇಕೇ ಬೇಡವೇ ಎಂದು ಯೋಚಿಸುತ್ತಾ ಪ್ರಾಧಿಕಾರವು ಮೂರು ವರ್ಷಗಳಷ್ಟು ಕಾಲ ಹರಣ ಮಾಡಿತು. ಕೊನೆಗೆ ಯಾವುದೇ ತೀರ್ಮಾನಕ್ಕೆ ಬಾರದೆ ಈ ವರ್ಷದ ಆರಂಭದಲ್ಲಿ ಜಲ ಆಯೋಗಕ್ಕೆ ಕಡತವನ್ನು ವಾಪಸ್ ಕಳುಹಿಸಿತು. ಅಲ್ಲಿಗೆ ಐದು ವರ್ಷ ವ್ಯರ್ಥವಾದಂತಾಯಿತು.

ಈ ಯೋಜನೆಗೆ ಪರಿಸರ ಅನುಮೋದನೆಯನ್ನೂ ಪಡೆಯಬೇಕು. ರಾಜ್ಯ ಸರ್ಕಾರವು 2019ರಲ್ಲೇ ಪರಿಸರ ಸಚಿವಾಲಯಕ್ಕೂ ಅರ್ಜಿ ಗುಜರಾಯಿಸಿತು. ಅಂತರ್ ರಾಜ್ಯ ಜಲವಿವಾದದ ನೆಪವೊಡ್ಡಿದ ಸಚಿವಾಲಯವು ಈ ಪ್ರಸ್ತಾವವನ್ನು 2020ರಲ್ಲಿ ಪರಿವೇಷ್ ಪೋರ್ಟಲ್‌ನಿಂದ ತೆಗೆದು ಹಾಕಲಾಯಿತು. ರಾಜ್ಯ ಇನ್ನಷ್ಟೇ ಹೊಸದಾಗಿ ಅರ್ಜಿ ಸಲ್ಲಿಸಬೇಕಿದೆ. ನೀರಾವರಿ ಯೋಜನೆಗಾಗಿ 5 ಸಾವಿರ ಹೆಕ್ಟೇರ್‌ಗಳಷ್ಟು ಬೃಹತ್ ಪ್ರಮಾಣದ ಕಾಡು ನಾಶಗೊಳಿಸುವ ಪ್ರಸ್ತಾವಕ್ಕೆ ಪರಿಸರ ಸಚಿವಾಲಯ ಒಪ್ಪಿಗೆ ನೀಡಿದ ಉದಾಹರಣೆಯೇ ಈಚಿನ ವರ್ಷಗಳಲ್ಲಿ ಇಲ್ಲ ಎನ್ನಬಹುದು. ಯೋಜನೆ ಅನುಷ್ಠಾನ ಆಗಲೇಬೇಕು ಎಂದು ಕಾಂಗ್ರೆಸ್ ಪಕ್ಷವು ಕೋವಿಡ್ ಭೀಕರವಾಗಿದ್ದ ಸಮಯದಲ್ಲೇ ಪಾದಯಾತ್ರೆ ನಡೆಸಿತ್ತು. ಆದರೂ ಯಾವುದೇ ಪ್ರಯೋಜನವಾಗಿಲ್ಲ.

ಚುರುಕಿನಿಂದ ಓಡಾಡಿದ ಕಡತಗಳು: ಕಳಸಾ-ಬಂಡೂರಿ ಯೋಜನೆಗೆ ಮಹದಾಯಿ ನ್ಯಾಯಮಂಡಳಿ ನೀರಿನ ಹಂಚಿಕೆ ಮಾಡಿದ್ದು 2018ರಲ್ಲಿ. ರಾಜ್ಯ ಸರ್ಕಾರವು ಅದೇ ವರ್ಷ ಕಾರ್ಯಸಾಧ್ಯತಾ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಿತು. ಈ ಯೋಜನೆಗಾಗಿ 499 ಹೆಕ್ಟೇರ್ ಅರಣ್ಯ ಬಳಕೆ ಮಾಡಲಾಗುತ್ತದೆ ಎಂಬ ಉಲ್ಲೇಖ ಅದರಲ್ಲಿತ್ತು. ನಾಲ್ಕು ವರ್ಷ ಕಳೆದರೂ ಯೋಜನೆಗೆ ಅಂಕಿತ ಸಿಗಲಿಲ್ಲ. 2022ರಲ್ಲಿ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಹಾಗೂ ಜಲಸಂಪನ್ಮೂಲ ಸಚಿವರಾಗಿದ್ದ ಗೋವಿಂದ ಕಾರಜೋಳ ಅವರು ಯೋಜನೆ ಸ್ವರೂಪ ಬದಲಿಸುವ ತೀರ್ಮಾನಕ್ಕೆ ಬಂದರು. ಕಾಡು ನಾಶ ಕಡಿಮೆ ಮಾಡಿ ಬೃಹತ್ ಪೈಪ್‌ಗಳ ಮೂಲಕ ಮಹದಾಯಿ ನೀರನ್ನು ಹರಿಸಲು ತೀರ್ಮಾನಿಸಿದರು. ಈ ಪ್ರಸ್ತಾವಕ್ಕೆ ಕೇಂದ್ರದಿಂದ ಮೂರೇ ತಿಂಗಳಲ್ಲಿ ಸಹಿ ಬಿತ್ತು. ವಿಧಾನಸಭಾ ಚುನಾವಣೆಯೊಳಗೆ ಈ ಯೋಜನೆಗೆ ಭೂಮಿ ಪೂಜೆ ಮಾಡಬೇಕೆಂದು ರಾಜ್ಯ ಬಿಜೆಪಿ ಸರ್ಕಾರ ಸಂಕಲ್ಪ ಮಾಡಿತು. ಗುದ್ದಲಿ ಪೂಜೆ ಮಾಡುವ ಮುನ್ನ ಯೋಜನೆಗೆ ಅರಣ್ಯ ಅನುಮೋದನೆ ಪಡೆಯಬೇಕಿತ್ತು. ಈ ಕೆಲಸದ ಮಾಡಲು ಮುಖ್ಯಮಂತ್ರಿ ಸಚಿವಾಲಯವೇ ಮೇಲುಸ್ತುವಾರಿ ವಹಿಸಿಕೊಂಡಿತು. ಮೂರು ತಿಂಗಳ ಅವಧಿಯಲ್ಲಿ ಬೆಳಗಾವಿ, ಬೆಂಗಳೂರು ಹಾಗೂ ನವದೆಹಲಿ ನಡುವೆ ಕಡತಗಳು ಚುರುಕಿನಿಂದ ಓಡಾಡಿದವು. ಆ ಸಮಯದಲ್ಲೇ ಗೋವಾ ಸರ್ಕಾರ ಮತ್ತೊಮ್ಮೆ ತಗಾದೆ ಎತ್ತಿತು. ಆಗ ಕೇಂದ್ರ, ರಾಜ್ಯ ಹಾಗೂ ಗೋವಾದಲ್ಲಿ ಬಿಜೆಪಿ ಸರ್ಕಾರಗಳಿದ್ದವು. ಮಾತುಕತೆ ಮೂಲಕ ವಿವಾದ ಬಗೆಹರಿಸುವ ಅವಕಾಶವನ್ನು ಮೂರು ಸರ್ಕಾರಗಳು ಕೈಚೆಲ್ಲಿದವು. ನಂತರ ವಿಧಾನಸಭಾ ಚುನಾವಣಾ ಘೋಷಣೆಯಾಯಿತು. ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರವು ಪ್ರಸ್ತಾವವನ್ನು ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಕಳುಹಿಸಿತು. 'ಕಳಸಾ ನಾಲಾ ತಿರುವು ಯೋಜನೆಯ ಅನುಷ್ಠಾನಕ್ಕೆ 26.92 ಹೆಕ್ಟೇರ್ ಅರಣ್ಯ ಬಳಸಿಕೊಳ್ಳಲಾಗುತ್ತಿದೆ. ಯೋಜನೆಗಾಗಿ ಕಾಳಿ ಹುಲಿ ಕಾರಿಡಾರ್ ಹಾಗೂ ಸಹ್ಯಾದ್ರಿ ಹುಲಿ ಸಂರಕ್ಷಿತ ಪ್ರದೇಶದ 7.96 ಹೆಕ್ಟೇರ್ ಅರಣ್ಯ ಹಾಗೂ 2.71 ಹೆಕ್ಟೇರ್ ಅರಣ್ಯೇತರ ಪ್ರದೇಶ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ' ಎಂದೂ ರಾಜ್ಯ ಸರ್ಕಾರವು ಪ್ರಸ್ತಾವದಲ್ಲಿ ತಿಳಿಸಿತ್ತು. ಆದರೆ, ಯೋಜನೆಗೆ ಅನುಮೋದನೆ ನೀಡಲು ಮಂಡಳಿ ನಿರಾಕರಿಸಿದೆ.

ಚಿಕ್ಕಾಸು ಸಿಗದೆ ಭದ್ರಾ ಕಣ್ಣೀರು: ಕೇಂದ್ರದಲ್ಲಿ ಐದು ವರ್ಷಗಳಿಂದ ನಿರ್ಮಲಾ ಸೀತಾರಾಮನ್ ಹಣಕಾಸು ಸಚಿವರು. ಅವರು ಕರ್ನಾಟಕದ ರಾಜ್ಯಸಭಾ ಸದಸ್ಯರು. ಆದರೆ, ಅವರ ಅವಧಿಯಲ್ಲೇ ರಾಜ್ಯಕ್ಕೆ ಹೆಚ್ಚು ಅನ್ಯಾಯ ಆಗಿದೆ ಎಂಬುದು ಕಾಂಗ್ರೆಸ್ ಸರ್ಕಾರದ ಆರೋಪದ ಸರಮಾಲೆ. ಈ ಕಳಂಕದಿಂದ ಮುಕ್ತರಾಗಲೋ ಎಂಬಂತೆ ನಿರ್ಮಲಾ ಅವರು ಭದ್ರಾ ಮೇಲ್ದಂಡೆ ಯೋಜನೆಗೆ 2023ರ ಬಜೆಟ್‌ನಲ್ಲಿ ₹5,300 ಕೋಟಿ ಪ್ರಕಟಿಸಿದರು. ಇದನ್ನು ನಂಬಿ ಕರ್ನಾಟಕ ಸರ್ಕಾರವೂ ಬಜೆಟ್‌ನಲ್ಲಿ ₹5,300 ಕೋಟಿ ಮೀಸಲಿಟ್ಟಿತು. ಕೇಂದ್ರದ 2024ರ ಮಧ್ಯಂತರ ಬಜೆಟ್ ಮಂಡನೆಯಾಗಿ ನಾಲ್ಕು ತಿಂಗಳು ಕಳೆದಿವೆ. ಈ ಸಲದ ಪೂರ್ಣ ಪ್ರಮಾಣ ಬಜೆಟ್ ಮಂಡನೆಗೆ ಕೆಲವೇ ದಿನಗಳಷ್ಟೇ ಬಾಕಿ ಇವೆ. ಆದರೆ, ₹5,300 ಕೋಟಿಯಲ್ಲಿ ಒಂದು ರೂಪಾಯಿಯೂ ರಾಜ್ಯಕ್ಕೆ ಬಂದಿಲ್ಲ. ಹಣ ಬಿಡುಗಡೆ ಮಾಡದಿರಲು ರಾಜ್ಯ ಸರ್ಕಾರದ 'inadequate technical problem' ಕಾರಣ ಎಂದು ನಿರ್ಮಲಾ ಸೀತಾರಾಮನ್ ಅವರು ರಾಜ್ಯದ ಸಂಸದರ ಸಭೆಯಲ್ಲಿ ಸಮಜಾಯಿಷಿ ನೀಡಿದ್ದಾರೆ. ಇದು ಏನೆಂಬುದು 'ಆರ್ಥಿಕ ತಜ್ಞ' ಸಿದ್ದರಾಮಯ್ಯ ಅವರಿಗೂ ಅರ್ಥವಾಗಿಲ್ಲ!

ಭಿನ್ನ ಹಾದಿಯಲ್ಲಿ ನೂತನ ಸಂಸದರು: ಹಿಂದಿ ಸೀಮೆಯಲ್ಲಿ ಸುಭದ್ರನೆಲೆ ಹೊಂದಿರುವ ಬಿಜೆಪಿಗೆ ದಕ್ಷಿಣದಲ್ಲಿ ರಾಜಕೀಯ ಶಕ್ತಿಯನ್ನು ತುಂಬುತ್ತಾ ಬಂದಿರುವ ರಾಜ್ಯ ಕರ್ನಾಟಕ. 1998ರಿಂದ ಕನ್ನಡಿಗರು ಲೋಕಸಭೆಗೆ ಆರಿಸುತ್ತಿರುವ ಸದಸ್ಯರ ಪೈಕಿ ಸಿಂಹಪಾಲು ಬಿಜೆಪಿಯದ್ದೇ. 17ನೇ ಲೋಕಸಭೆಗೆ ಬಿಜೆಪಿಯ 25 ಮಂದಿಯನ್ನು ಆರಿಸಿ ಕಳುಹಿಸಿದ್ದರು. ಈ ಬಾರಿ ಕೂಡಾ ಕರ್ನಾಟಕವು ಬಿಜೆಪಿಯ 17 ಹುರಿಯಾಳುಗಳನ್ನು ಗೆಲ್ಲಿಸಿ ಲೋಕಸಭೆಗೆ ಕಳುಹಿಸಿದೆ. ಆದರೆ, ರಾಜ್ಯದ ಹಿತಾಸಕ್ತಿಯ ವಿಷಯಕ್ಕೆ ಬಂದಾಗ ಹೆಚ್ಚಿನ ಸಂಸದರು ಈಚಿನ ದಶಕಗಳಲ್ಲಿ 'ಮೌನೇಶ್ವರರು' ಆಗಿದ್ದೇ ಹೆಚ್ಚು. 'ಕೈ' ಕಟ್ಟಾಳುಗಳು ಸಹ ಸದನದಲ್ಲಿ ಧ್ವನಿ ಎತ್ತಿದ್ದು ಕಡಿಮೆಯೇ. ನೆಲ-ಜಲದ ವಿಷಯದಲ್ಲಿ ಪ್ರಾದೇಶಿಕ ಪಕ್ಷಗಳು ತಾಳುವ ಗಟ್ಟಿ ನಿಲುವಿಗೆ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಅಪೂರ್ವ ಮಾದರಿ. ಇಳಿ ವಯಸ್ಸು ಹಾಗೂ ಅನಾರೋಗ್ಯದಿಂದ ಓಡಾಡಲು ಅಸಾಧ್ಯವಾಗಿದ್ದ ಸನ್ನಿವೇಶದಲ್ಲೂ ಸದನಕ್ಕೆ ಹಾಜರಾಗಿ ಕಾವೇರಿ ಹಾಗೂ ಮೇಕೆದಾಟು ಯೋಜನೆಗಳ ಬಗ್ಗೆ ಧ್ವನಿ ಎತ್ತಿದವರು ಅವರು.

ಆದರೆ, 18ನೇ ಲೋಕಸಭೆಗೆ ಆಯ್ಕೆಯಾದ ರಾಜ್ಯದ ಸಂಸದರು ಭಿನ್ನ ಹಾದಿ ತುಳಿಯುವ ಸುಳಿವು ನೀಡಿದ್ದಾರೆ. ಎಚ್.ಡಿ.ಕುಮಾರ ಸ್ವಾಮಿ, ಬಸವರಾಜ ಬೊಮ್ಮಾಯಿ, ಗೋವಿಂದ ಕಾರಜೋಳ, ವಿ.ಸೋಮಣ್ಣ, ವಿಶ್ವೇಶ್ವರ ಹೆಗಡೆ ಕಾಗೇರಿ ಅವರಂತಹ ಹಿರೀಕರು ರಾಜ್ಯದ ಹಿತ ಕಾಯುವತ್ತ ಹೆಜ್ಜೆ ಇಟ್ಟಿದ್ದಾರೆ. ಕಳೆದ ಹದಿನೈದು ದಿನಗಳಲ್ಲಿ ಅವರ ನಡವಳಿಕೆಗಳೇ ಇದಕ್ಕೆ ಸಾಕ್ಷಿ.

ನೆರೆಯವರ ಜಗಳ-ರಾಜ್ಯಕ್ಕೆ ತಾಪ: ಎರಡನೇ ಕೃಷ್ಣಾ ನ್ಯಾಯಾಧೀಕರಣ ಸ್ಥಾಪನೆಯಾಗಿದ್ದು 2004ರಲ್ಲಿ. ಈ ನ್ಯಾಯಾಧೀಕರಣವು 2010ರಲ್ಲಿ ಮಧ್ಯಂತರ ಆದೇಶ ನೀಡಿತ್ತು. ಗೆಜೆಟ್ ಅಧಿಸೂಚನೆ ಪ್ರಕಟಿಸದಂತೆ ಸುಪ್ರೀಂ ಕೋರ್ಟ್ 2011ರಲ್ಲಿ ನಿರ್ಬಂಧವನ್ನೂ ಹೇರಿತ್ತು. ಕೃಷ್ಣಾ ಕಣಿವೆ ರಾಜ್ಯಗಳಾದ ಮಹಾರಾಷ್ಟ್ರ, ಕರ್ನಾಟಕ ಹಾಗೂ ಆಂಧ್ರಪ್ರದೇಶಕ್ಕೆ ಹಂಚಿಕೆ ಮಾಡಿ 2013ರಲ್ಲಿ ಅಂತಿಮ ಪರಿಷ್ಕೃತ ತೀರ್ಪು ನೀಡಿತ್ತು. ಈ ತೀರ್ಪನ್ನು ಕೇಂದ್ರ ಗೆಜೆಟ್‌ನಲ್ಲಿ ಪ್ರಕಟಿಸಿದ್ದರೆ ರಾಜ್ಯಗಳು ನೀರು ಬಳಕೆ ಮಾಡಲು ಸಾಧ್ಯವಾಗುತ್ತಿತ್ತು. ತೀರ್ಪು ಪ್ರಕಟವಾಗಿ 11 ವರ್ಷಗಳು ಕಳೆದರೂ ಅಧಿಸೂಚನೆ ಪ್ರಕಟವಾಗಿಲ್ಲ. ಇದಕ್ಕೆ ತೆಲಂಗಾಣದ ತಕರಾರು ಒಂದು ಕಾರಣವಾದರೆ, ಕೇಂದ್ರ ಸರ್ಕಾರ ಮುಲಾಜಿಗೆ ಬಿದ್ದಿದ್ದು ಮತ್ತೊಂದು ಕಾರಣ. ಆಂಧ್ರಪ್ರದೇಶಕ್ಕೆ ಹಂಚಿಕೆ ಮಾಡಲಾಗಿದ್ದ 1,005 ಟಿಎಂಸಿ ಅಡಿಗಳಷ್ಟು ನೀರನ್ನು ತೆಲಂಗಾಣ ಮತ್ತು ಆಂಧ್ರಪ್ರದೇಶಕ್ಕೆ ಹಂಚಿಕೊಡಬೇಕು ಎಂದು ತೆಲಂಗಾಣದ ಬೇಡಿಕೆಯ ತಿರುಳು.

ಕೇಂದ್ರ ಸರ್ಕಾರದ ಮಧ್ಯಸ್ಥಿಕೆಯಲ್ಲಿ ಎರಡೂ ರಾಜ್ಯಗಳು ಪರಿಹಾರ ಕಂಡುಕೊಳ್ಳಲು ಅವಕಾಶ ಇತ್ತು. ಈ ವಾಸ್ತವದ ಅರಿವಿದ್ದರೂ ಕೇಂದ್ರ ಸರ್ಕಾರವು ಆಂಧ್ರ ಹಾಗೂ ತೆಲಂಗಾಣಗಳ ವಿರೋಧ ಕಟ್ಟಿಕೊಳ್ಳಲು ಸಿದ್ಧ ಇರಲಿಲ್ಲ. ಈ ನಡುವೆ, ತೆಲಂಗಾಣ ಸರ್ಕಾರವು ಸುಪ್ರೀಂ ಕೋರ್ಟ್ ಕದ ತಟ್ಟಿದೆ. ಆಂಧ್ರ ಪ್ರದೇಶಕ್ಕೆ ಹಂಚಿಕೆಯಾದ ನೀರಿನಲ್ಲಿ ಪಾಲು ಪಡೆಯುವುದನ್ನು ಬಿಟ್ಟು ತೆಲಂಗಾಣವು ಆಂಧ್ರದೊಂದಿಗಿನ ಜಗಳಕ್ಕೆ ಕರ್ನಾಟಕ ಹಾಗೂ ಮಹಾರಾಷ್ಟ್ರವನ್ನೂ ಎಳೆದು ತಂದಿದೆ. ಇಬ್ಬರ ಜಗಳದಲ್ಲಿ ಮೂರನೆಯವರಿಗೆ ನಷ್ಟ ಎಂಬಂತಾಗಿದೆ. ಅಧಿಸೂಚನೆ ಪ್ರಕಟಿಸಲು ಕೇಂದ್ರಕ್ಕೆ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿ ಕರ್ನಾಟಕವೂ ಉನ್ನತ ನ್ಯಾಯಾಲಯದ ಮೆಟ್ಟಿಲೇರಿದೆ.

ದಕ್ಷಿಣ ಪಿನಾಕಿನಿ: ತಮಿಳುನಾಡು ಅಡ್ಡಗಾಲು ದಕ್ಷಿಣ ಪಿನಾಕಿನಿ ನದಿಯ ಕಣಿವೆಯಲ್ಲಿ ಕರ್ನಾಟಕ ಸರ್ಕಾರವು ಮಾರ್ಕಂಡೇಯ ನದಿಗೆ ಅಡ್ಡಲಾಗಿ ಚೆಕ್ ಡ್ಯಾಂ ಕಟ್ಟಿದೆ. ಇದಕ್ಕೆ ತಮಿಳುನಾಡು ವಿರೋಧ ವ್ಯಕ್ತಪಡಿಸಿ ಸುಪ್ರೀಂ ಕೋರ್ಟ್‌ನಲ್ಲಿ 2019ರಲ್ಲಿ ದಾವೆ ಹೂಡಿದೆ. ಸಂಧಾನದ ಮೂಲಕ ಬಗೆಹರಿಸಲು ಕೇಂದ್ರ ಸರ್ಕಾರ 2020ರಲ್ಲಿ ಸಂಧಾನ ಸಮಿತಿ ರಚಿಸಿತ್ತು. ಆದರೆ, ಸಮಿತಿಯು ವಿವಾದ ಬಗೆಹರಿಸಲಿಲ್ಲ. ಬಳಿಕ ಹೊಸದಾಗಿ ಸಂಧಾನ ಸಮಿತಿ ರಚಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

> ಮೂರು ದಶಕಗಳಿಂದ ನಿಧಾನಗತಿಯಲ್ಲಿ ಸಾಗುತ್ತಿರುವ 1,264 ಕಿ.ಮೀ. ಉದ್ದದ 9 ರೈಲು ಯೋಜನೆಗಳನ್ನು ಎರಡು ವರ್ಷದೊಳಗೆ ಪೂರ್ಣಗೊಳಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಮುಂಬರುವ ವರ್ಷಗಳಲ್ಲಿ ಎಲ್ಲ ಬಾಕಿ ರೈಲ್ವೆ ಯೋಜನೆಗಳನ್ನು ವ್ಯವಸ್ಥಿತವಾಗಿ ಪೂರ್ಣಗೊಳಿಸಲಾಗುವುದು. ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಚುರುಕುಗೊಳಿಸಲು ಕೈ ರೈಡ್‌ಗೆ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ತಾಂತ್ರಿಕ ತಜ್ಞರನ್ನೇ ಶೀಘ್ರ ನೇಮಿಸಲಾಗುತ್ತದೆ. ನೀರಾವರಿ ಯೋಜನೆಗಳಿಗೆ ಶೀಘ್ರ ಅನುಮೋದನೆ ಕೊಡಿಸಲು ಪ್ರಯತ್ನ ಪಡುವೆ.
>
> **ವಿ.ಸೋಮಣ್ಣ,** ರೈಲ್ವೆ ಹಾಗೂ ಜಲಶಕ್ತಿ ಖಾತೆ ರಾಜ್ಯ ಸಚಿವ

> ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಬಂದ ಬಳಿಕ ರಾಜ್ಯಕ್ಕೆ ನಿರಂತರ ಅನ್ಯಾಯವಾಗುತ್ತಿದೆ. ಸಂಘರ್ಷದ ಮೂಲಕವೇ ರಾಜ್ಯದ ಪಾಲನ್ನು ಪಡೆಯುವ ಸ್ಥಿತಿ ನಿರ್ಮಾಣವಾಗಿದೆ. ಕೋರ್ಟ್ ಮೊರೆ ಹೋಗಿದ್ದರಿಂದ ಬರ ಪರಿಹಾರ ಸಿಕ್ಕಿತು. ಹೊಸ ಸರ್ಕಾರದ ನೆಪವೊಡ್ಡಿ ಅದನ್ನೂ ಬಿಡುಗಡೆ ಮಾಡುವ ಅನುಮಾನ ಇತ್ತು. ಜಿಎಸ್‌ಟಿ ಪಾಲು ಹಂಚಿಕೆ, 15ನೇ ಹಣಕಾಸಿನ ಶಿಫಾರಸಿನ ಜಾರಿಯಲ್ಲಿ ದೊಡ್ಡ ಅನ್ಯಾಯ ಮಾಡಿದೆ. ಕೇಂದ್ರ ಸಚಿವರನ್ನು ಹಲವು ಬಾರಿ ಭೇಟಿ ಮಾಡಿ ಮನವರಿಕೆ ಮಾಡಿಕೊಟ್ಟರೂ ಫಲ ಶೂನ್ಯ.
>
> **ಕೃಷ್ಣ ಬೈರೇಗೌಡ,** ಕಂದಾಯ ಸಚಿವ

ತೆವಳುತ್ತಾ ಸಾಗಿರುವ ರೈಲು ಯೋಜನೆಗಳು

ಯೋಜನಾ ಮೊತ್ತ ಹಂಚಿಕೆಯಲ್ಲಿ ಕೇಂದ್ರ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ನಡುವೆ ಹಗ್ಗಜಗ್ಗಾಟ, ಭೂಸ್ವಾಧೀನ ಸಮಸ್ಯೆ ಮತ್ತಿತರ ಕಾರಣಗಳಿಂದಾಗಿ ಕರ್ನಾಟಕದ ರೈಲು ಯೋಜನೆಗಳು ತೆವಳುತ್ತಾ ಸಾಗಿವೆ.

ಸುಮಾರು ₹10 ಸಾವಿರ ಕೋಟಿ ಮೊತ್ತದಲ್ಲಿ ರಾಜ್ಯದಲ್ಲಿ 9 ಹೊಸ ರೈಲು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಗಳಿಗೆ ರಾಜ್ಯ ಸರ್ಕಾರ ಉಚಿತವಾಗಿ ಭೂಮಿ ನೀಡಿ ಶೇ 50 ಅನುದಾನ ನೀಡಬೇಕಿದೆ. ಕೆಲವು ಯೋಜನೆಗಳ ಕಾಮಗಾರಿ ನಿಂತಲ್ಲೇ ನಿಂತಿದೆ. ಬಹುತೇಕ ಯೋಜನೆಗಳಿಗೆ ಭೂಸ್ವಾಧೀನದ ಗ್ರಹಣ ಎದುರಾಗಿದೆ. ಇದರಿಂದಾಗಿ, ಹಳಿಗಳಲ್ಲಿ ರೈಲುಗಳ ಓಡಾಟಕ್ಕೆ ಕಾಲ ಕೂಡಿ ಬಂದಿಲ್ಲ. ರಾಜ್ಯದ ಐದು ಯೋಜನೆಗಳು 10 ವರ್ಷಗಳಷ್ಟು ವಿಳಂಬವಾಗಿದೆ ಎಂದು ಕೇಂದ್ರ ಸರ್ಕಾರ ಪಟ್ಟಿ ಮಾಡಿದೆ.

ರೈಲ್ವೆ ಯೋಜನೆಗಳು (ಮೊತ್ತ ₹ ಕೋಟಿಗಳಲ್ಲಿ)

ಯೋಜನೆ	ಮಂಜೂರಾದ ವರ್ಷ	ಅಂದಾಜು ಮೊತ್ತ	ಕರ್ನಾಟಕ ಸರ್ಕಾರದ ಪಾಲು
ಮುನಿರಾಬಾದ್-ಮೆಹಬೂಬನಗರ	2007	1,350	675
ತುಮಕೂರು-ರಾಯದುರ್ಗ	2010	479	239
ಚಿಕ್ಕಮಗಳೂರು-ಬೇಲೂರು	2010	657	328
ಕುಡಚಿ-ಬಾಗಲಕೋಟೆ	2011	816	408
ಗದಗ-ವಾಡಿ	2014	1,922	961
ತುಮಕೂರು-ದಾವಣಗೆರೆ	2016	1,801	900
ಬೇಲೂರು-ಹಾಸನ	2019	262	130
ಶಿವಮೊಗ್ಗ-ಶಿಕಾರಿಪುರ-ರಾಣೆಬೆನ್ನೂರು	2019	1,200	231
ಧಾರವಾಡ-ಕಿತ್ತೂರು-ಬೆಳಗಾವಿ	2020	927	537

*(ಕರ್ನಾಟಕ ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಪ್ರಕಾರ)

ರಾಜ್ಯಕ್ಕೊಂದು ನ್ಯಾಯ, ತಮಿಳುನಾಡಿಗೊಂದು...

ಕಾವೇರಿ ಬಗ್ಗೆ ಪ್ರತಿವರ್ಷವೂ ತಕರಾರು ಎತ್ತಿರುವ ತಮಿಳುನಾಡು ಕಾವೇರಿ ಕಣಿವೆಯ ಹೆಚ್ಚುವರಿ ನೀರಿನ ಬಳಕೆಗೆ 'ಕಾವೇರಿ- ವೆಲ್ಲಾರ್' ಯೋಜನೆ ಕೈಗೊಂಡಿದೆ. ಈ ಯೋಜನೆ ಕಾವೇರಿ ನ್ಯಾಯಮಂಡಳಿ ತೀರ್ಪಿನ ಸ್ಪಷ್ಟ ಉಲ್ಲಂಘನೆ. 'ಸಮುದ್ರ ಸೇರುವ ಕಾವೇರಿಯ ಹೆಚ್ಚುವರಿ ನೀರು ಬಳಸಿಕೊಳ್ಳುತ್ತಿದ್ದೇವೆ' ಎನ್ನುವುದು ತಮಿಳುನಾಡಿನ ವಾದ. 'ಮೇಕೆದಾಟು ಸಮತೋಲನ ಜಲಾಶಯ ನಿರ್ಮಿಸಿ 65 ಟಿಎಂಸಿಗಳಷ್ಟು ನೀರು ಸಂಗ್ರಹಿಸುತ್ತೇವೆ. ಸಂಕಷ್ಟದ ಸಮಯದಲ್ಲಿ ಇದರಿಂದ ತಮಿಳುನಾಡಿಗೂ ಅನುಕೂಲವಾಗುತ್ತದೆ. ಯೋಜನೆಗೆ ಅಡ್ಡಿಪಡಿಸಬೇಡಿ' ಎಂದು ಕರ್ನಾಟಕ ಸರ್ಕಾರ ಮೇಕೆದಾಟು ಯೋಜನೆಗೆ ತಕರಾರು ಮಾಡದಂತೆ ಗೋಗರೆದರೂ ತಮಿಳುನಾಡು ಒಪ್ಪಲು ಸಿದ್ಧವಿಲ್ಲ. ಯೋಜನೆಗೆ ಅಡ್ಡಗಾಲು ಹಾಕುತ್ತಲೇ ಬಂದಿರುವ ತಮಿಳುನಾಡು ತನ್ನ ಹೊಸ ಯೋಜನೆಗೆ ಅಡಿಗಲ್ಲು ಹಾಕಿ ವರ್ಷಗಳೇ ಕಳೆದಿವೆ. ಈ ಯೋಜನೆ ಬಗ್ಗೆ ಕರ್ನಾಟಕ 'ಸಾಂಕೇತಿಕ'ವಾಗಿ ಪ್ರತಿಭಟಿಸಿ ಮೌನ ತಳೆದಿದೆ. ಈ ಯೋಜನೆಗೆ ಕೇಂದ್ರದಿಂದಲೂ ಹಣಕಾಸಿನ ನೆರವು ಸಿಕ್ಕಿದೆ. ತಮಿಳುನಾಡಿದ್ದು ಚಾಣಕ್ಯ ನಡೆ. ನಮ್ಮದು ಸಾಂಕೇತಿಕ ಹೋರಾಟ ಹಾಗೂ ಬದ್ಧತೆ ಕೊರತೆ.

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 30-06-1999

- **ಎರಡು ನೆಲೆ ಮರುವಶ: ಭಾರತದ ದಾಳಿಗೆ 40 ಪಾಕ್ ಸೈನಿಕರ ಬಲಿ**
ಪ್ರಜಾವಾಣಿ ವಾರ್ತೆ
ನವದೆಹಲಿ, ಜೂ. 29– ಭಾರತೀಯ ಸೇನಾ ಪಡೆಯು ಡ್ರಾಸ್ ಮತ್ತು ಮುಷ್ಕೋಹ್ ಕಣಿವೆ ವಲಯದಲ್ಲಿ ಯಶಸ್ವಿಯಾಗಿ ದಾಳಿ ನಡೆಸಿ ಪಾಕಿಸ್ತಾನಿ ಸೈನಿಕರಿಂದ 'ಪಾಯಿಂಟ್ 4700' ಮತ್ತು 'ಬ್ಲಾಕ್ ರಾಕ್' ದಿಬ್ಬಗಳನ್ನು ಮತ್ತೆ ತನ್ನ ವಶಕ್ಕೆ ತೆಗೆದುಕೊಂಡಿದೆ. ಇಂದು ಮುಂಜಾನೆ ನಾಲ್ಕು ಗಂಟೆಯಲ್ಲಿ ನಡೆಸಿದ ಈ ದಾಳಿಯಲ್ಲಿ ಪಾಕಿಸ್ತಾನದ ಮೂವರು ಸೇನಾ ಅಧಿಕಾರಿಗಳು ಸೇರಿದಂತೆ ನಲವತ್ತು ಮಂದಿ ಸತ್ತಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 30-06-1974

- **ಕಛತೀವು ಬಗ್ಗೆ ಶ್ರೀಲಂಕಾ ಜತೆ ಒಪ್ಪಂದ ಮರುಪರಿಶೀಲನೆಗೆ ತಮಿಳುನಾಡು ಒತ್ತಾಯ**
ಮದರಾಸು, ಜೂ.29– ಕಛತೀವು ದ್ವೀಪದ ಬಗ್ಗೆ ಶ್ರೀಲಂಕಾ ಜತೆ ಮಾಡಿಕೊಂಡಿರುವ ಒಪ್ಪಂದವನ್ನು 'ಪುನರ್ ಪರಿಶೀಲಿಸಿ', ಆ ದ್ವೀಪದ ಮೇಲೆ ಭಾರತಕ್ಕೆ ಸಾರ್ವಭೌಮತ್ವ ಇರುವ ರೀತಿಯಲ್ಲಿ ಒಪ್ಪಂದವನ್ನು ಪುನರ್ ರೂಪಿಸುವಂತೆ ಮುಖ್ಯಮಂತ್ರಿ ಕರುಣಾನಿಧಿ ಅವರು ಕರೆದಿದ್ದ ಸಭೆಯಲ್ಲಿ ತಮಿಳುನಾಡು ಶಾಸನಸಭೆಯ ವಿವಿಧ ಪಕ್ಷಗಳ ಪ್ರತಿನಿಧಿಗಳು ಇಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜೂನ್ 30, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ನವಮಿ ಗಂ. 12-20 ನಕ್ಷತ್ರ: ರೇವತಿ ಗಂ. 07-34 ಯೋಗ: ಅತಿಗಂಡ ಗಂ. 16-14 ಕರಣ: ಗರ ಗಂ. 12-20, ಮಿಥುನ ಮಾಸದ 16 ನೇ ದಿನ, ಮಳೆನಕ್ಷತ್ರ: ಆರ್ದ್ರಾ 3.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-11 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 24 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 8, 1

ಮೇಷ: ನೈಸರ್ಗಿಕ ಶಕ್ತಿ ಸಂಪನ್ಮೂಲಗಳನ್ನು ಬಳಸುವ ಯೋಚನೆ ಮಾಡುವಿರಿ. ಹೋಟೆಲ್ ವ್ಯಾಪಾರ ಮಾಡುವವರಿಗೆ ನಷ್ಟ ಸಂಭವಿಸಬಹುದು. ನಿಮ್ಮ ಸ್ವಕಾರ್ಯ ಹಾಗೂ ಸ್ವಪ್ರತಿಭೆಯಿಂದಲೆ ಪ್ರಭಾವಿತರಾಗುವಂತಾಗಲಿದೆ.

ವೃಷಭ: ಹಿರಿಯರ ಆಸ್ಪತ್ರೆ, ಔಷಧಿಗಳಿಗಾಗಿ ಖರ್ಚು ಮಾಡಬೇಕಾದರೂ ಆದಾಯಕ್ಕೇನೂ ಕೊರತೆ ಇರದು. ಖಿನ್ನತೆ ಹಾಗು ಋಣಾತ್ಮಕ ಚಿಂತನೆಗಳು ನಿಮ್ಮನ್ನು ಕಾಡಲಿದೆ. ದೇವರ ಧ್ಯಾನದಿಂದ ಅದನ್ನು ಹೋಗಲಾಡಿಸಿಕೊಳ್ಳಿ.

ಮಿಥುನ: ಪರೋಪಕಾರ ಸ್ವಭಾವದಿಂದಾಗಿ ಸ್ಥಾನ-ಮಾನಗಳು ಲಭಿಸುವುವು. ಸಾರ್ವಜನಿಕರ ಸೇವೆ ಮಾಡುವವರಿಗೆ ಕೆಲವು ಅನುಯಾಯಿಗಳಿಂದ ಸಹಕಾರ, ಮತ್ತೆ ಕೆಲವರಿಂದ ಅಸಹಕಾರ ಎದುರಾಗಲಿದೆ.

ಕರ್ಕಾಟಕ: ವಿಚಾರಗಳನ್ನು ವಾಸ್ತವಿಕವಾಗಿ ಸ್ವೀಕರಿಸುವಂತಹ ಮನೋಭಾವನೆ ಬೆಳೆಸಿಕೊಳ್ಳಿ. ಹಪ್ಪಳ, ಸಂಡಿಗೆಯಂತಹ ವಸ್ತುಗಳ ವ್ಯಾಪಾರಿಗಳಿಗೆ ಹೆಚ್ಚಿನ ಗ್ರಾಹಕರ ಸಂಪಾದನೆ ಆಗುತ್ತದೆ.

ಸಿಂಹ: ಧಾರ್ಮಿಕ ಕಾರ್ಯಗಳನ್ನು ಮಾಡಿದ ಫಲವಾಗಿ ಅವಿವಾಹಿತರಿಗೆ ಕಂಕಣ ಭಾಗ್ಯ ಕೂಡಿ ಬರಲಿದೆ. ವಿದ್ಯಾರ್ಥಿಗಳಿಗೆ ಮಿತ್ರವರ್ಗದವರ ಸಹವಾಸ ಅನುಕೂಲವಾಗಿ ಕಂಡುಬರುವುದು. ಹಲ್ಲುನೋವು ಬಾಧಿಸಲಿದೆ.

ಕನ್ಯಾ: ಸ್ವಯಂಕೃತ ಅಪರಾಧದ ಬಗ್ಗೆ ಎಚ್ಚರವಿರಲಿ. ಸರಿ ತಪ್ಪುಗಳನ್ನು ನಿರ್ಧರಿಸುವುದು ಕಷ್ಟಕರ ಎನಿಸುವುದು. ಮಧ್ಯಸ್ಥಿಕೆಯ ಕೆಲಸವನ್ನು ಮಾಡಲು ಹೋಗಿ ಕೈ ಸುಟ್ಟುಕೊಳ್ಳುವ ಸಾಧ್ಯತೆ ಇದೆ. ಮಕ್ಕಳ ಮೇಲೆ ನಿಗಾ ಇರಲಿ.

ತುಲಾ: ಮುಕ್ತವಾಗಿ ಮಾತನಾಡದ ನಿಮ್ಮ ಸ್ವಭಾವವು, ಸಭೆಯಲ್ಲಿ ನಿಮ್ಮನ್ನೇ ಉದ್ದೇಶಿಸಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲಾಗದ ಸಂದರ್ಭ ತರಲಿದೆ. ಹೊಸ ಕೆಲಸ ಶುರುಮಾಡುವಾಗ ಸಾಧ್ಯತೆ ಬಾಧ್ಯತೆಗಳ ಬಗ್ಗೆ ಯೋಚಿಸಿ.

ವೃಶ್ಚಿಕ: ಚಿನ್ನ-ಬೆಳ್ಳಿ ವ್ಯಾಪಾರಿಗಳಿಗೆ ಕಣ್ತಪ್ಪಿನಿಂದ ದ್ರವ್ಯ ನಷ್ಟವಾಗುವ ಸಂಭವವಿದೆ. ಕಛೇರಿಗೆ ರಜೆ ಇರುವುದು ನಿಮ್ಮ ಮೇಲೆ ಪರಿಣಾಮ ಬೀರುತ್ತದೆ. ನವವಿವಾಹಿತೆಗೆ ಮುಖ್ಯ ವ್ಯಕ್ತಿಗಳ ಮರೆವು ತುಂಬಾ ಕಾಡಲಿದೆ.

ಧನು: ಮಳಿಗೆಯನ್ನು ಖರೀದಿಸುವಾಗ ವ್ಯಾವಹಾರಿಕವಾಗಿ ಜಾಗ ಎಷ್ಟು ಸೂಕ್ತ ಎನ್ನುವುದರ ಮೇಲೆ ಗಮನವಿಡಿ. ಭೂ ಸಂಬಂಧಿ ವ್ಯವಹಾರಗಳಿಂದ ಹೆಚ್ಚಿನ ಲಾಭ. ಆದರೆ ದಾಖಲೆಗಳಲ್ಲಿ ಮೋಸ ಹೋಗದಿರಿ.

ಮಕರ: ನಿಮ್ಮ ಸಿಟ್ಟು ಅಥವಾ ಆತುರದ ನಿರ್ಧಾರಗಳು ಏಕಾಂಗಿತನಕ್ಕೆ ಕಾರಣವಾಗುವುದು. ಪರರ ವಿಚಾರಗಳನ್ನು ಮಾತನಾಡಿ ವೈರತ್ವ ತಂದುಕೊಳ್ಳಬೇಡಿ. ಬಟ್ಟೆ ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಾಗುವುದು.

ಕುಂಭ: ಸಹೋದರರಲ್ಲಿ ಸಂಬಂಧಗಳು ಗಟ್ಟಿಯಾಗುವುದು. ಕೆಲಸದ ಒತ್ತಡದಿಂದ ದೂರಾಗಿ ಮಿತ್ರರೊಡನೆ ಉಲ್ಲಾಸದಿಂದ ಕಾಲ ಕಳೆಯುವಿರಿ. ನಿಮ್ಮ ಒಳ್ಳೆಯತನ ದುರುಪಯೋಗವಾಗದಂತೆ ಎಚ್ಚರ ವಹಿಸಿ.


ಮೀನ: ಇಷ್ಟವಸ್ತುವಿನ ಪ್ರಾಪ್ತಿಗಾಗಿ ಅವಿರತವಾಗಿ ಪ್ರಯತ್ನಿಸುವಿರಿ. ಸಂಜೆ ಆರಾಮವಾಗಿ ಪ್ರಕೃತಿಯ ಸೌಂದರ್ಯವನ್ನು ಅನುಭವಿಸುವಿರಿ. ಸಣ್ಣ ಮಕ್ಕಳೊಂದಿಗಿನ ಒಡನಾಟ ಮನಸ್ಸನ್ನು ಮುದಗೊಳಿಸುತ್ತದೆ.

ಪದಬಂಧ 5727

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉದಯ ಕಾಲದಲ್ಲಿ ಶೇಖರಿಸಿಟ್ಟಿರುವ ನೀರು (3)
3.ಜನಕ್ಕೆಲ್ಲಾ ಧನ ಕನಕ ನೀಡಿರುವ ತಂದೆ (3)
5.ಹರಿದಾರಿಯಲ್ಲೇ ಪ್ರತ್ಯಕ್ಷನಾದ ವಿಷ್ಣು! (2)
6.ನಗರದಲ್ಲಿರುವ ಮನುಷ್ಯ (2)
8.ಕತ್ತರಿಸುವ ಸಾಧನವಿದು (3)
9.ಶೀಘ್ರ ಬರುವ ಸಿಟ್ಟು (3)
11.ವರನಿಗೆ ಕೇಳಿಸಿದ ಧ್ವನಿ (2)
13.ಸುರುಳಿಯಾಗಿರುವ ಕಾಲಿನ ಆಭರಣ (2)
14.ಛಾಯೆ ಇಲ್ಲಿ ಕಾಣುತ್ತಿದೆ (3)
15.ದನಕ್ಕಾಗಿ ನಡೆದ ಯುದ್ಧ (3)

ಮೇಲಿಂದ ಕೆಳಕ್ಕೆ
1.ಉದ್ದನ್ನು ತರಲು ಪಡೆದ ಕಡ! (3)
2.ಇದು ಕನ್ನಡಿಗನ ಚಾಳೀಸು (4)
3.ಜಾರಿಕೊಳ್ಳದೇ ವಹಿಸಿಕೊಂಡಿರುವ ಹೊಣೆಗಾರಿಕೆ (4)
4.ವನದ ಬಗ್ಗೆ ಬರೆದ ಪದ್ಯ (3)
5.ಮೋಸಗಾರ ಹರನೊಳಗಡಗಿದ್ದಾನಲ್ಲಾ? (5)
7.ಸೊಗಸಾದ ಚಿತ್ರಗಳನ್ನು ನೇಯ್ದಿರುವ ಕಂಬಳಿ (5)
9.ಮುಂದಲೆಯ ಮೇಲೆ ಬಿದ್ದಿರುವ ಕೂದಲು (4)
10.ಸಿಂಚನವನ್ನು ಹೀಗೆ ಹೇಳಿ (4)
12.ವರ್ತಕನ ರೂಢಿ (3)
13.ರೋಗದೊಡನೆ ಬರುವ ಜೋಡು ನುಡಿ (3)



5726ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಲೋಕಾಭಿರಾಮ 3.ಅಪೂರ್ವ
5.ಸಮಾಲೋಚಕ 7.ರಜಕ
9.ವಿಮಾನ 11.ವಿಕಾಸ
13.ಸಮರಸಿಂಹ 15.ಸುದಿನ
16.ಸುಮನೋಹರ

ಮೇಲಿಂದ ಕೆಳಕ್ಕೆ:
1.ಲೋಕಾಚಾರ 2.ರಾಯಸ
4.ಪೂಜಕ 6.ಲೋಚನ
8.ಜಟೆ 9.ವಿಧುರ
10.ಕಾಕಾ 12.ಸದಾಚಾರ
13.ಸರದಿ 14.ಹರಾಮ

ಸುಡೊಕು 6112

	4		1		3	5		
7		6	4				3	1
	3	9			7	4		
6	1				4			
							6	4
8	2						1	
		3		2		9		8
9			3		6		7	5
		1		8			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6111 ಸುಡೊಕು

3	5	2	1	9	4	8	6	7
6	1	4	5	8	7	9	3	2
7	9	8	6	3	2	5	1	4
2	7	9	8	1	3	6	4	5
1	3	6	7	4	5	2	9	8
4	8	5	9	2	6	3	7	1
5	4	1	2	6	9	7	8	3
9	2	3	4	7	8	1	5	6
8	6	7	3	5	1	4	2	9

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನೀಟ್ ಅಕ್ರಮ: ಹಿಂದಿ ಪತ್ರಿಕೆಯೊಂದರ ಪತ್ರಕರ್ತ ಜಮಾಲುದ್ದೀನ್ ಅನ್ಸಾರಿ ಬಂಧನ

ಗುಜರಾತಿನ ಏಳು ಕಡೆ ಸಿಬಿಐ ಶೋಧ

ನವದೆಹಲಿ (ಪಿಟಿಐ): 'ನೀಟ್‌–ಯುಜಿ' ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಗುಜರಾತ್‌ನ ಏಳು ಕಡೆಗಳಲ್ಲಿ ಶೋಧ ಕಾರ್ಯ ನಡೆಸಿದೆ ಎಂದು ಅಧಿಕಾರಿಗಳು ಶನಿವಾರ ಹೇಳಿದ್ದಾರೆ. ಈ ಪ್ರಕರಣ ಕುರಿತು ಹಿಂದಿ ಪತ್ರಿಕೆಯೊಂದರ ಪತ್ರಕರ್ತ ಜಮಾಲುದ್ದೀನ್ ಅನ್ಸಾರಿ ಅವರನ್ನು ಸಿಬಿಐ ಬಂಧಿಸಿದೆ.

ಸಿಬಿಐ ಅಧಿಕಾರಿಗಳ ತಂಡ ಆನಂದ್, ಖೇಡಾ, ಅಹಮದಾಬಾದ್ ಮತ್ತು ಗೋಧ್ರಾ ಜಿಲ್ಲೆಗಳಲ್ಲಿ ವ್ಯಾಪಿಸಿರುವ ಶಂಕಿತರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಬೆಳಿಗ್ಗೆಯಿಂದಲೇ ಕಾರ್ಯಾಚರಣೆ ಆರಂಭಿಸಿತ್ತು ಎಂದು ಅವರು ತಿಳಿಸಿದ್ದಾರೆ.

ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಶುಕ್ರವಾರ ಜಾರ್ಖಂಡ್‌ನ ಹಜಾರಿಬಾಗ್‌ನ ಶಾಲೆಯೊಂದರ ಪ್ರಾಂಶುಪಾಲ ಮತ್ತು ಉಪ ಪ್ರಾಂಶುಪಾಲರನ್ನು ಬಂಧಿಸಿತ್ತು.

ಮೇ 5ರಂದು ಎನ್‌ಟಿಎ ನಡೆಸಿದ ನೀಟ್ ಪರೀಕ್ಷೆಯಲ್ಲಿ ಹಜಾರಿಬಾಗ್ ನಗರ ಸಂಯೋಜಕರಾಗಿ ಓಯಿಸಿಸ್ ಶಾಲೆಯ ಪ್ರಾಂಶುಪಾಲ 'ಇಹಸಾನುಲ್ ಹಕ್', ಪರೀಕ್ಷಾ ವೀಕ್ಷಕ ಮತ್ತು ಓಯಿಸಿಸ್ ಶಾಲೆಯ ಕೇಂದ್ರ ಸಂಯೋಜಕರಾಗಿ ಉಪ ಪ್ರಾಂಶುಪಾಲ ಇಮ್ತಿಯಾಜ್ ಆಲಂ ನಿಯೋಜಿತರಾಗಿದ್ದರು. ಅವರಿಬ್ಬರಿಗೂ ಸಹಾಯ ಮಾಡುತ್ತಿದ್ದ ಆರೋಪದ ಮೇಲೆ ಪತ್ರಕರ್ತ ಜಮಾಲುದ್ದೀನ್ ಅನ್ಸಾರಿ ಎಂಬಾತನನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಲ್ಲದೆ ಇನ್ನೂ ಐವರನ್ನು ಸಿಬಿಐ ವಿಚಾರಣೆಗೆ ಒಳಪಡಿಸಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



ನೀಟ್ ಚರ್ಚೆಯಿಂದ ಕಾಂಗ್ರೆಸ್ ಪಲಾಯನ: ಪ್ರಧಾನ್ ಟೀಕೆ

ಚಂಡೀಗಢ (ಪಿಟಿಐ): 'ನೀಟ್' ಪರೀಕ್ಷಾ ವಿವಾದ ಕುರಿತು ಸಂಸತ್ತಿನಲ್ಲಿ ಚರ್ಚೆ ಕುರಿತಂತೆ ಕಾಂಗ್ರೆಸ್ ಪಕ್ಷ ಪಲಾಯನ ಮಾಡುತ್ತಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಶನಿವಾರ ವಾಗ್ದಾಳಿ ನಡೆಸಿದ್ದಾರೆ.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ನೀಟ್ ಅಕ್ರಮ ಕುರಿತು ಸಂಸತ್ತಿನಲ್ಲಿ ಗೌರವಯುತ ಚರ್ಚೆ ಆಗಬೇಕಿದೆ ಎಂದು ಪ್ರಧಾನಿ ಅವರನ್ನು ಒತ್ತಾಯಿಸಿದ ಹಿಂದೆಯೇ ಸಚಿವರು ಈ ರೀತಿ ವಾಗ್ದಾಳಿ ನಡೆಸಿದ್ದಾರೆ.


ಧರ್ಮೇಂದ್ರ ಪ್ರಧಾನ್

ಇಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಕಾಂಗ್ರೆಸ್‌ನವರಿಗೆ ಚರ್ಚೆ ಬೇಕಾಗಿಲ್ಲ. ಅವರು ಪಲಾಯನ ಮಾಡುತ್ತಿದ್ದಾರೆ. ಕಾಂಗ್ರೆಸ್‌ನ ಉದ್ದೇಶ ಕೇವಲ ಕೋಲಾಹಲ ಸೃಷ್ಟಿಸುವುದೇ ಆಗಿದೆ. ಸುಗಮವಾಗಿ ಕಲಾಪ ನಡೆಯುವುದನ್ನು ಅಡ್ಡಿಪಡಿಸುವುದೇ ಆಗಿದೆ' ಎಂದು ಟೀಕಿಸಿದರು.

ಎರಡು ದಿನಗಳಲ್ಲಿ 'ನೀಟ್–ಪಿಜಿ' ದಿನಾಂಕ ಪ್ರಕಟ

ಮುನ್ನೆಚ್ಚರಿಕೆ ಕ್ರಮವಾಗಿ ಮುಂದೂಡಲಾಗಿದ್ದ 'ನೀಟ್–ಪಿಜಿ' ಪರೀಕ್ಷಾ ವೇಳಾಪಟ್ಟಿಯನ್ನು ಎರಡು ದಿನಗಳಲ್ಲಿ ರಾಷ್ಟ್ರೀಯ ಪರೀಕ್ಷಾ ಮಂಡಳಿ (ಎನ್‌ಬಿಇ) ಪ್ರಕಟಿಸಲಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಶನಿವಾರ ತಿಳಿಸಿದ್ದಾರೆ.

ಪರೀಕ್ಷಾ ಅಕ್ರಮ ಆರೋಪದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ರದ್ದುಗೊಳಿಸಿದ್ದ ಮತ್ತು ಮುಂದೂಡಿದ್ದ ಮೂರು ಪರೀಕ್ಷೆಗಳ ಪರಿಷ್ಕೃತ ದಿನಾಂಕಗಳನ್ನು ಶುಕ್ರವಾರ ಪ್ರಕಟಿಸಿದೆ.

ಜೂನ್ 18ರಂದು ನಡೆದಿದ್ದ 'ಯುಜಿಸಿ–ನೆಟ್' ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾಗಿತ್ತು ಎಂಬ ಕಾರಣದಿಂದ ಶಿಕ್ಷಣ ಸಚಿವಾಲಯ ಜೂನ್ 19ರಂದು ಈ ಪರೀಕ್ಷೆಯನ್ನು ರದ್ದುಗೊಳಿಸಿತ್ತು. ಈ ಪರೀಕ್ಷೆ ಆಗಸ್ಟ್ 21ರಿಂದ ಸೆಪ್ಟೆಂಬರ್ 4ವರೆಗೆ ನಡೆಯಲಿದೆ.

ಮುನ್ನೆಚ್ಚರಿಕೆ ಕ್ರಮವಾಗಿ ಮುಂದೂಡಲಾಗಿದ್ದ 'ಸಿಎಸ್‌ಐಆರ್–ಯುಜಿಸಿ–ನೆಟ್' ಪರೀಕ್ಷೆ ಜುಲೈ 25ರಿಂದ 27ರವರೆಗೆ ಜರುಗಲಿದೆ.

ನಾಲ್ಕು ವರ್ಷಗಳ 'ಇಂಟಿಗ್ರೇಟೆಡ್ ಟೀಚರ್ ಎಜುಕೇಷನ್ ಪ್ರೋಗ್ರಾಂ (ಐಟಿಇಪಿ) ಪ್ರವೇಶಕ್ಕಾಗಿ ಜೂನ್ 12ರಂದು ನಡೆಯಬೇಕಿದ್ದ ರಾಷ್ಟ್ರೀಯ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಎನ್‌ಸಿಇಟಿ) ಪರೀಕ್ಷೆಯು ಕೆಲ ಗಂಟೆಗಳ ಮುನ್ನ ಮುಂದೂಡಲಾಗಿತ್ತು. ಆ ಪರೀಕ್ಷೆ ಜುಲೈ 10ರಂದು ನಡೆಯಲಿದೆ.

ನಾಲ್ವರು ಆರೋಪಿಗಳು 4 ದಿನ ಕಸ್ಟಡಿಗೆ

ಪರೀಕ್ಷಾ ಅಕ್ರಮಗಳಿಗೆ ಸಂಬಂಧಿಸಿದಂತೆ ಗೋಧ್ರಾ ಪೊಲೀಸರಿಂದ ಬಂಧಿತರಾಗಿರುವ ಆರೋಪಿಗಳಾದ ಭೌತವಿಜ್ಞಾನ ಶಿಕ್ಷಕ ತುಷಾರ್ ಭಟ್, ಜಯ ಜಲರಾಮ್ ಶಾಲೆಯ ಪ್ರಾಂಶುಪಾಲ ಪುರುಷೋತ್ತಮ್ ಶರ್ಮಾ, ಮಧ್ಯವರ್ತಿಗಳಾದ ವಿಭೋರ್ ಆನಂದ್ ಮತ್ತು ಆರಿಫ್ ವೋಹ್ರಾ ಅವರನ್ನು ನ್ಯಾಯಾಲಯವು ನಾಲ್ಕು ದಿನಗಳವರೆಗೆ ತನಿಖಾ ಸಂಸ್ಥೆಯ ಕಸ್ಟಡಿಗೆ ವಹಿಸಿ ಶನಿವಾರ ಆದೇಶಿಸಿದೆ.

ಈ ಆರೋಪಿಗಳು ಅಂತರರಾಜ್ಯ ಸಂಪರ್ಕಗಳನ್ನು ಹೊಂದಿದ್ದು, ದೊಡ್ಡ ಮಟ್ಟದ ಪಿತೂರಿಯಲ್ಲಿ ಭಾಗಿಯಾಗಿರುವ ಸಾಧ್ಯತೆಯಿದೆ. ಹೀಗಾಗಿ ಹೆಚ್ಚಿನ ವಿಚಾರಣೆಗೆ ಕಸ್ಟಡಿಗೆ ನೀಡುವಂತೆ ಸಿಬಿಐ ನ್ಯಾಯಾಲಯವನ್ನು ಕೋರಿತ್ತು.

ರಾಜ್‌ಕೋಟ್ ವಿಮಾನ ನಿಲ್ದಾಣದ ಚಾವಣಿ ಕುಸಿತ


ಭಾರಿ ಮಳೆಯಿಂದಾಗಿ ರಾಜ್‌ಕೋಟ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಯಾಣಿಕರ ಪಿಕಪ್ ಮತ್ತು ಡ್ರಾಪ್ ಪ್ರದೇಶದಲ್ಲಿದ್ದ ಚಾವಣಿ ಶನಿವಾರ ಕುಸಿದುಬಿದ್ದಿದೆ –ಪಿಟಿಐ ಚಿತ್ರ

ರಾಜ್‌ಕೋಟ್ (ಪಿಟಿಐ): ಭಾರಿ ಮಳೆಯಿಂದಾಗಿ ರಾಜ್‌ಕೋಟ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಯಾಣಿಕರ ಪಿಕಪ್ ಮತ್ತು ಡ್ರಾಪ್ ಪ್ರದೇಶದಲ್ಲಿದ್ದ ಚಾವಣಿ ಶನಿವಾರ ಕುಸಿದುಬಿದ್ದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಯಿಂದ ಯಾವುದೇ ಹಾನಿಯಾಗಿಲ್ಲ ಎಂದು ಹೇಳಿದ್ದಾರೆ.

ಭಾರಿ ಮಳೆಯಿಂದಾಗಿ ಫ್ಯಾಬ್ರಿಕ್ ಚಾವಣಿಯಲ್ಲಿ ನೀರು ನಿಂತಿತ್ತು. 'ಇದರಿಂದಾಗಿ ಕುಸಿದುಬಿದ್ದಿದೆ. ಹಾನಿಗೊಳಗಾದ ಚಾವಣಿಯನ್ನು ಸಿಬ್ಬಂದಿ ತೆರವು ಮಾಡಿದ್ದಾರೆ' ಎಂದು ವಿಮಾನ ನಿಲ್ದಾಣ ಅಧಿಕಾರಿಗಳು 'ಎಕ್ಸ್' ಮೂಲಕ ತಿಳಿಸಿದ್ದಾರೆ. ಘಟನೆ ಬೆನ್ನಲ್ಲೇ ವಿರೋಧ ಪಕ್ಷ ಕಾಂಗ್ರೆಸ್, ಆಡಳಿತಾರೂಢ ಬಿಜೆಪಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

'ಪ್ರಧಾನಿ ನರೇಂದ್ರ ಮೋದಿ ಅವರು 11 ತಿಂಗಳ ಹಿಂದಷ್ಟೆ ವಿಮಾನ ನಿಲ್ದಾಣವನ್ನು ಉದ್ಘಾಟಿಸಿದ್ದರು' ಎಂದು ಗುಜರಾತ್ ಕಾಂಗ್ರೆಸ್ ಘಟಕದ ಅಧ್ಯಕ್ಷ ಶಕ್ತಿ ಸಿನ್ಹಾ ಗೋಹಿಲ್ ಟೀಕಿಸಿದ್ದಾರೆ.

'11 ತಿಂಗಳಲ್ಲಿ ಚಾವಣಿ ಕುಸಿದಿದೆ. ಭ್ರಷ್ಟಾಚಾರ ಯಾವ ಪ್ರಮಾಣದಲ್ಲಿದೆ ಎಂಬುದಕ್ಕೆ ಇದೇ ಸಾಕ್ಷಿ. ಘಟನೆ ವೇಳೆ ಚಾವಣಿಯ ಕೆಳಗೆ ಯಾರೂ ಇರದ ಕಾರಣ ಅನಾಹುತ ತಪ್ಪಿದೆ. ಜನರ ಜೀವಕ್ಕೆ ಅಪಾಯವಾಗಿದ್ದರೆ ಅದಕ್ಕೆ ಹೊಣೆ ಯಾರು' ಎಂದು ಪ್ರಶ್ನಿಸಿದ್ದಾರೆ.

ದೆಹಲಿ ಮತ್ತು ಜಬಲ್‌ಪುರದಲ್ಲಿ ವಿಮಾನ ನಿಲ್ದಾಣಗಳಲ್ಲಿಯೂ ಇತ್ತೀಚೆಗೆ ಇಂಥದ್ದೇ ಘಟನೆಗಳು ನಡೆದಿವೆ.

ಅರುಣಾಚಲದಲ್ಲಿ ಭೂಕುಸಿತ (ಇಟಾನಗರ ವರದಿ): ಮಳೆಯಿಂದಾಗಿ ಸಂಭವಿಸಿರುವ ಭೂಕುಸಿತದ ಕಾರಣ ಅರುಣಾಚಲ ಪ್ರದೇಶದ ಹಲವೆಡೆ ರಸ್ತೆ ಸಂಪರ್ಕಗಳು ಕಡಿತಗೊಂಡಿವೆ. ಆಲೋ–ಮೆಚುಕಾ ರಸ್ತೆಯು ಹಾನಿಗೀಡಾಗಿದೆ. ಶಿಯೋಮಿ ಜಿಲ್ಲೆಯಲ್ಲಿ ಸೇನೆ ನಿಯೋಜಿಸುವ ನಿಟ್ಟಿನಲ್ಲಿ ಈ ರಸ್ತೆಯು ಮಹತ್ವ ಪಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಸ್ತೆಗಳಲ್ಲಿ ಬಿದ್ದಿರುವ ಅವಶೇಷಗಳನ್ನು ತೆರವುಗೊಳಿಸಲು ಗಡಿ ರಸ್ತೆ ಸಂಸ್ಥೆಯು ಕೆಲಸ ಆರಂಭಿಸಿದೆ. ಸದ್ಯದಲ್ಲೇ ಲಘು ವಾಹನಗಳ ಸಂಚಾರಕ್ಕೆ ರಸ್ತೆಯನ್ನು ಮುಕ್ತ ಮಾಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ದೆಹಲಿಯಲ್ಲಿ ಭಾರಿ ಮಳೆ: ಹಲವೆಡೆ ಸಂಚಾರ ಸ್ಥಗಿತ

ಪ್ರಗತಿ ಮೈದಾನ ಸುರಂಗದಲ್ಲಿ ನೀರು

ನವದೆಹಲಿ (ಪಿಟಿಐ): ಭಾರಿ ಮಳೆಯಿಂದಾಗಿ ದೆಹಲಿಯ ಪ್ರಗತಿ ಮೈದಾನ ಸುರಂಗ ಮಾರ್ಗದಲ್ಲಿ ನೀರು ನಿಂತಿದ್ದು, ಸಂಚಾರವನ್ನು ಶನಿವಾರವೂ ಸ್ಥಗಿತಗೊಳಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದರು.

ಸುರಂಗದಿಂದ ನೀರು ಹೊರ ಹಾಕುವ ಕೆಲಸವು ಜಾರಿಯಲ್ಲಿದೆ. ಶೀಘ್ರದಲ್ಲೇ ಈ ಮಾರ್ಗವನ್ನು ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದರು.

ನಗರದ ಹಲವು ಭಾಗಗಳಲ್ಲಿ ನೀರು ನಿಂತಿದ್ದು, ಸಂಚಾರಕ್ಕೆ ಅಡ್ಡಿಯಾಗಿದೆ. ಮಿಂಟೊ ಕೆಳಸೇತುವೆ, ಮೂಲ್‌ಚಂದ್ ಕಳಸೇತುವೆ, ಝಖೀರ, ದೌಲಖೌನ್ ಮತ್ತು ಅದ್ಜಿನಿ ಮತ್ತು ಇತರ ರಸ್ತೆಗಳಲ್ಲಿ 4–5 ಗಂಟೆ ಕಾರ್ಯಾಚರಣೆ ನಡೆಸಿ ನೀರು ಹೊರಹಾಕಲಾಗಿದೆ. ಸೀಲಂಪುರ, ಕೃಷ್ಣ ನಗರ ಮತ್ತು ಬದ್ಲಿ ಪ್ರದೇಶಗಳಲ್ಲಿ 2–3 ಗಂಟೆ ಕಾರ್ಯಾಚರಣೆ ನಡೆಸಲಾಯಿತು ಎಂದು ದೆಹಲಿ ಲೋಕೋಪಯೋಗಿ ಇಲಾಖೆಗೆ (ಪಿಡಬ್ಲ್ಯುಡಿ) ತಿಳಿಸಿದೆ.

ಶುಕ್ರವಾರ ಒಂದೇ ದಿನ 200 ಹೆಚ್ಚು ಕರೆಗಳನ್ನು ಸ್ವೀಕರಿಸಲಾಗಿದೆ. ಕೆಲವೆಡೆ ಮರಗಳು ಉರುಳಿರುವುದಾಗಿಯೂ ಕರೆ ಬಂದಿತ್ತು ಎಂದು ಪಿಡಬ್ಲ್ಯುಡಿ ಹೇಳಿದೆ.

ಲೆಫ್ಟಿನಂಟ್ ಗವರ್ನರ್‌ರಿಂದ ಪರಿಶೀಲನೆ: ಭಾರಿ ಮಳೆಯಿಂದ ತೀವ್ರವಾಗಿ ಬಾಧಿತವಾಗಿರುವ ಪ್ರದೇಶಗಳಿಗೆ ದೆಹಲಿ ಲೆಫ್ಟಿನಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ಭೇಟಿ ನೀಡಿ, ಮಳೆಯಿಂದ ಆದ ಹಾನಿ ಮತ್ತು ಪರಿಹಾರ ಕ್ರಮಗಳ ಕುರಿತು ಪರಿಶೀಲನೆ ನಡೆಸಿದರು ಎಂದು ಶನಿವಾರ ಬಿಡುಗಡೆ ಮಾಡಲಾಗಿರುವ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.


ಹರಿದ್ವಾರ: ನದಿಯಲ್ಲಿ ಕೊಚ್ಚಿಹೋದ ಕಾರುಗಳು

ಹರಿದ್ವಾರ (ಪಿಟಿಐ): ಹರಿದ್ವಾರದಲ್ಲಿ ಶನಿವಾರ ಮಧ್ಯಾಹ್ನ ಸುರಿದ ಭಾರಿ ಮಳೆಗೆ ಸೂಖೀ ನದಿಯಲ್ಲಿ ಪ್ರವಾಹ ಉಂಟಾಗಿದ್ದು, ಹಲವು ಕಾರುಗಳು ಕೊಚ್ಚಿಹೋಗಿವೆ.

ಹಲವು ಮನೆಗಳಿಗೆ ಮಳೆ ನೀರು ನುಗ್ಗಿ ಜನಜೀವನ ಅಸ್ತವ್ಯಸ್ತವಾಗಿದೆ. ಯಾತ್ರಾಸ್ಥಳಗಳ ರಸ್ತೆಗಳು ಜಲಾವೃತವಾಗಿವೆ.

ಮಳೆಯಿಲ್ಲದೆ ಸೂಖೀ ನದಿ ಒಣಗಿತ್ತು. ಹೀಗಾಗಿ ನದಿಯ ತಟದಲ್ಲಿ ಜನರು ತಮ್ಮ ಕಾರುಗಳನ್ನು ನಿಲ್ಲಿಸಿದ್ದರು. ಏಕಾಏಕಿ ಸುರಿದ ಮಳೆಯಿಂದಾಗಿ ನದಿಯು ತುಂಬಿ ಹರಿದು ಪ್ರವಾಹ ಸೃಷ್ಟಿಯಾದ ಕಾರಣ ಹಲವು ಕಾರುಗಳು ಕೊಚ್ಚಿಹೋಗಿವೆ.

ಗಂಗಾ ನದಿ ಮೇಲೆ ನಿರ್ಮಿಸಲಾದ ಸೇತುವೆ ಮೇಲೆ ನಿಂತು ಕಾರುಗಳು ಕೊಚ್ಚಿಹೋಗುತ್ತಿರುವ ದೃಶ್ಯವನ್ನು ಜನರು ತಮ್ಮ ಮೊಬೈಲ್‌ಗಳಲ್ಲಿ ಸೆರೆ ಹಿಡಿದಿದ್ದಾರೆ.


ಹರಿದ್ವಾರದಲ್ಲಿ ಶನಿವಾರ ಸುರಿದ ಭಾರಿ ಮಳೆಯಿಂದಾಗಿ ಪ್ರವಾಹ ಉಂಟಾಗಿದ್ದು, ಹಲವು ಕಾರುಗಳು ಗಂಗಾ ನದಿಯಲ್ಲಿ ಕೊಚ್ಚಿಹೋಗಿವೆ –ಪಿಟಿಐ ಚಿತ್ರ

ಬಿಹಾರಕ್ಕೆ ವಿಶೇಷ ಸ್ಥಾನಮಾನ ನೀಡಲು ಜೆಡಿಯು ಒತ್ತಾಯ

ನವದೆಹಲಿ (ಪಿಟಿಐ): ನರೇಂದ್ರ ಮೋದಿ ನೇತೃತ್ವದ ಸರ್ಕಾರ ರಚನೆಯಲ್ಲಿ ತಾನು ವಹಿಸಿರುವ ಪ್ರಮುಖ ಪಾತ್ರದ ಬಗ್ಗೆ ಉಲ್ಲೇಖಿಸಿರುವ ಜೆಡಿಯು, ಬಿಹಾರ ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡವು ಬಗ್ಗೆ ಅಥವಾ ವಿಶೇಷ ಪ್ಯಾಕೇಜ್ ನೀಡುವ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ಬಗ್ಗೆ ನಿರ್ಣಯ ಕೈಗೊಂಡಿದೆ.

ದೆಹಲಿಯಲ್ಲಿ ನಡೆದ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಈ ನಿರ್ಣಯ ತೆಗೆದುಕೊಳ್ಳಲಾಯಿತು.

ಬಿಹಾರ ಮುಖ್ಯಮಂತ್ರಿ ಹಾಗೂ ಪಕ್ಷದ ಅಧ್ಯಕ್ಷ ನಿತೀಶ್ ಕುಮಾರ್ ಅಧ್ಯಕ್ಷತೆ ವಹಿಸಿದ್ದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಬೆಲೆ ಏರಿಕೆ ಹಾಗೂ ನಿರುದ್ಯೋಗದ ಬಗ್ಗೆ ಎನ್‌ಡಿಎ ಸರ್ಕಾರ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯಿತು.

ಇದೇ ವೇಳೆ, ರಾಜ್ಯಸಭೆ ಸದಸ್ಯ ಸಂಜಯ್ ಝಾ ಅವರನ್ನು ಪಕ್ಷದ ಕಾರ್ಯಕಾರಿ ಅಧ್ಯಕ್ಷರನ್ನಾಗಿ ಜೆಡಿಯು ನೇಮಿಸಿತು.

ಬಿಜೆಪಿ ನಾಯಕರ ಜೊತೆ ಸಂಜಯ್ ಅವರು ಉತ್ತಮ ಬಾಂಧವ್ಯ ಹೊಂದಿದ್ದಾರೆ. ಅಲ್ಲದೇ ಅವರು ರಾಜ್ಯಸಭೆಯಲ್ಲಿ ಜೆಡಿಯು ನಾಯಕರಾಗಿದ್ದಾರೆ. ಈ ನಿಟ್ಟಿನಲ್ಲಿ ಅವರ ಆಯ್ಕೆಯು ಮಹತ್ವ ಪಡೆದಿದೆ.

ಬಿಹಾರ ಮುಖ್ಯಮಂತ್ರಿ, ಜೆಡಿಯು ಅಧ್ಯಕ್ಷ ನಿತೀಶ್ ಕುಮಾರ್, ಕೇಂದ್ರ ಸಚಿವರಾದ ಲಲನ್ ಸಿಂಗ್, ರಾಮ್‌ನಾಥ್ ಠಾಕೂರ್ ಮತ್ತು ಪಕ್ಷದ ಇತರ ಹಿರಿಯ ನಾಯಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಗೋಡೆ ಕುಸಿದು ಮೂವರು ಕಾರ್ಮಿಕರ ಸಾವು

ನವದೆಹಲಿ (ಪಿಟಿಐ): ಇಲ್ಲಿಯ ವಸಂತ ವಿಹಾರ ಪ್ರದೇಶದಲ್ಲಿ ನಿರ್ಮಾಣ ಹಂತದಲ್ಲಿದ್ದ ಗೋಡೆಯು ಮಳೆಯಿಂದಾಗಿ ಶುಕ್ರವಾರ ಕುಸಿದಿದ್ದ ಸ್ಥಳದಿಂದ ಮೂವರು ಕಾರ್ಮಿಕರ ಮೃತದೇಹಗಳನ್ನು ಶನಿವಾರ ಹೊರ ತರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಮೂಲಕ ಮಳೆ ಸಂಬಂಧಿ ಅವಘಡಗಳಿಂದ ದೆಹಲಿಯಲ್ಲಿ ಮೃತಪಟ್ಟವರ ಸಂಖ್ಯೆ 11ಕ್ಕೆ ಏರಿಕೆಯಾದಂತಾಗಿದೆ.

ಮೃತಪಟ್ಟವರಲ್ಲಿ ಇಬ್ಬರನ್ನು ಸಂತೋಷ್ ಕುಮಾರ್ ಯಾದವ್ (19) ಮತ್ತು ಸಂತೋಷ್ (38) ಎಂದು ಗುರುತಿಸಲಾಗಿದೆ. ಮೂರನೇ ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ ಎಂದು ದೆಹಲಿ ಅಗ್ನಿಶಾಮಕ ಸೇವೆ ತಿಳಿಸಿದೆ.

ಬೇರೆ ಯಾರೂ ಅವಶೇಷಗಳ ಅಡಿ ಸಿಲುಕಿಲ್ಲ ಎಂಬ ಕುರಿತು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಶೋಧಕಾರ್ಯ ಮುಂದುವರಿಸಲಾಗಿದೆ. ದೆಹಲಿಯಲ್ಲಿ ಶುಕ್ರವಾರ ದಾಖಲೆಯ ಮಳೆಯಾಯಿತು.

'ಜಾರ್ಖಂಡ್‌ನಿಂದ ಬಿಜೆಪಿ ತೊಲಗಿಸುವೆವು'

ರಾಂಚಿ (ಪಿಟಿಐ): ತಮ್ಮ ವಿರುದ್ಧ ಬಿಜೆಪಿ ಪಿತೂರಿ ಮಾಡಿದೆಯೆಂದು ಆರೋಪಿಸಿದ ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್, ಮುಂಬರುವ ವಿಧಾನಸಭೆ ಚುನಾವಣೆ ಬಳಿಕ ರಾಜ್ಯದಿಂದ ಬಿಜೆಪಿಯನ್ನು ತೊಲಗಿಸುತ್ತೇವೆ ಎಂದು ಹೇಳಿದ್ದಾರೆ.

ತಮ್ಮ ನಿವಾಸದ ಬಳಿ ಸೇರಿದ್ದ ಜಾರ್ಖಂಡ್ ಮುಕ್ತಿ ಮೋರ್ಚಾ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಶನಿವಾರ ಮಾತನಾಡಿದ ಅವರು, 'ನನ್ನನ್ನು ಜೈಲಿನಲ್ಲಿಡಲು ಪಿತೂರಿ ಮಾಡಿದವರ ವಿರುದ್ಧ ಬಂಡಾಯ ಏಳಲಿದೆ. ಜಾರ್ಖಂಡ್ ಜನತೆ ಬಿಜೆಪಿಯನ್ನು ಸುಮ್ಮನೆ ಬಿಡುವುದಿಲ್ಲ' ಎಂದು ಗುಡುಗಿದರು.

ಬಿಜೆಪಿಯ ಶವಪೆಟ್ಟಿಗೆಗೆ ಕೊನೆಯ ಮೊಳೆ ಹೊಡೆಯುವ ಸಮಯ ಬಂದಿದೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಬಿಜೆಪಿಗೆ ನೆಲೆ ಇರುವುದಿಲ್ಲ ಎಂದು ಹೇಳಿದರು.

'ಬಿಜೆಪಿಯವರು ಅವಧಿಪೂರ್ವ ಚುನಾವಣೆ ನಡೆಸಲು ಯೋಜಿಸುತ್ತಿದ್ದಾರೆ ಎಂಬುದು ನನ್ನ ಗಮನಕ್ಕೆ ಬಂದಿದೆ. ತಮಗೆ ಇಷ್ಟ ಬರುವ ಯಾವುದೇ ಸಮಯದಲ್ಲಿ ಬೇಕಾದರೂ ಚುನಾವಣೆ ನಡೆಸಲಿ. ಆದರೆ, ಜಾರ್ಖಂಡ್‌ನಲ್ಲಿ ಚುನಾವಣೆ ಗೆಲ್ಲುತ್ತೇವೆ ಎಂಬ ಬಿಜೆಪಿಯ ಕನಸು ನನಸಾಗದು. ಬಿಜೆಪಿಯು ಹಲವು ರಾಜ್ಯಗಳಲ್ಲಿ ಬುಡಕಟ್ಟು ಸಮುದಾಯಕ್ಕೆ ಸೇರಿದವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದೆ. ಆದರೆ, ಅವರೆಲ್ಲರೂ ರಬ್ಬರ್ ಸ್ಟಾಂಪ್ ಆಗಿದ್ದಾರೆ' ಎಂದು ಹೇಳಿದರು.

'ಜಾತ್ಯತೀತ ಪಕ್ಷಗಳ ಒಗ್ಗಟ್ಟಿಗೆ ಸೊರೇನ್ ಬಿಡುಗಡೆ ನೆರವು'

ಹೇಮಂತ್ ಸೊರೇನ್ ಅವರ ಬಿಡುಗಡೆಯು ರಾಜ್ಯದಲ್ಲಿ ಜಾತ್ಯತೀತ ಪಕ್ಷಗಳು ಒಟ್ಟಿಗೆ ತರಲು ನೆರವಾಗಲಿದೆ ಎಂದು ಕಮ್ಯುನಿಸ್ಟ್ ಪಕ್ಷದ (ಸಿಪಿಐ) ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಪ್ರತಿಪಾದಿಸಿದ್ದಾರೆ.

'ಭಾರತೀಯ ಕಿಸಾನ್ ಮಹಾಸಭಾ' ರೈತ ಸಂಘಟನೆ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವರು ಎರಡು ದಿನಗಳ ಪ್ರವಾಸ ಕೈಗೊಂಡಿದ್ದಾರೆ. ಶನಿವಾರ ಬಿರ್ಸಾ ಮುಂಡಾ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿ, 'ದೇಶದಲ್ಲಿನ ಬಲಪಂಥೀಯ, ಕೋಮು, ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧದ ಹೋರಾಟಕ್ಕೆ ನಾವು ಇಂಡಿಯಾ ಒಕ್ಕೂಟದ ಅಡಿ ಪ್ರಜಾಸತ್ತಾತ್ಮಕ ಜಾತ್ಯತೀತ ಪಕ್ಷಗಳನ್ನು ಒಗ್ಗೂಡಿಸಲು ಯತ್ನಿಸುತ್ತಿದ್ದೇವೆ. ಸಂಸತ್ತಿನ ಒಳಗೆ ಮತ್ತು ಹೊರಗೆ ಈ ನಿಟ್ಟಿನಲ್ಲಿ ಸಂಘಟಿತರಾಗುತ್ತಿದ್ದೇವೆ. ಸೊರೇನ್ ಜೈಲಿನಿಂದ ಬಿಡುಗಡೆಯಾಗಿದ್ದು, ರಾಜ್ಯದಲ್ಲಿ ಜಾತ್ಯತೀತ ಪಕ್ಷಗಳ ಒಟ್ಟುಗೂಡಿಸಲು ನೆರವಾಗಲಿದೆ' ಎಂದು ಹೇಳಿದರು.

ಕೇಜ್ರಿವಾಲ್‌ಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಜುಲೈ 12ರವರೆಗೆ ನ್ಯಾಯಾಂಗ ಬಂಧನದಲ್ಲಿರಿಸಲು ಇಲ್ಲಿನ ನ್ಯಾಯಾಲಯ ಶನಿವಾರ ಆದೇಶಿಸಿದೆ.

ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳನ್ನು ಬಹಿರಂಗಪಡಿಸುವಂತೆ ಕೇಜ್ರಿವಾಲ್ ಪರ ವಕೀಲರ ಕೋರಿಕೆಯನ್ನು ಕೋರ್ಟ್ ತಿರಸ್ಕರಿಸಿದೆ.

ಮೂರು ದಿನಗಳ ಕಸ್ಟಡಿ ವಿಚಾರಣಾ ಅವಧಿ ಮುಗಿದ ಬಳಿಕ ಕೇಜ್ರಿವಾಲ್ ಅವರನ್ನು ವಿಶೇಷ ನ್ಯಾಯಾಧೀಶ ಸುನೇನಾ ಶರ್ಮಾ ಅವರ ಮುಂದೆ ಹಾಜರುಪಡಿಸಲಾಯಿತು.

ತನಿಖಾ ದೃಷ್ಟಿಯಿಂದ ಕೇಜ್ರಿವಾಲ್ ಅವರಿಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಬೇಕು ಎಂದು ಸಿಬಿಐ ಅರ್ಜಿಯಲ್ಲಿ ಕೋರಿತ್ತು. ಸಿಬಿಐ ಅರ್ಜಿಯನ್ನು ಅಂಗೀಕರಿಸಿದ ನ್ಯಾಯಾಧೀಶರು, ಅವರಿಗೆ ಜುಲೈ 12ರವರೆಗೆ ನ್ಯಾಯಾಂಗ ಬಂಧನಕ್ಕೆ ಆದೇಶಿಸಿದರು. ಅರವಿಂದ ಕೇಜ್ರಿವಾಲ್ ಅವರನ್ನು ಸಿಬಿಐ ಜೂನ್ 26ರಂದು ಬಂಧಿಸಿತ್ತು.


ಅರವಿಂದ ಕೇಜ್ರಿವಾಲ್ ಅವರನ್ನು ದೆಹಲಿ ನ್ಯಾಯಾಲಯದಲ್ಲಿ ಹಾಜರುಪಡಿಸಲು ಶನಿವಾರ ಕರೆ ತರಲಾಯಿತು –ಪಿಟಿಐ ಚಿತ್ರ

ಕೇಜ್ರಿವಾಲ್ ಪರವಾಗಿ ವಾದಿಸಿದ ಹಿರಿಯ ವಕೀಲ ವಿಕ್ರಮ್ ಚೌಧರಿ, '2022ರಿಂದ ನಡೆಯುತ್ತಿರುವ ತನಿಖೆ ಇದಾಗಿದೆ. ಮಾರ್ಚ್ 21ರಂದು ಜಾರಿ ನಿರ್ದೇಶನಾಲಯ ಅವರನ್ನು ಬಂಧಿಸಿತ್ತು. ಮೇ 10ರಂದು ಸುಪ್ರೀಂ ಕೋರ್ಟ್ ಅವರಿಗೆ ಮೂರು ವಾರಗಳ ಮಧ್ಯಂತರ ಜಾಮೀನು ನೀಡಿತ್ತು' ಎಂದು ವಿವರಿಸಿದರು.

ಕಸ್ಟಡಿ ವಿಚಾರಣೆ ಸಮಯದಲ್ಲಿನ ಕೇಸ್ ಡೈರಿ ಸೇರಿದಂತೆ ಸಂಗ್ರಹಿಸಲಾದ ಎಲ್ಲ ದಾಖಲೆಗಳನ್ನು ಒದಗಿಸಲು ಸಿಬಿಐಗೆ ನಿರ್ದೇಶಿಸುವಂತೆ ಅವರು ಕೋರಿದರು.

ಈ ಸಂಬಂಧ ಆದೇಶ ನೀಡಲು ನಿರಾಕರಿಸಿದ ನ್ಯಾಯಾಧೀಶರು, 'ಈ ಅಂಶಗಳನ್ನು ನ್ಯಾಯಾಲಯದ ಪರಿಗಣನೆಗೆ ಬಿಡಿ' ಎಂದು ಹೇಳಿದರು. ಅದಾಗ್ಯೂ, ಆರೋಪಿಯು ಜಾಮೀನಿಗೆ ಅರ್ಜಿ ಸಲ್ಲಿಸಬಹುದು ಎಂದು ನ್ಯಾಯಾಧೀಶರು ಸ್ಪಷ್ಟಪಡಿಸಿದರು.

ಆರೋಪಿಯನ್ನು ಅವರ ಪತ್ನಿ ಸುನೀತಾ ಕೇಜ್ರಿವಾಲ್ ಮತ್ತು ಕುಟುಂಬದವರು ಭೇಟಿಯಾಗಲು ಅವಕಾಶ ನೀಡುವಂತೆ ಚೌಧರಿ ಅವರು ನ್ಯಾಯಾಲಯವನ್ನು ಕೋರಿದರು. ನ್ಯಾಯಾಲಯದ ಕೊಠಡಿಯೊಳಗೆ ಕೇಜ್ರಿವಾಲ್ ಅವರನ್ನು ಭೇಟಿಯಾಗಲು ಅವರ ಕುಟುಂಬದವರಿಗೆ ನ್ಯಾಯಾಲಯ ಅನುಮತಿ ನೀಡಿತು.

ವಿಚಾರಣೆಗೆ ಸಂಜಯ್ ಸಿಂಗ್ ಗೈರು

ಸುಲ್ತಾನಪುರ (ಪಿಟಿಐ): 2021ರಲ್ಲಿ ಕೋವಿಡ್–19 ನಿಯಮ ಉಲ್ಲಂಘಿಸಿದ ಆರೋಪ ಎದುರಿಸುತ್ತಿರುವ ಎಎಪಿ ಮುಖಂಡ ಹಾಗೂ ರಾಜ್ಯಸಭೆ ಸದಸ್ಯ ಸಂಜಯ್ ಸಿಂಗ್, ಈ ಕುರಿತು ವಿಚಾರಣೆ ನಡೆಸುತ್ತಿರುವ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಶನಿವಾರ ಗೈರು ಹಾಜರಾಗಿದ್ದಾರೆ.

ತಮ್ಮ ಕಕ್ಷಿದಾರ ಸಂಸತ್ತಿನ ಕಲಾಪದಲ್ಲಿ ತೊಡಗಿರುವ ಕಾರಣ ವಿಚಾರಣೆಗೆ ಹಾಜರಾಗಲು ಸಾಧ್ಯವಾಗಿಲ್ಲ ಎಂದು ಅವರ ಪರ ವಕೀಲರು ಸಂಸದರ–ಶಾಸಕರ ನ್ಯಾಯಾಲಯಕ್ಕೆ ತಿಳಿಸಿದ್ದಾರೆ.


ಸಂಜಯ್ ಸಿಂಗ್

ಈ ಪ್ರಕರಣದ ಮುಂದಿನ ವಿಚಾರಣೆಗೆ ಜುಲೈ 6ರಂದು ನಡೆಯಲಿದೆ.

ಜೂನ್ 21ರಂದು ಈ ಕುರಿತು ವಿಚಾರಣೆ ನಡೆಸಿದ್ದ ಜನಪ್ರತಿನಿಧಿಗಳ ನ್ಯಾಯಾಲಯವು, ವಿಚಾರಣೆಗೆ ಹಾಜರಾಗುವುದರಿಂದ ನಿರಂತರವಾಗಿ ತಪ್ಪಿಸಿಕೊಳ್ಳುತ್ತಿರುವ ಸಂಜಯ್ ಸಿಂಗ್ ಅವರ ವಿರುದ್ಧ ಬಂಧನದ ವಾರಂಟ್‌ಅನ್ನು ಹೊರಡಿಸಿತ್ತು.

ರಫ್ತು ಪ್ರಮಾಣ ಹೆಚ್ಚಳ ನಿರೀಕ್ಷೆ: ಗೋಯಲ್



ಮುಂಬೈ (ಪಿಟಿಐ): 'ಜಾಗತಿಕ ಸವಾಲುಗಳ ನಡುವೆಯೂ 2024–25ನೇ ಆರ್ಥಿಕ ವರ್ಷದಲ್ಲಿ ದೇಶದ ಸರಕು ಮತ್ತು ಸೇವಾ ರಫ್ತು ಮೌಲ್ಯವು ₹66.68 ಲಕ್ಷ ಕೋಟಿ ದಾಟಲಿದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಹರಳು ಮತ್ತು ಚಿನ್ನಾಭರಣಗಳ ರಫ್ತುದಾರರ ಸಂಘದಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 2023–24ನೇ ಆರ್ಥಿಕ ವರ್ಷದಲ್ಲಿ ₹64.85 ಲಕ್ಷ ಕೋಟಿ ಮೌಲ್ಯದ ರಫ್ತು ವಹಿವಾಟು ನಡೆದಿತ್ತು ಎಂದರು.

'ಪ್ರಸ್ತುತ ಜಾಗತಿಕ ಮಟ್ಟದಲ್ಲಿ ಕಠಿಣ ಪರಿಸ್ಥಿತಿ ಇದೆ. ಉಕ್ರೇನ್–ರಷ್ಯಾ ಮತ್ತು ಇಸ್ರೇಲ್–ಹಮಾಸ್ ನಡುವಿನ ಯುದ್ಧ ಮುಕ್ತಾಯಗೊಂಡಿಲ್ಲ. ಅಲ್ಲದೆ, ಕೆಂಪು ಸಮುದ್ರದ ಬಿಕ್ಕಟ್ಟು ಶಮನಗೊಂಡಿಲ್ಲ. ಜನತಂತ್ರ ವ್ಯವಸ್ಥೆ ಹೊಂದಿರುವ ಯುರೋಪ್‌ನ ಕೆಲವು ರಾಷ್ಟ್ರಗಳಲ್ಲಿ ಚುನಾವಣೆಗಳು ನಡೆಯುತ್ತಿವೆ' ಎಂದು ಹೇಳಿದರು.


'ಇಂತಹ ಪರಿಸ್ಥಿತಿ ನಡುವೆಯೂ ದೇಶದ ರಫ್ತು ವಹಿವಾಟು ಹೆಚ್ಚುತ್ತಿದೆ. ಮೇ ತಿಂಗಳಿನಲ್ಲಿ ಶೇ 9ರಷ್ಟು ಏರಿಕೆಯಾಗಿರುವುದೇ ಇದಕ್ಕೆ ಸಾಕ್ಷಿ. ಇಡೀ ವಿಶ್ವವೇ ಭಾರತದಲ್ಲಿ ವ್ಯಾಪಾರ ಮತ್ತು ಹೂಡಿಕೆಗೆ ಇಚ್ಛಿಸುತ್ತಿದೆ. ಹಾಗಾಗಿ, ನಿರೀಕ್ಷಿತ ಗುರಿ ಸಾಧನೆಯಾಗಲಿದೆ' ಎಂದು ಹೇಳಿದರು.

ರಫ್ತು ಪ್ರಮಾಣದಲ್ಲಿ ಹೆಚ್ಚಳ ಹಾಗೂ ತಯಾರಿಕಾ ವಲಯದ ಬೆಳವಣಿಗೆಯಿಂದಾಗಿ ಕಳೆದ ಆರ್ಥಿಕ ವರ್ಷದಲ್ಲಿ ದೇಶದ ಚಾಲ್ತಿ ಖಾತೆ ಕೊರತೆಯು (ಸಿಎಡಿ) ತಗ್ಗಿತ್ತು ಎಂದರು. ದೇಶದಲ್ಲಿ ವಿದ್ಯುತ್‌ಚಾಲಿತ ವಾಹನಗಳ ಬಳಕೆಗೆ ಹೆಚ್ಚು ಉತ್ತೇಜನ ನೀಡಿದರೆ ಕಚ್ಚಾ ತೈಲದ ಆಮದು ಪ್ರಮಾಣದಲ್ಲಿ ಇಳಿಕೆಯಾಗಲಿದೆ ಎಂದು ತಿಳಿಸಿದರು.

ರಫ್ತು ಹೆಚ್ಚಳಕ್ಕೆ ಸಂಬಂಧಿಸಿದಂತೆ ಸಂಬಾರ ಪದಾರ್ಥಗಳು, ರಬ್ಬರ್, ತಂಬಾಕು, ಚಹಾ ಹಾಗೂ ಕಾಫಿ ಮಂಡಳಿಯ ಜೊತೆಗೆ ಸಚಿವಾಲಯವು ಸರಣಿ ಸಭೆ ನಡೆಸುತ್ತಿದೆ ಎಂದರು.

ಸಚಿವಾಲಯ, ಹರಳು ಮತ್ತು ಚಿನ್ನಾಭರಣ ರಫ್ತು ಉತ್ತೇಜನ ಮಂಡಳಿಯು, ಯುರೋಪಿಯನ್ ಒಕ್ಕೂಟ ಮತ್ತು ಜಿ7 ರಾಷ್ಟ್ರಗಳ ನಡುವೆ ನಿರಂತರ ಸಂಪರ್ಕ ಹೊಂದಿದೆ ಎಂದು ತಿಳಿಸಿದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹560
12 ಕ್ಕೆ	₹75
ಮೈಸೂರು	
100ಕ್ಕೆ	₹565

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹303-478

ದ್ವಿತಳಿ (ಬಿ.ವಿ) ₹336-606

ವಂಚನೆ ಪ್ರಕರಣ ನಿಯಂತ್ರಣಕ್ಕೆ ಜುಲೈ 1ರಿಂದ ಜಾರಿ: ಟ್ರಾಯ್

ಸಿಮ್ ವಿನಿಮಯ: ಹೊಸ ನಿಯಮ

ನವದೆಹಲಿ (ಪಿಟಿಐ): ಮೊಬೈಲ್ ಫೋನ್ ಸಿಮ್ ವಿನಿಮಯ ಅಥವಾ ಬದಲಾವಣೆ ವೇಳೆ ನಡೆಯುತ್ತಿದ್ದ ವಂಚನೆ ಪ್ರಕರಣಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ರೂಪಿಸಿರುವ ಹೊಸ ನಿಯಮಾವಳಿಗಳು, ಜುಲೈ 1ರಿಂದ ಜಾರಿಗೆ ಬರಲಿವೆ.

ಗ್ರಾಹಕರು ತಮ್ಮ ಮೊಬೈಲ್ ಸಂಖ್ಯೆ ಬದಲಾಯಿಸದೆ ದೂರಸಂಪರ್ಕ ಸೇವಾದಾರರನ್ನು (ಸರ್ವಿಸ್ ಪ್ರೊವೈಡರ್) ಮಾತ್ರವಷ್ಟೇ ಬದಲಾಯಿಸುವ ಪೋರ್ಟಿಂಗ್ ವ್ಯವಸ್ಥೆಯಲ್ಲಿ ಹಲವು ಬದಲಾವಣೆಯನ್ನು ತರಲಾಗಿದೆ.

ಯಾವುದಾದರು ಕಾರಣದಿಂದ ಗ್ರಾಹಕರ ಮೊಬೈಲ್ ಹಾನಿಗೀಡಾದರೆ ಅಥವಾ ಕಳೆದು ಹೋದ ಸಂದರ್ಭದಲ್ಲಿ ಅದೇ ನಂಬರ್‌ನ ಸಿಮ್ ಪಡೆಯಬಹುದಾಗಿದೆ. ಇದಕ್ಕೆ 10 ದಿನಗಳ ಕಾಲಾವಕಾಶ ನಿಗದಿಪಡಿಸಲಾಗಿತ್ತು. ಆದರೆ, ದೂರಸಂಪರ್ಕ ಸೇವಾದಾರರು ಈ ಅವಧಿಗೂ ಮೊದಲೇ ಚಂದಾದಾರರಿಗೆ ಸೇವೆ ಒದಗಿಸುತ್ತಿದ್ದರು.

ಪೋರ್ಟಿಂಗ್ ವೇಳೆ ಗ್ರಾಹಕರು ದಾಖಲೆಗಳನ್ನು ಸಲ್ಲಿಸುವುದು ಕಡ್ಡಾಯ. ಈ ವೇಳೆ ಕೆಲವು ಖಾಸಗಿ ವ್ಯಕ್ತಿಗಳು ದೂರಸಂಪರ್ಕ ಸೇವಾದಾರರ ಮೂಲಕ ನೋಂದಾಯಿತ ಗ್ರಾಹಕರ ಸಿಮ್ ಬದಲಾಗಿ, ಹೊಸ ಸಿಮ್ ಪಡೆದು ವಂಚನೆ ಎಸಗುತ್ತಿದ್ದ ಪ್ರಕರಣ ಬೆಳಕಿಗೆ ಬಂದಿದ್ದವು. ಗ್ರಾಹಕರ ದತ್ತಾಂಶ ಸುರಕ್ಷತೆಯ ದೃಷ್ಟಿಯಿಂದ ಪೋರ್ಟಿಂಗ್ ನಿಯಮದಲ್ಲಿ ಬದಲಾವಣೆ ಮಾಡಲಾಗಿದೆ ಎಂದು ಟ್ರಾಯ್ ತಿಳಿಸಿದೆ.

ಹೊಸ ನಿಯಮ ಹೇಳುವುದೇನು?

ಟೆಲಿಕಮ್ಯುನಿಕೇಷನ್ ಮೊಬೈಲ್ ನಂಬರ್ ಪೋರ್ಟೆಬಿಲಿಟಿ ನಿಯಮಾವಳಿಗಳಿಗೆ ತಿದ್ದುಪಡಿ ತರಲಾಗಿದೆ. ಇದರ ಅನ್ವಯ ಸಿಮ್ ವಿನಿಮಯ ಅಥವಾ ಬದಲಾವಣೆ ನಂತರ ಪೋರ್ಟಿಂಗ್‌ಗೆ ಅರ್ಹತೆ ಪಡೆಯುವ ಅವಧಿಯನ್ನು 7 ದಿನಗಳಿಗೆ ಇಳಿಸಲಾಗಿದೆ.



ಸಿಮ್ ಪೋರ್ಟಿಂಗ್ ಮಾಡಿಸುವಾಗ ಮೊದಲ ಹಂತದಲ್ಲಿ ವಿಶಿಷ್ಟ ಪೋರ್ಟಿಂಗ್ ಕೋಡ್ (ಯುಪಿಸಿ) ಹಂಚಿಕೆ ಮಾಡಲಾಗುತ್ತದೆ. ಆದರೆ, 7 ದಿನಕ್ಕೂ ಮೊದಲೇ ಯುಪಿಸಿ ಹಂಚಿಕೆ ಮಾಡಲು ಸಾಧ್ಯವಿಲ್ಲ ಎಂದು ಟ್ರಾಯ್ ಸ್ಪಷ್ಟಪಡಿಸಿದೆ. ಸಿಮ್ ವಿನಿಮಯ ಮಾಡುವಾಗ ವಂಚಕ ಕೃತ್ಯಗಳು ನಡೆಯುತ್ತಿದ್ದವು. ಇದಕ್ಕೆ ಕಡಿವಾಣ ಉದ್ದೇಶದಿಂದ ಹೊಸ ನಿಯಮಾವಳಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ತಿಳಿಸಿದೆ.

ಈ ಬಗ್ಗೆ ದೂರಸಂಪರ್ಕ ಕಂಪನಿಗಳ ಜೊತೆಗೆ ಚರ್ಚಿಸಲಾಗಿದೆ. ಕೆಲವು ಕಂಪನಿಗಳು ಗ್ರಾಹಕರು ಕಾಯುವ ಅವಧಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ನಿಯಮವನ್ನೇ ಮುಂದುವರಿಸಲು ಸಲಹೆ ನೀಡಿದ್ದವು. ಮತ್ತೆ ಕೆಲವು ಕಂಪನಿಗಳು ಈಗಿನ ಅವಧಿಯು ದೀರ್ಘವಾಗಿದೆ ಎಂದು ಹೇಳಿದ್ದವು. ಹಾಗಾಗಿ, ಗ್ರಾಹಕರಿಗೆ ಅನುಕೂಲ ಕಲ್ಪಿಸಲು ಕಾಯುವ ಅವಧಿಯನ್ನು ತಗ್ಗಿಸಲಾಗಿದೆ ಎಂದು ವಿವರಿಸಿದೆ.

ಆಗಸ್ಟ್ 28ಕ್ಕೆ ಹಾಲಿ ಅಧ್ಯಕ್ಷ ದಿನೇಶ್ ಖಾರಾ ಸೇವೆಯಿಂದ ನಿವೃತ್ತಿ

ಎಸ್‌ಬಿಐ ಅಧ್ಯಕ್ಷರಾಗಿ ಸಿ.ಎಸ್. ಶೆಟ್ಟಿ ಆಯ್ಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ನೂತನ ಅಧ್ಯಕ್ಷರಾಗಿ ಚಲ್ಲಾ ಶ್ರೀನಿವಾಸುಲು ಶೆಟ್ಟಿ (ಸಿ.ಎಸ್ ಶೆಟ್ಟಿ) ಆಯ್ಕೆಯಾಗಿದ್ದಾರೆ.

ಪ್ರಸ್ತುತ ಅವರು ಬ್ಯಾಂಕ್‌ನ ಹಿರಿಯ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ. ಅಂತರರಾಷ್ಟ್ರೀಯ ಬ್ಯಾಂಕಿಂಗ್, ಜಾಗತಿಕ ಮಾರುಕಟ್ಟೆ ಮತ್ತು ತಂತ್ರಜ್ಞಾನ ವಿಭಾಗದ ಉಸ್ತುವಾರಿ ಹೊತ್ತಿದ್ದಾರೆ.

ಎಸ್‌ಬಿಐ ಅಧ್ಯಕ್ಷ ಸ್ಥಾನದ ಗರಿಷ್ಠ ವಯೋಮಿತಿ 63 ವರ್ಷ. ಆಗಸ್ಟ್ 28ರಂದು ಹಾಲಿ ಅಧ್ಯಕ್ಷ ದಿನೇಶ್ ಕುಮಾರ್ ಖಾರಾ ಅವರು ಸೇವೆಯಿಂದ ನಿವೃತ್ತಿಯಾಗಲಿದ್ದಾರೆ. ಹಾಗಾಗಿ, ಹಣಕಾಸು ಸೇವಾ ಸಂಸ್ಥೆಗಳ ಬ್ಯೂರೊದಿಂದ (ಎಫ್‌ಎಸ್‌ಐಬಿ) ಶೆಟ್ಟಿ ಅವರನ್ನು ಆಯ್ಕೆ ಮಾಡಲಾಗಿದೆ.

ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳ ನಿರ್ದೇಶಕರನ್ನು ಆಯ್ಕೆ ಮಾಡುವುದು ಈ ಬ್ಯೂರೊದ ಹೊಣೆಯಾಗಿದೆ. ಶನಿವಾರ ಎಸ್‌ಬಿಐ ಅಧ್ಯಕ್ಷ ಸ್ಥಾನಕ್ಕೆ ಮೂವರ ಸಂದರ್ಶನ ನಡೆದಿದ್ದು, ಶೆಟ್ಟಿ ಅವರ ಹೆಸರನ್ನು ಅಂತಿಮಗೊಳಿಸಿದೆ.

'ಶೆಟ್ಟಿ ಅವರ ಕಾರ್ಯವೈಖರಿ ಮತ್ತು ಅವರ ಸೇವಾನುಭವವನ್ನು ಗಮನದಲ್ಲಿಟ್ಟುಕೊಂಡು ಅಧ್ಯಕ್ಷ ಸ್ಥಾನಕ್ಕೆ ಅವರ ಹೆಸರನ್ನು ಶಿಫಾರಸು ಮಾಡಲಾಗಿದೆ' ಎಂದು ಎಫ್‌ಎಸ್‌ಐಬಿ ತಿಳಿಸಿದೆ.

ಆಯ್ಕೆ ಹೇಗೆ?: ಎಸ್‌ಬಿಐ ಹಿರಿಯ ವ್ಯವಸ್ಥಾಪಕ ನಿರ್ದೇಶಕರ ಪೈಕಿಯೇ ಒಬ್ಬರನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡುವುದು ವಾಡಿಕೆಯಾಗಿದೆ. ಎಫ್‌ಎಸ್‌ಐಬಿಯು ಒಬ್ಬರ ಹೆಸರನ್ನು ಪ್ರಧಾನಿ ನೇತೃತ್ವದ ಸಂಪುಟ ನೇಮಕಾತಿ ಸಮಿತಿಗೆ ಶಿಫಾರಸು ಮಾಡುತ್ತದೆ. ಅಂತಿಮವಾಗಿ ಈ ಸಮಿತಿಯು ಆಯ್ಕೆಗೆ ಮುದ್ರೆ ಒತ್ತುತ್ತದೆ. ಕೇಂದ್ರ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ನಿವೃತ್ತ ಕಾರ್ಯದರ್ಶಿ ಭಾನು ಪ್ರತಾಪ್ ಶರ್ಮಾ ಅವರು ಸದ್ಯ ಎಫ್‌ಎಸ್‌ಐಬಿ ಅಧ್ಯಕ್ಷರಾಗಿದ್ದಾರೆ. ಹಣಕಾಸು ಸೇವೆಗಳ ಕಾರ್ಯದರ್ಶಿ, ಸಾರ್ವಜನಿಕ ಉದ್ದಿಮೆಗಳ ಕಾರ್ಯದರ್ಶಿ, ಆರ್‌ಬಿಐನ ಡೆಪ್ಯುಟಿ ಗವರ್ನರ್, ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್‌ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಅನಿಮೇಶ್ ಚೌಹಾಣ್, ಆರ್‌ಬಿಐನ ಮಾಜಿ ಕಾರ್ಯ ನಿರ್ವಾಹಕ ನಿರ್ದೇಶಕ ದೀಪಕ್ ಸಿಂಘಾಲ್, ಐಎನ್‌ಜಿ ವೈಶ್ಯ ಬ್ಯಾಂಕ್‌ನ ಮಾಜಿ ವ್ಯವಸ್ಥಾಪಕ ನಿರ್ದೇಶಕ ಶೈಲೇಂದ್ರ ಭಂಡಾರಿ ಈ ಸಮಿತಿಯ ಸದಸ್ಯರಾಗಿದ್ದಾರೆ.

ಮೂರು ದಶಕದ ಅನುಭವ

ಶೆಟ್ಟಿ ಅವರು ಬಿಎಸ್‌ಸಿ (ಕೃಷಿ) ಪದವಿ ಪಡೆದಿದ್ದಾರೆ. 1988ರಲ್ಲಿ ಪ್ರೊಬೆಷನರಿ ಅಧಿಕಾರಿಯಾಗಿ ಎಸ್‌ಬಿಐಗೆ ಸೇರಿದರು. ಮೂರು ದಶಕಗಳಿಂದ ಬ್ಯಾಂಕ್‌ನ ಕಾರ್ಪೊರೇಟ್ ಕ್ರೆಡಿಟ್, ರಿಟೇಲ್, ಡಿಜಿಟಲ್ ಮತ್ತು ಅಂತರರಾಷ್ಟ್ರೀಯ ಬ್ಯಾಂಕಿಂಗ್ ವಿಭಾಗದಲ್ಲಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ.

2020ರಲ್ಲಿ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಕವಾದರು. ಕೇಂದ್ರ ಸರ್ಕಾರ ರಚಿಸಿದ ಹಲವು ಕಾರ್ಯಪಡೆ ಮತ್ತು ಸಮಿತಿಗಳಲ್ಲಿ ಸೇವೆ ಸಲ್ಲಿಸಿದ ಹಿರಿಮೆಯನ್ನೂ ಹೊಂದಿದ್ದಾರೆ.

ಸುದ್ದಿ 2 ನಿಮಿಷ

ದೆಹಲಿ: 20 ಇಂಡಿಗೊ ವಿಮಾನ ಸಂಚಾರ ರದ್ದು

ನವದೆಹಲಿ (ಪಿಟಿಐ): ಇಲ್ಲಿನ ಇಂದಿರಾಗಾಂಧಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶನಿವಾರ ಇಂಡಿಗೊ ವಿಮಾನಯಾನ ಕಂಪನಿಯ 20 ವಿಮಾನಗಳ ಸೇವೆ ರದ್ದಾಗಿದೆ.

ಭಾರಿ ಮಳೆಗೆ ಟರ್ಮಿನಲ್ 1ರ ಚಾವಣಿಯ ಒಂದು ಭಾಗ ಕುಸಿದಿದ್ದರಿಂದ ಈ ಟರ್ಮಿನಲ್ ಮೂಲಕ ಕಾರ್ಯಾಚರಣೆ ನಡೆಸುವ ವಿಮಾನಗಳ ಸಂಚಾರವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ. ಹಾಗಾಗಿ, ವಿಮಾನ ಸೇವೆಯಲ್ಲಿ ವ್ಯತ್ಯಯವಾಗಿದೆ.



ಟರ್ಮಿನಲ್ 1ರ ಮೂಲಕ ಇಂಡಿಗೊದ 23 ಹಾಗೂ ಸ್ಪೈಸ್‌ಜೆಟ್ ಕಂಪನಿಯ 2 ವಿಮಾನಗಳ ಕಾರ್ಯಾಚರಣೆ ನಿಗದಿಯಾಗಿತ್ತು ಎಂದು ಮೂಲಗಳು ತಿಳಿಸಿವೆ.

ಈ ನಡುವೆಯೇ ಸ್ಪೈಸ್‌ಜೆಟ್ ಕಂಪನಿಯು, ಟರ್ಮಿನಲ್ 3ರ ಮೂಲಕ ತನ್ನ ವಿಮಾನ ಸಂಚಾರ ಸೇವೆಯನ್ನು ಮುಂದುವರಿಸಿದೆ. ಟರ್ಮಿನಲ್–1ರ ಮೂಲಕ ಕಾರ್ಯಾಚರಣೆ ನಡೆಸುವ ಎಲ್ಲಾ ವಿಮಾನಗಳು ಟರ್ಮಿನಲ್ 2 ಮತ್ತು ಟರ್ಮಿನಲ್ 3ರ ಮೂಲಕ ಹಾರಾಟ ನಡೆಸಲಿವೆ ಎಂದು ಹೇಳಲಾಗಿದೆ.

ವಿದೇಶಿ ವಿನಿಮಯ ಸಂಗ್ರಹ ಏರಿಕೆ: ಆರ್‌ಬಿಐ

ಮುಂಬೈ (ಪಿಟಿಐ): ಕಳೆದ ವಾರ ಇಳಿಕೆ ಕಂಡಿದ್ದ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಜೂನ್ 21ಕ್ಕೆ ಕೊನೆಗೊಂಡ ವಾರದಲ್ಲಿ ಏರಿಕೆಯಾಗಿದೆ.

₹6,800 ಕೋಟಿ ಹೆಚ್ಚಳವಾಗಿದ್ದು, ಒಟ್ಟು ಮೀಸಲು ಸಂಗ್ರಹವು ₹54.49 ಲಕ್ಷ ಕೋಟಿಗೆ (653.71 ಬಿಲಿಯನ್ ಡಾಲರ್) ತಲುಪಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ.

ವಿದೇಶಿ ವಿನಿಮಯ ಸಂಗ್ರಹದ ಪ್ರಮುಖ ಭಾಗವಾದ ವಿದೇಶಿ ಕರೆನ್ಸಿಗಳ ಸಂಗ್ರಹವು ಇಳಿಕೆಯಾಗಿದೆ. ₹883 ಕೋಟಿ ಕಡಿಮೆಯಾಗಿದ್ದು, ಒಟ್ಟು ಸಂಗ್ರಹವು ₹47.85 ಲಕ್ಷ ಕೋಟಿ ಆಗಿದೆ ಎಂದು ತಿಳಿಸಿದೆ. ಚಿನ್ನದ ಮೀಸಲು ಸಂಗ್ರಹವು ₹8,236 ಕೋಟಿ ಏರಿಕೆಯಾಗಿದ್ದು, ಒಟ್ಟು ₹4.74 ಲಕ್ಷ ಕೋಟಿಗೆ ಮುಟ್ಟಿದೆ.

ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ₹475 ಕೋಟಿ ಇಳಿಕೆಯಾಗಿದ್ದು, ₹1.50 ಲಕ್ಷ ಕೋಟಿ ಆಗಿದೆ ಎಂದು ತಿಳಿಸಿದೆ.

ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (ಐಎಂಎಫ್) ಮೀಸಲು ಸಂಗ್ರಹವು ₹75 ಕೋಟಿ ಕಡಿಮೆಯಾಗಿದ್ದು, ₹38,000 ಕೋಟಿ ಆಗಿದೆ ಎಂದು ತಿಳಿಸಿದೆ.

ಶಸ್ತ್ರಾಸ್ತ್ರ ಕೊಡಿ: ಪಾಕ್ ಮನವಿ

ವಾಷಿಂಗ್ಟನ್/ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನವು ಹೊಸದಾಗಿ ಜಾರಿಗೆ ತರಲು ಉದ್ದೇಶಿಸಿರುವ ಭಯೋತ್ಪಾದನಾ ನಿಗ್ರಹ ಯೋಜನೆಯಾದ 'ಅಜಮ್–ಇ–ಇಶ್ತೆಕಾಮ್' ಯಶಸ್ವಿಗಾಗಿ ಸಣ್ಣ ಮತ್ತು ಆಧುನಿಕ ಶಸ್ತ್ರಾಸ್ತ್ರಪೂರೈಸಬೇಕು ಎಂದು ಪಾಕಿಸ್ತಾನದ ರಾಯಭಾರಿ ಮಸೂದ್ ಖಾನ್ ಅಮೆರಿಕಕ್ಕೆ ಮನವಿ ಮಾಡಿದ್ದಾರೆ.

'ದೇಶದಲ್ಲಿನ ಉಗ್ರರ ಜಾಲವನ್ನು ನಿಷ್ಕ್ರಿಯಗೊಳಿಸಲು ಪಾಕಿಸ್ತಾನವು 'ಅಜಮ್–ಇ–ಇಶ್ತೆಕಾಮ್' ಕಾರ್ಯಾಚರಣೆ ಆರಂಭಿಸಿದ್ದು, ಅದಕ್ಕಾಗಿ ನಮಗೆ ಸಣ್ಣ ಶಸ್ತ್ರಾಸ್ತ್ರಗಳು ಮತ್ತು ಸಂವಹನ ಸಾಧನಗಳ ಅಗತ್ಯವಿದೆ' ಎಂದು ಖಾನ್ ಹೇಳಿದ್ದಾಗಿ 'ಡಾನ್' ಪತ್ರಿಕೆ ವರದಿ ಮಾಡಿದೆ.

ವಾಷಿಂಗ್ಟನ್‌ನ ವಿಲ್ಸನ್ ಸೆಂಟರ್‌ನಲ್ಲಿ ಕಳೆದ ವಾರ ನಡೆದ ಅಮೆರಿಕದ ನೀತಿ ನಿರೂಪಕರು, ವಿದ್ವಾಂಸರು, ಬೇಹುಗಾರರು, ಕಾರ್ಪೊರೇಟ್ ಮುಖಂಡರ ಸಭೆಯಲ್ಲಿ ಅವರು ಈ ಮನವಿ ಮಾಡಿದ್ದಾರೆ

ಉಕ್ರೇನ್ ಡ್ರೋನ್ ದಾಳಿ: ಐವರು ಸಾವು

ಮಾಸ್ಕೊ (ಎಎಫ್‌ಪಿ): ಉಕ್ರೇನ್ ನಡೆಸಿದ ಡ್ರೋನ್ ದಾಳಿಗೆ ರಷ್ಯಾದ ಗಡಿ ಪ್ರದೇಶದ ಮನೆಯೊಂದರಲ್ಲಿ ಇಬ್ಬರು ಮಕ್ಕಳು ಸೇರಿದಂತೆ ಐವರು ಮೃತಪಟ್ಟಿರುವುದಾಗಿ ಪ್ರಾದೇಶಿಕ ಗವರ್ನರ್ ಶನಿವಾರ ತಿಳಿಸಿದ್ದಾರೆ.

ಉಕ್ರೇನ್ ಗಡಿ ಸಮೀಪವಿರುವ ರಷ್ಯಾದ ಕುರ್ಸ್ಕ್ ಪ್ರದೇಶದ ಗೊರೊಡಿಶ್ ಗ್ರಾಮದ ಮನೆಯೊಂದರ ಮೇಲೆ ಡ್ರೋನ್ ಅಪ್ಪಳಿಸಿದೆ.

'ಇಬ್ಬರು ಮಕ್ಕಳು ಸೇರಿದಂತೆ ಐವರು ಮೃತಪಟ್ಟಿದ್ದು, ಕುಟುಂಬದ ಮತ್ತಿಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. 'ಕಾಪ್ಟರ್' ಮಾದರಿಯ ಡ್ರೋನ್ ಬಳಸಿ ದಾಳಿ ನಡೆಸಲಾಗಿದೆ' ಎಂದು ಕುರ್ಸ್ಕ್ ಗವರ್ನರ್ ಅಲೆಕ್ಸಿ ಸ್ಮಿರ್ನೋವ್ ತಿಳಿಸಿದ್ದಾರೆ.



ಯಾತ್ರೆ ಆರಂಭ ಅಮರನಾಥ ಯಾತ್ರೆ ಶನಿವಾರ ಆರಂಭವಾಗಿದೆ. ಬಾಲ್‌ಟಾಲ್ ಬೇಸ್ ಕ್ಯಾಂಪ್‌ನಿಂದ ಯಾತ್ರಿಕರ ಮೊದಲ ತಂಡವು ದಕ್ಷಿಣ ಕಾಶ್ಮೀರ ಹಿಮಾಲಯದ 3,888 ಮೀಟರ್ ಎತ್ತರದಲ್ಲಿರುವ ಗುಹೆ ದೇಗುಲದತ್ತ ಸಾಗಿತು –ಪಿಟಿಐ ಚಿತ್ರ

ಇರಾನ್: ಅಂತಿಮ ಸುತ್ತಿಗೆ ಪೆಜೆಶ್ಕಿಯಾನ್, ಜಲೀಲಿ

ದುಬೈ (ಎಪಿ/ರಾಯಿಟರ್ಸ್): ಇರಾನ್‌ನ ಅಧ್ಯಕ್ಷೀಯ ಚುನಾವಣೆಯ ಆರಂಭಿಕ ಮತದಾನದಲ್ಲಿ ಪ್ರಮುಖ ಅಭ್ಯರ್ಥಿಗಳ ಪೈಕಿ ಯಾರಿಗೂ ನಿರ್ಣಾಯಕ ಗೆಲುವು ಲಭಿಸದೇ ಇರುವುದರಿಂದ ಮೊದಲೆರಡು ಸ್ಥಾನ ಗಳಿಸಿರುವ ಅಭ್ಯರ್ಥಿಗಳ ನಡುವೆ ಮತ್ತೊಮ್ಮೆ ಸ್ಪರ್ಧೆ ನಡೆಯಲಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಮುಂದಿನ ಶುಕ್ರವಾರ ನಡೆಯಲಿರುವ ಮತದಾನದಲ್ಲಿ ಸುಧಾರಣಾವಾದಿ ಮಸೂದ್ ಪೆಜೆಶ್ಕಿಯಾನ್ ಹಾಗೂ ಸಂಪ್ರದಾಯವಾದಿ ಸಯೀದ್ ಜಲೀಲಿ ಅವರಲ್ಲಿ ಒಬ್ಬರನ್ನು ಜನ ಆಯ್ಕೆ ಮಾಡಬೇಕಿದೆ.

ಚುನಾವಣಾ ವಕ್ತಾರರಾದ ಮೊಹ್ಸಿನ್ ಇಸ್ಲಾಮಿ ಅವರು ಶುಕ್ರವಾರ ನಡೆದ ಮತದಾನದ ಫಲಿತಾಂಶವನ್ನು ಘೋಷಣೆ ಮಾಡಿದರು. ಒಟ್ಟು 2 ಕೋಟಿ 45 ಲಕ್ಷ ಮಂದಿ ಮತದಾನ ಮಾಡಿದ್ದು, ಅದರ ಪೈಕ ಪೆಜೆಶ್ಕಿಯಾನ್ ಒಂದು ಕೋಟಿ 40 ಲಕ್ಷ ಮತಗಳನ್ನು ಪಡೆದರೆ, ಜಲೀಲಿ ಅವರು 94 ಲಕ್ಷ ಮತಗಳನ್ನು ಪಡೆದರು ಎಂದು ಮೊಹ್ಸಿನ್ ತಿಳಿಸಿದ್ದಾರೆ. ಕಣದಲ್ಲಿದ್ದ ಇತರ ಸ್ಪರ್ಧಿಗಳಾದ ಮೊಹಮ್ಮದ್ ಭಾಘೀರ್ ಖಲೀಬಫ್ 33 ಲಕ್ಷ ಮತಗಳು ಹಾಗೂ ಮುಸ್ತಫಾ ಪೌರ್‌ಮೊಹಮ್ಮದಿ 2.06 ಲಕ್ಷ ಮತಗಳನ್ನು ಪಡೆದಿದ್ದಾರೆ.

ಇರಾನ್ ಕಾನೂನಿನ ಪ್ರಕಾರ, ಯಾವುದೇ ಒಬ್ಬ ಅಭ್ಯರ್ಥಿ ಗೆಲುವು ಸಾಧಿಸಬೇಕು ಎಂದರೆ, ಚಲಾವಣೆಯಾದ ಒಟ್ಟು ಮತಗಳ ಪೈಕಿ ಶೇ 50ಕ್ಕಿಂತ ಹೆಚ್ಚು ಮತ ಪಡೆಯಬೇಕು. ಅದು ಸಾಧ್ಯವಾಗದಿದ್ದರೆ, ಮೊದಲ ಎರಡು ಸ್ಥಾನ ಪಡೆದ ಅಭ್ಯರ್ಥಿಗಳಲ್ಲಿ ಒಬ್ಬರ ಆಯ್ಕೆಗೆ ಒಂದು ವಾರದ ಬಳಿಕ ಮತ್ತೊಮ್ಮೆ ಮತದಾನ ನಡೆಸಲಾಗುತ್ತದೆ. ದೇಶದ ಇತಿಹಾಸದಲ್ಲಿ ಇದುವರೆಗೆ ಒಮ್ಮೆ ಮಾತ್ರ (2005ರಲ್ಲಿ) ಈ ರೀತಿ ನಡೆದಿತ್ತು. ಆಗ ಸಂಪ್ರದಾಯವಾದಿ ಮೊಹಮ್ಮದ್ ಅಹ್ಮದಿನೆಜಾದ್ ಅವರು ಮಾಜಿ ಅಧ್ಯಕ್ಷ ಅಕ್ಬರ್ ಹಾಶಿಮಿ ರಫ್ಸಂಜಾನಿ ಅವರನ್ನು ಸೋಲಿಸಿದ್ದರು. ಕಡಿಮೆ ಮತದಾನ: ಇರಾನ್‌ನ ಆಂತರಿಕ ಸಚಿವಾಲಯ ಶನಿವಾರ ಬಿಡುಗಡೆ ಮಾಡಿದ ದತ್ತಾಂಶದ ಪ್ರಕಾರ, ಅಧ್ಯಕ್ಷೀಯ ಚುನಾವಣೆಯಲ್ಲಿ ನಡೆದಿರುವ ಮತದಾನದ ಪ್ರಮಾಣವು ಶೇ 40 ಆಗಿದ್ದು, ಇದು 1979ರ ಕ್ರಾಂತಿಯ ಬಳಿಕ ಇದುವರೆಗಿನ ಅತ್ಯಂತ ಕಡಿಮೆ ಮತದಾನ ಪ್ರಮಾಣ ಆಗಿದೆ.

ಎವರೆಸ್ಟ್ ಏರಿದ ಮೈಸೂರಿನ ಉಷಾ

ಪ್ರಜಾವಾಣಿ ವಾರ್ತೆ

ಮೈಸೂರು: ವಿಶ್ವದ ಅತಿ ಎತ್ತರದ ಮೌಂಟ್ ಎವರೆಸ್ಟ್ ಶಿಖರವೇರಿದ ಭಾರತದ ಪ್ರಥಮ ಮಹಿಳೆ ಬಚೇಂದ್ರಿ ಪಾಲ್ ಅವರ ಮಾತುಗಳನ್ನೇ ಪ್ರೇರಣೆಯನ್ನಾಗಿಸಿಕೊಂಡ ಮೈಸೂರಿನ 59 ವಯಸ್ಸಿನ ಉಷಾ ಹೆಗ್ಡೆ ಅದೇ ಶಿಖರವನ್ನು ಏರಿ ಗಮನ ಸೆಳೆದಿದ್ದಾರೆ.

ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕಿಯಾಗಿರುವ ಅವರು, ಎವರೆಸ್ಟ್ ಏರಿದ ಕರ್ನಾಟಕದ ಹಿರಿಯ ವಯಸ್ಸಿನ ಮೊದಲ ಮಹಿಳೆಯಾಗಿಯೂ ಗುರುತಿಸಿಕೊಂಡಿದ್ದಾರೆ. 2012ರಲ್ಲಿ ಸೇನಾ ತಂಡದಲ್ಲಿದ್ದ ಸ್ಮಿತಾ ಲಕ್ಷ್ಮಣ್ ಎವರೆಸ್ಟ್ ಏರಿದ್ದರು.

ಅವರಿಗೆ ಸವಾಲು ಸ್ವೀಕರಿಸುವುದು ಹೊಸತೇನಲ್ಲ. ಟ್ರಯತ್ಲಾನ್ ವಿಭಾಗದಲ್ಲಿ ಭಾಗವಹಿಸಲು 45ನೇ ವಯಸ್ಸಿನಲ್ಲಿ ಈಜು ಕಲಿತಿದ್ದರು. 2019ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದ 'ಗ್ರೆಲ್ಲಿಂಗ್ ಐರನ್ ಮ್ಯಾನ್ ಆಸ್ಟ್ರೇಲಿಯಾ' ಇವೆಂಟ್ ಪೂರ್ಣಗೊಳಿಸಿದ್ದರು. ಈ ನಡುವೆ, ಅಮೆರಿಕಾದಲ್ಲಿ ನಡೆಯುವ ಬಾಸ್ಟನ್ ಮ್ಯಾರಥಾನ್‌ಗೆ ಸಿದ್ಧತೆ ನಡೆಸುತ್ತಿರುವಾಗ, ಎವರೆಸ್ಟ್ ಏರಿದ್ದ ಪರ್ವತಾರೋಹಿ ಚೇತನಾ ಸಾಹು ಅವರನ್ನು ಭೇಟಿಯಾಗಿ, ಪರ್ವತ ಏರುವ ನಿರ್ಧಾರ ಮಾಡಿದರು.



ಮೌಂಟ್ ಎವರೆಸ್ಟ್ ಶಿಖರದಲ್ಲಿ ಉಷಾ ಹೆಗ್ಡೆ

ಅದಕ್ಕಾಗಿ ಬರೋಬ್ಬರಿ ಮೂರು ವರ್ಷದಿಂದ ತಯಾರಿ ನಡೆಸಿದ ಅವರು, ಜಿಮ್‌ನಲ್ಲಿ ಸಾಕಷ್ಟು ಕಸರತ್ತಿನ ಬಳಿಕವೂ ಬೆನ್ನಿನಲ್ಲಿ 14 ಕೆ.ಜಿ ಭಾರ ಹೊತ್ತು ವಾರದಲ್ಲಿ 3–4 ದಿನ ಚಾಮುಂಡಿ ಬೆಟ್ಟ ಹತ್ತಿ, ಇಳಿಯುತ್ತಿದ್ದರು. ವಾರದಲ್ಲಿ 3 ದಿನ ಐದು ಗಂಟೆ ಕಾಲ ನಡೆಯುತ್ತಿದ್ದರು. ಏಕಾಗ್ರತೆಗಾಗಿ ಪ್ರಾಣಾಯಾಮದಲ್ಲೂ ತೊಡಗಿದ್ದರು. ಜಮ್‌ಶೆದ್‌ಪುರದಲ್ಲಿನ ಟಾಟಾ ಸ್ಟೀಲ್ ಅಡ್ವೆಂಚರ್ ಫೌಂಡೇಷನ್‌ನಲ್ಲಿ ತಾಂತ್ರಿಕ ತರಬೇತಿಯನ್ನೂ ಪಡೆದರು. ಅಲ್ಲಿ, ಅವರಿಗೆ ಬಚೇಂದ್ರಿ ಪಾಲ್ ಹೆಚ್ಚಿನ ಧೈರ್ಯ ತುಂಬಿದರು.

ಮೈಸೂರಿನಿಂದ ಕಠ್ಮಂಡು ಮೂಲಕ ಏ.6ರಂದು ಲುಕ್ಲಾಕ್ಕೆ ತಲುಪಿ ಮೇ1ರ ವರೆಗೆ ತರಬೇತಿ ಪಡೆದರು. ಮೇ13ಕ್ಕೆ ಬೇಸ್ ಕ್ಯಾಂಪ್‌ನಿಂದ ಪರ್ವತಾರೋಹಣ ಆರಂಭಿಸಿ ಮೇ.19ರಂದು ಬೆಳಿಗ್ಗೆ 6ಕ್ಕೆ ತುದಿ ತಲುಪಿದರು.

'ಬೇಸ್ ಕ್ಯಾಂಪ್‌ನಿಂದ ತುದಿ ತಲುಪಲು 56 ಗಂಟೆ ಬೇಕಾಯಿತು. ಕಠ್ಮಂಡು ತಲುಪಿದಾಗ ಬಲಗಣ್ಣು ಮಸುಕಾಗಿತ್ತು. ಬೆರಳುಗಳು ಸಂವೇದನೆ ಕಳೆದುಕೊಂಡಿದ್ದವು. ಅಪಾಯಕಾರಿ ಪಯಣವನ್ನು ಸುಗಮವಾಗಿ ಮುಗಿಸಿದ ಬಗ್ಗೆ ಹೆಮ್ಮೆಯಿದೆ' ಎಂದು ಅವರು 'ಪ್ರಜಾವಾಣಿ'ಯೊಂದಿಗೆ ಖುಷಿ ಹಂಚಿಕೊಂಡರು.

'ನ್ಯಾಯಮೂರ್ತಿಗಳು ದೇವರಲ್ಲ; ಜನಸೇವಕರು'

ಕೋಲ್ಕತ್ತ (ಪಿಟಿಐ): ಭಾರತೀಯ ನ್ಯಾಯವ್ಯವಸ್ಥೆಯಲ್ಲಿ 'ಸಾಂವಿಧಾನಿಕ ನೈತಿಕತೆ'ಯ ಅನುಷ್ಠಾನದ ಅಗತ್ಯವನ್ನು ಪ್ರತಿಪಾದಿಸಿರುವ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು,'ನ್ಯಾಯಾಲಯಗಳು ವೈವಿಧ್ಯ, ಒಳಗೊಳ್ಳುವಿಕೆ ಮತ್ತು ಸಹಿಷ್ಣುತೆಗೆ ಬದ್ಧರಾಗಿರಬೇಕು' ಎಂದು ಹೇಳಿದ್ದಾರೆ.

ರಾಷ್ಟ್ರೀಯ ನ್ಯಾಯಾಂಗ ಅಕಾಡೆಮಿಯ ಪಶ್ಚಿಮ ವಲಯದ 2ನೇ ಪ್ರಾದೇಶಿಕ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

'ಜನರು ಕೋರ್ಟ್‌ಗಳನ್ನು ನ್ಯಾಯ ದೇಗುಲ ಎಂದು ಗುರುತಿಸುವಾಗ ನಾನು ಮೌನ ತಳೆಯುತ್ತೇನೆ. ನ್ಯಾಯದೇಗುಲ ಎಂದರೆ ನ್ಯಾಯಮೂರ್ತಿಗಳು ದೇವರಾಗುತ್ತಾರೆ. ಆದರೆ, ವಾಸ್ತವವಾಗಿ ಅವರು ದೇವರಲ್ಲ. ಬದಲಾಗಿ ಜನರ ಸೇವಕರು. ಚಿಂತಿಸಿ ಮತ್ತು ಕಕ್ಕುಲತೆಯಿಂದ ನ್ಯಾಯ ನೀಡುವವರು' ಎಂದು ಸಿಜೆಐ ಅಭಿಪ್ರಾಯಪಟ್ಟರು.

ತಾಂತ್ರಿಕ ದೋಷ: ಬಾಹ್ಯಾಕಾಶ ನಿಲ್ದಾಣದಲ್ಲಿಯೇ ಉಳಿದ ಸುನಿತಾ

ವಾಷಿಂಗ್ಟನ್ (ಎಪಿ): ಗಗನಯಾತ್ರಿ ಸುನಿತಾ ವಿಲಿಯಮ್ಸ್ ಮತ್ತು ಅವರ ಸಹಯಾತ್ರಿ ಬಚ್ ವಿಲ್ಮೋರ್ ಅವರು ಇನ್ನೂ ಕೆಲವು ದಿನ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿಯೇ ಉಳಿದುಕೊಳ್ಳಲಿದ್ದಾರೆ ಎಂದು ನಾಸಾ ಶುಕ್ರವಾರ ತಿಳಿಸಿದೆ.

'ನೌಕೆಯಲ್ಲಿ ತಾಂತ್ರಿಕ ತೊಂದರೆ ಕಾಣಿಸಿಕೊಂಡಿರುವುದರಿಂದ ಅವರು ಮರಳುವುದು ವಿಳಂಬವಾಗಿದೆ. ತಾಂತ್ರಿಕ ದೋಷಕ್ಕೆ ಕಾರಣಗಳೇನು ಎಂಬ ಬಗ್ಗೆ ಪರೀಕ್ಷೆಗಳು ನಡೆಯುತ್ತಿದ್ದು, ಗಗನ ಯಾತ್ರಿಗಳು ಸುರಕ್ಷಿತವಾಗಿದ್ದಾರೆ' ಎಂದು ನಾಸಾ ತಿಳಿಸಿದೆ. ಆದರೆ, ಗಗನಯಾತ್ರಿಗಳು ಭೂಮಿಗೆ ಹಿಂದಿರುಗುವ ದಿನಾಂಕವನ್ನು ಇನ್ನೂ ನಿಗದಿಪಡಿಸಿಲ್ಲ.

ಜೂನ್ 5ರಂದು ಸುನಿತಾ ಮತ್ತು ವಿಲ್ಮೋರ್ ಅವರಿದ್ದ 'ಸ್ಟಾರ್‌ಲೈನರ್' ನೌಕೆಯನ್ನು ಫ್ಲಾರಿಡಾದ 'ಕೇಪ್ ಕ್ಯಾನವೆರಲ್ ಸ್ಪೇಸ್ ಫೋರ್ಸ್' ಕೇಂದ್ರದಿಂದ ಉಡಾವಣೆ ಮಾಡಲಾಗಿತ್ತು. ಜೂನ್ 6ರಂದು ಮಧ್ಯಾಹ್ನ ಗಗನನೌಕೆಯನ್ನು ಬಾಹ್ಯಾಕಾಶ ನಿಲ್ದಾಣಕ್ಕೆ ಡಾಕ್ (ಕೂಡಿಕೊಳ್ಳುವ ಪ್ರಕ್ರಿಯೆ) ಮಾಡಲಾಗಿತ್ತು.



ಸುನಿತಾ ವಿಲಿಯಮ್ಸ್ ಮತ್ತು ಬಚ್ ವಿಲ್ಮೋರ್ ಪಿಟಿಐ ಚಿತ್ರ

'ಡಾಕಿಂಗ್ ವೇಳೆ ಥ್ರಸ್ಟರ್‌ನಲ್ಲಿ (ಪ್ರೊಪಲ್ಷನ್ ಮಾಡ್ಯೂಲ್‌ಗೆ ಅಗತ್ಯ ನೂಕುಬಲ ನೀಡಲು ಅಳವಡಿಸಲಾಗಿರುವ ಯಂತ್ರ) ತೊಂದರೆ ಕಾಣಿಸಿಕೊಂಡಿದೆ. ಅಲ್ಲದೇ ಉಡಾವಣೆ ವೇಳೆ ಹೀಲಿಯಂ ಸೋರಿಕೆಯೂ ಆಗಿದೆ. ಇವೆರಡರ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ. ಬಚ್ ಮತ್ತು ಸುನಿತಾ ಬಾಹ್ಯಾಕಾಶದಲ್ಲಿ ಸಿಲುಕಿಕೊಂಡಿಲ್ಲ. ಸ್ಟಾರ್‌ಲೈನರ್ ನೌಕೆಯನ್ನು 210 ದಿನಗಳವರೆಗೆ ಉಳಿದುಕೊಳ್ಳಲು ಅವಕಾಶವಿರುವಂತೆ ವಿನ್ಯಾಸಗೊಳಿಸಲಾಗಿದೆ. ಬಾಹ್ಯಾಕಾಶ ನಿಲ್ದಾಣದ ತುರ್ತು ಪರಿಸ್ಥಿತಿಯಲ್ಲಿ ಗಗನಯಾತ್ರಿಗಳು ಸ್ಟಾರ್‌ಲೈನರ್‌ನಲ್ಲಿ ಭೂಮಿಗೆ ಮರಳಬಹುದು' ಎಂದುನಾಸಾದ ಅಧಿಕಾರಿ ಸ್ಟೀವ್ ಸ್ಟಿಚ್ ಹೇಳಿದ್ದಾರೆ.

ಹಾರ್ದಿಕ್, ಬೂಮ್ರಾ, ಅರ್ಷದೀಪ್ ಬೌಲಿಂಗ್ ಪ್ರತಾಪ • ದಕ್ಷಿಣ ಆಫ್ರಿಕಾಗೆ ದಕ್ಕದ ಚೊಚ್ಚಲ ಪ್ರಶಸ್ತಿ

ಆನಂದ ಸಾಗರದಲ್ಲಿ ಮಿಂದೆದ್ದ ಭಾರತ

ಟಿ20 ವಿಶ್ವಕಪ್ ಗೆದ್ದ ಭಾರತ ಕ್ರಿಕೆಟ್ ತಂಡಕ್ಕೆ ಅಭಿನಂದನೆಗಳು. ಅದ್ಭುತ ಆಟಕ್ಕೆ 140 ಕೋಟಿ ಜನರು ಹೆಮ್ಮೆಪಡುತ್ತಾರೆ. ದೇಶದ ಪ್ರತಿ ಹಳ್ಳಿಯ ಜನರ ಹೃದಯವನ್ನು ನೀವು ಗೆದ್ದಿದ್ದೀರಿ. ಈ ಪಂದ್ಯವು ಐತಿಹಾಸಿಕವಾಗಿತ್ತು
ನರೇಂದ್ರ ಮೋದಿ, ಪ್ರಧಾನಿ

₹20.36 ಕೋಟಿ ಬಹುಮಾನ

ಪ್ರಶಸ್ತಿ ಗೆದ್ದ ಭಾರತ ತಂಡವು ಆಕರ್ಷಕ ಟ್ರೋಫಿಯೊಂದಿಗೆ ₹20.36 ಕೋಟಿ ಬಹುಮಾನವನ್ನು ತನ್ನದಾಗಿಸಿಕೊಂಡಿತು. ರನ್ನರ್ ಅಪ್ ದಕ್ಷಿಣ ಆಫ್ರಿಕಾ ತಂಡಕ್ಕೆ ₹ 10.63 ಕೋಟಿ ಬಹುಮಾನ ಸಿಕ್ಕರೆ, ಸೆಮಿಫೈನಲ್‌ನಲ್ಲಿ ಸೋತ ಅಫ್ಗಾನಿಸ್ತಾನ ಮತ್ತು ಇಂಗ್ಲೆಂಡ್ ತಂಡಗಳು ತಲಾ ₹6.54 ಕೋಟಿ ಬಹುಮಾನವನ್ನು ಪಡೆದವು.


ವಿಕೆಟ್ ಪಡೆದ ಹಾರ್ದಿಕ್ ಪಾಂಡ್ಯ ಅವರನ್ನು ಅಭಿನಂದಿಸಿದ ಅಕ್ಷರ್ ಪಟೇಲ್ ಮತ್ತು ಅರ್ಷದೀಪ್ ಸಿಂಗ್ –ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಬ್ರಿಜ್‌ಟೌನ್, ಬಾರ್ಬಡೋಸ್: ಭಾರತದ ಕ್ರಿಕೆಟ್ ಅಭಿಮಾನಿಗಳ ಒಂದು ದಶಕದ ಕನಸು ಶನಿವಾರ ಕೈಗೂಡಿತು. ರೋಹಿತ್ ಶರ್ಮಾ ನಾಯಕತ್ವದ ತಂಡವು ಟಿ20 ಕ್ರಿಕೆಟ್ ವಿಶ್ವಕಪ್ ಜಯಿಸುವುದರೊಂದಿಗೆ ಇತಿಹಾಸ ಬರೆಯಿತು.

ಕೆನ್ಸಿಂಗ್ಟನ್ ಓವಲ್ ಕ್ರೀಡಾಂಗಣದಲ್ಲಿ ಭಾವನೆಗಳ ಮಹಾಪೂರ ಹರಿಯಿತು. ಭಾರತ ತಂಡಕ್ಕೆ ಎರಡನೇ ಬಾರಿ ಟಿ20 ವಿಶ್ವಕಪ್ ಜಯಿಸಿದರೆ, ಚೊಚ್ಚಲ ಪ್ರಶಸ್ತಿ ಜಯಿಸುವ ದಕ್ಷಿಣ ಆಫ್ರಿಕಾದ ಕನಸು ಭಗ್ನವಾಯಿತು. ಭಾರತದ ಆಟಗಾರರ ಆನಂದಭಾಷ್ಪ, ಹರಿಣಗಳ ನಾಡಿನ ಆಟಗಾರರ ನಿರಾಶೆಯ ಕಂಬನಿಗಳೂ ಉಕ್ಕಿದವು. ತಮ್ಮ ವೃತ್ತಿಜೀವನದ ಕೊನೆಯ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಿದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ತಬ್ಬಿಕೊಂಡು ಅಭಿನಂದಿಸಿದರು. ಇಬ್ಬರ ಕಣ್ಣಂಚಿನಲ್ಲಿಯೂ ಸಂತಸದ ಹನಿಗಳು ಜಿನುಗಿದ್ದವು. ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರಿಗೂ ಇದು ವಿದಾಯದ ಟೂರ್ನಿ. ಅವರು ಕೂಡ ಭಾವುಕರಾಗಿದ್ದರು.

ಏಳು ತಿಂಗಳುಗಳ ಹಿಂದೆ ಅಹಮದಾಬಾದಿನಲ್ಲಿ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಭಾರತ ತಂಡವು ಅನುಭವಿಸಿದ್ದ ಕರಾಳ ಸೋಲಿನ ನೋವನ್ನು ಈ ಗೆಲುವು ನಿವಾರಿಸಿತು.

2013ರಲ್ಲಿ ಚಾಂಪಿಯನ್ಸ್ ಟ್ರೋಫಿ ಜಯಿಸಿದ ನಂತರ ಭಾರತ ತಂಡವು ಇದುವರೆಗೆ ಐಸಿಸಿ ಪ್ರಶಸ್ತಿ ಜಯಿಸುವ ಅವಕಾಶಗಳನ್ನು ಸೆಮಿಫೈನಲ್ ಮತ್ತು ಫೈನಲ್‌ಗಳಲ್ಲಿ ಕಳೆದುಕೊಂಡಿತ್ತು. ಆದರೆ ಈ ಬಾರಿ ಹಾಗಾಗಲು ರೋಹಿತ್ ಶರ್ಮಾ ಬಳಗ ಬಿಡಲಿಲ್ಲ. ಅಮೆರಿಕ ಮತ್ತು ವೆಸ್ಟ್‌ಇಂಡೀಸ್ ಜಂಟಿ ಆತಿಥ್ಯದಲ್ಲಿ ನಡೆದ ಟೂರ್ನಿಯಲ್ಲಿ ರೋಚಕ ಹೋರಾಟ ಕಂಡ ಫೈನಲ್‌ನಲ್ಲಿ ಭಾರತ ತಂಡವು 7 ರನ್‌ಗಳಿಂದ ಜಯ ಸಾಧಿಸಿತು.

ಇಡೀ ಟೂರ್ನಿಯಲ್ಲಿ ವೈಫಲ್ಯ ಅನುಭವಿಸಿದ್ದ ವಿರಾಟ್ ಕೊಹ್ಲಿ ಅರ್ಧಶತಕ ಹೊಡೆದು ಆಸರೆಯಾದರು. ಐಪಿಎಲ್‌ನಲ್ಲಿ ತೀವ್ರ ಟೀಕೆಗೊಳಗಾಗಿದ್ದ ಹಾರ್ದಿಕ್ ಪಾಂಡ್ಯ ಫೈನಲ್‌ನ ನಿರ್ಣಾಯಕ ಓವರ್‌ನಲ್ಲಿ ಮಿಂಚಿದರು. ಅಲ್ಲದೇ ಮೂರು ವಿಕೆಟ್ ಕೂಡ ಗಳಿಸಿದರು. ಜಸ್‌ಪ್ರೀತ್ ಬೂಮ್ರಾ ಮತ್ತು ಅರ್ಷದೀಪ್ ಸಿಂಗ್ ತಮ್ಮ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದರು.

ಸೂರ್ಯಕುಮಾರ್ ಯಾದವ್ ಬೌಂಡರಿ ಲೈನ್‌ನಲ್ಲಿ ‘ಸರ್ಕಸ್’ ಮಾಡಿ ಪಡೆದ ಕ್ಯಾಚ್‌ಗೆ ಡೇವಿಡ್ ಮಿಲ್ಲರ್ ಔಟಾದರು. ಅದು ಕೂಡ ಕೊನೆಯ ಹಂತದಲ್ಲಿ ಭಾರತಕ್ಕೆ ಜಯ ಒಲಿಯಲು ಕಾರಣವಾಯಿತು. ಬ್ಯಾಟಿಂಗ್, ಬೌಲಿಂಗ್ ಮತ್ತು ಫೀಲ್ಡಿಂಗ್‌ಗಳಲ್ಲಿ ಅಮೋಘ ಸಾಧನೆ ತೋರಿದ ಭಾರತ ತಂಡವು ಕಿರೀಟ ತನ್ನದಾಗಿಸಿಕೊಂಡಿತು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಭಾರತ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 176 ರನ್ ಗಳಿಸಿತು. ವಿರಾಟ್ ಕೊಹ್ಲಿ (76; 59ಎಸೆತ) ಮತ್ತು ಅಕ್ಷರ್ ಪಟೇಲ್ (47; 31ಎಸೆತ) ಅವರಿಬ್ಬರ ಜೊತೆಯಾಟದಿಂದಾಗಿ ಇದು ಸಾಧ್ಯವಾಯಿತು. ಇವರಿಬ್ಬರೂ 4ನೇ ವಿಕೆಟ್ ಜೊತೆಯಾಟದಲ್ಲಿ 72 ರನ್ ಸೇರಿಸಿದರು.

ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವು ಭಾರತದ ಕೈಯಿಂದ ಗೆಲುವನ್ನು ಬಹುತೇಕ ಕಸಿದುಕೊಂಡಿತ್ತು. ಆದರೆ ಕೊನೆಯ ಐದು ಓವರ್‌ಗಳಲ್ಲಿ ಕಂಡುಬಂದ ನಾಟಕೀಯ ತಿರುವುಗಳು ಪಂದ್ಯದ ರೋಚಕತೆ ಹೆಚ್ಚಿಸಿದವು. 15 ಓವರ್‌ಗಳಲ್ಲಿ 147 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತ್ತು. ತಂಡಕ್ಕೆ ಗೆಲುವು ಸಾಧ್ಯವಿತ್ತು.

23 ಎಸೆತಗಳಲ್ಲಿ ಅರ್ಧಶತಕ ಬಾರಿಸಿ ಅಬ್ಬರಿಸುತ್ತಿದ್ದ ಹೆನ್ರಿಚ್ ಕ್ಲಾಸೆನ್ ಕ್ರೀಸ್‌ನಲ್ಲಿದ್ದರು. ಆದರೆ 17ನೇ ಓವರ್‌ನಲ್ಲಿ ಹಾರ್ದಿಕ್ ಬೌಲಿಂಗ್‌ನಲ್ಲಿ ಕ್ಲಾಸೆನ್ ಕ್ಯಾಚ್ ಪಡೆದ ವಿಕೆಟ್‌ಕೀಪರ್ ಪಂತ್ ಸಂಭ್ರಮಿಸಿದರು. ಅಲ್ಲಿಂದ ಭಾರತ ತಂಡ ಗೆಲುವಿನ ಹಾದಿಯತ್ತ ಮರಳಿತು. ಬೂಮ್ರಾ ತಮ್ಮ ಉಳಿದ ಎರಡು ಓವರ್‌ಗಳ ಸ್ಪೆಲ್‌ನಲ್ಲಿ ಬಿಗಿ ದಾಳಿ ನಡೆಸಿದರು. ಅರ್ಷದೀಪ್ ಸಿಂಗ್ ಕೂಡ ಬ್ಯಾಟರ್‌ಗಳನ್ನು ಕಾಡಿದರು. ಕೊನೆಯ ಓವರ್‌ನಲ್ಲಿ ಜಯಕ್ಕಾಗಿ 10 ರನ್‌ಗಳ ಅಗತ್ಯ ದಕ್ಷಿಣ ಆಫ್ರಿಕಾಗೆ ಇತ್ತು. ಆದರೆ ಹಾರ್ದಿಕ್ ಈ ಸವಾಲು ಗೆದ್ದರು. ತಂಡವನ್ನೂ ಗೆಲ್ಲಿಸಿದರು.


ಟ್ರೋಫಿಯೊಂದಿಗೆ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ –ಎಎಫ್‌ಪಿ ಚಿತ್ರ


ಸೋತ ನಿರಾಸೆಯಲ್ಲಿ ದಕ್ಷಿಣ ಆಫ್ರಿಕಾ ತಂಡದ ಆಟಗಾರರು –ಪಿಟಿಐ ಚಿತ್ರ

ಕೊನೆಯ ಟಿ20 ವಿಶ್ವಕಪ್: ಕೊಹ್ಲಿ

‘ಇದು ನನ್ನ ಕೊನೆಯ ಟಿ20 ವಿಶ್ವಕಪ್. ನಾವು ಇದನ್ನು ಸಾಧಿಸಲು ಬಯಸಿದ್ದೆವು. ಇದು ಬಹಿರಂಗ ರಹಸ್ಯವಾಗಿತ್ತು. ನಾವು ಸೋತಿದ್ದರೂ ನಿವೃತ್ತಿ ಘೋಷಿಸುತ್ತಿದ್ದೆ. ದೇವರು ದೊಡ್ಡವನು ಮತ್ತು ತಂಡಕ್ಕಾಗಿ ನನ್ನ ಕೆಲಸವನ್ನು ಮಾಡಿದ್ದೇನೆ. ಮುಂದಿನ ಪೀಳಿಗೆ ತಂಡವನ್ನು ಮುಂದಕ್ಕೆ ಕೊಂಡೊಯ್ಯುವ ಸಮಯ ಬಂದಿದೆ. ಪ್ರತಿಭಾವಂತ ಆಟಗಾರರು ತಂಡವನ್ನು ಮುಂದೆ ತೆಗೆದುಕೊಂಡು ಹೋಗುತ್ತಾರೆ ಮತ್ತು ತ್ರಿವರ್ಣ ಧ್ವಜವನ್ನು ಎತ್ತರಕ್ಕೆ ಹಾರಿಸುತ್ತಾರೆ’ ಎಂದು ಪಂದ್ಯದ ಬಳಿಕ ಭಾರತ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಹೇಳಿದರು.

ಟಿ20 ವಿಶ್ವಕಪ್ ಕ್ರಿಕೆಟ್: ಈವರೆಗೆ ಪ್ರಶಸ್ತಿ ಗೆದ್ದ ತಂಡಗಳು

ವರ್ಷ	ಆತಿಥ್ಯ	ಗೆದ್ದ ತಂಡ	ರನ್ನರ್ಸ್ ಅಪ್	ಒಟ್ಟು ತಂಡಗಳು
2007	ದಕ್ಷಿಣ ಆಫ್ರಿಕಾ	ಭಾರತ	ಪಾಕಿಸ್ತಾನ	12
2009	ಇಂಗ್ಲೆಂಡ್	ಪಾಕಿಸ್ತಾನ	ಶ್ರೀಲಂಕಾ	12
2010	ವೆಸ್ಟ್ ಇಂಡೀಸ್	ಇಂಗ್ಲೆಂಡ್	ಆಸ್ಟ್ರೇಲಿಯಾ	12
2012	ಶ್ರೀಲಂಕಾ	ವೆಸ್ಟ್ ಇಂಡೀಸ್	ಶ್ರೀಲಂಕಾ	12
2014	ಬಾಂಗ್ಲಾದೇಶ	ಶ್ರೀಲಂಕಾ	ಭಾರತ	16
2016	ಭಾರತ	ವೆಸ್ಟ್ ಇಂಡೀಸ್	ಇಂಗ್ಲೆಂಡ್	16
2021	ಯುಎಇ/ಒಮನ್	ಆಸ್ಟ್ರೇಲಿಯಾ	ನ್ಯೂಜಿಲೆಂಡ್	16
2022	ಆಸ್ಟ್ರೇಲಿಯಾ	ಇಂಗ್ಲೆಂಡ್	ಪಾಕಿಸ್ತಾನ	16
2024	ಅಮೆರಿಕ/ವೆಸ್ಟ್ ಇಂಡೀಸ್	ಭಾರತ	ದಕ್ಷಿಣ ಆಫ್ರಿಕಾ	20

ಟಿ20 ವಿಶ್ವಕಪ್ ಫೈನಲ್: ದಾಖಲಾದ ಗರಿಷ್ಠ ಮೊತ್ತ

ಸ್ಕೋರ್	ಪಂದ್ಯ	ಸ್ಥಳ	ವರ್ಷ
7ಕ್ಕೆ176	ಭಾರತ–ದ.ಆಫ್ರಿಕಾ	ಬ್ರಿಜ್‌ಟೌನ್	2024
2ಕ್ಕೆ173	ಆಸ್ಟ್ರೇಲಿಯಾ–ನ್ಯೂಜಿಲೆಂಡ್	ದುಬೈ	2021
4ಕ್ಕೆ172	ನ್ಯೂಜಿಲೆಂಡ್–ಆಸ್ಟ್ರೇಲಿಯಾ	ದುಬೈ	2021
6ಕ್ಕೆ161	ವೆಸ್ಟ್ ಇಂಡೀಸ್–ಇಂಗ್ಲೆಂಡ್	ಕೋಲ್ಕತ್ತ	2016
5ಕ್ಕೆ157	ಭಾರತ–ಪಾಕಿಸ್ತಾನ	ಜೋಹನ್ಸ್‌ಬರ್ಗ್	2007

ಸ್ಕೋರ್ ಕಾರ್ಡ್

ಭಾರತ 7ಕ್ಕೆ176 (20 ಓವರ್‌ಗಳಲ್ಲಿ)
ರೋಹಿತ್ ಸಿ ಕ್ಲಾಸೆನ್ ಬಿ ಕೇಶವ್ 9 (5ಎ, 4X2)
ಕೊಹ್ಲಿ ಸಿ ರಬಾಡ ಬಿ ಯಾನ್ಸೆನ್ 76 (59ಎ, 4X6, 6X2)
ಪಂತ್ ಸಿ ಡಿಕಾಕ್ ಬಿ ಕೇಶವ್ 0 (2ಎ)
ಸೂರ್ಯಕುಮಾರ್ ಸಿ ಕ್ಲಾಸೆನ್ ಬಿ ರಬಾಡ 3 (4ಎ)
ಅಕ್ಷರ್ ರನೌಟ್ (ಡಿ ಕಾಕ್) 47 (31ಎ, 4X1, 6X4)
ಶಿವಂ ಸಿ ಮಿಲ್ಲರ್ ಬಿ ನಾಕಿಯಾ 27 (16ಎ, 4X3, 6X1)
ಪಾಂಡ್ಯ ಔಟಾಗದೇ 5 (2ಎ, 4X1)
ಜಡೇಜ ಸಿ ಕೇಶವ್ ಬಿ ನಾಕಿಯಾ 2 (2ಎ)
ಇತರೆ: 7 (ನೋಬಾಲ್1, ವೈಡ್ 6)
ವಿಕೆಟ್ ಪತನ: 1–23 (ರೋಹಿತ್ ಶರ್ಮಾ 1.4), 2–23(ರಿಷಬ್ ಪಂತ್ 1.6), 3–34(ಸೂರ್ಯಕುಮಾರ್ 4.3), 4–106 (ಅಕ್ಷರ್ ಪಟೇಲ್ 13.3), 5–163 (ವಿರಾಟ್ ಕೊಹ್ಲಿ 18.5), 6–174 (ಶಿವಂ ದುಬೆ 19.4), 7–176 (ರವೀಂದ್ರ ಜಡೇಜ 19.6)
ಬೌಲಿಂಗ್: ಮಾರ್ಕೊ ಯಾನ್ಸೆನ್ 4–0–49–1, ಕೇಶವ್ ಮಹಾರಾಜ್ 3–0–23–2, ಕಗಿಸೊ ರಬಾಡ 4–0–36–1, ಏಡನ್ ಮರ್ಕರಂ 2–0–16–0, ಎನ್ರಿಚ್ ನಾಕಿಯಾ 4–0–26–2, ತಬ್ರೇಜ್ ಶಮ್ಸಿ 3–0–26–0

ದಕ್ಷಿಣ ಆಫ್ರಿಕಾ 8ಕ್ಕೆ 169 (20 ಓವರ್‌ಗಳಲ್ಲಿ)
ಹೆನ್ರಿಕ್ಸ್ ಬಿ ಬೂಮ್ರಾ 4 (5ಎ, 4X1)
ಡಿ ಕಾಕ್ ಸಿ ಕುಲದೀಪ್ ಬಿ ಅರ್ಷದೀಪ್ 39 (31ಎ, 4X4, 6X1)
ಮರ್ಕರಂ ಸಿ ಪಂತ್ ಬಿ ಅರ್ಷದೀಪ್ 4 (5ಎ, 4X1)
ಟ್ರಿಸ್ಟನ್ ಬಿ ಪಟೇಲ್ 31 (21ಎ, 4X3, 6X1)
ಕ್ಲಾಸೆನ್ ಸಿ ಪಂತ್ ಬಿ ಪಾಂಡ್ಯ 52 (27ಎ, 4X2, 6X5)
ಮಿಲ್ಲರ್ ಸಿ ಯಾದವ್ ಬಿ ಪಾಂಡ್ಯ 21 (17ಎ, 4X1, 6X1)
ಯಾನ್ಸೆನ್ ಬಿ ಬೂಮ್ರಾ 2 (4ಎ)
ಕೇಶವ್ ಔಟಾಗದೇ 2 (7ಎ)
ರಬಾಡ ಸಿ ಯಾದವ್ ಬಿ ಪಾಂಡ್ಯ 4 (3ಎ, 4X1)
ಎನ್ರಿಚ್ ಔಟಾಗದೇ 1 (1ಎ)
ಇತರೆ: 9 (ಬೈ 1, ಲೆಗ್‌ಬೈ 4, ನೋಬಾಲ್ 1, ವೈಡ್ 3)
ವಿಕೆಟ್ ಪತನ: 1-7 (ರೀಜಾ ಹೆನ್ರಿಕ್ಸ್, 1.3), 2-12 (ಏಡೆನ್ ಮಾರ್ಕರಂ, 2.3), 3-70 (ಟ್ರಿಸ್ಟನ್ ಸ್ಟಬ್ಸ್, 8.5), 4-106 (ಕ್ವಿಂಟನ್ ಡಿ ಕಾಕ್, 12.3), 5-151 (ಹೆನ್ರಿಚ್ ಕ್ಲಾಸೆನ್, 16.1), 6-156 (ಯಾನ್ಸೆನ್, 17.4), 7-161 (ಡೇವಿಡ್ ಮಿಲ್ಲರ್, 19.1), 8-168 (ರಬಾಡ, 19.5)
ಬೌಲಿಂಗ್: ಅರ್ಷದೀಪ್ ಸಿಂಗ್ 4–0–20–2, ಜಸ್‌ಪ್ರೀತ್ ಬೂಮ್ರಾ 4–0–18–2, ಅಕ್ಷರ್ 4–0–48–1, ಕುಲದೀಪ್ 4–0–45–0, ಹಾರ್ದಿಕ್ ಪಾಂಡ್ಯ 3–0–20–3, ರವೀಂದ್ರ ಜಡೇಜ 1–0–12–0
ಪಂದ್ಯದ ಆಟಗಾರ: ವಿರಾಟ್ ಕೊಹ್ಲಿ
ಸರಣಿಯ ಆಟಗಾರ: ಬೂಮ್ರಾ

ಫಲಿತಾಂಶ: ಭಾರತಕ್ಕೆ 7 ರನ್‌ಗಳ ಜಯ, ಚಾಂಪಿಯನ್ ಕಿರೀಟ

ಅಂದು ಸೋತಿದ್ದ ಕೆರೀಬಿಯನ್ ನೆಲದಲ್ಲಿ ಗೆದ್ದು ತೋರಿಸಿದ ‘ಛಲದಂಕಮಲ್ಲ’

ದ್ರಾವಿಡ್ ಈಗ ‘ಚಾಂಪಿಯನ್ ಕೋಚ್’

• ಗಿರೀಶ ದೊಡ್ಡಮನಿ

ಬೆಂಗಳೂರು: ಕ್ರಿಕೆಟ್ ಲೋಕದ ‘ಗೋಡೆ’ ರಾಹುಲ್ ದ್ರಾವಿಡ್ ಅವರಿಗೆ ಈ ಟಿ20 ವಿಶ್ವಕಪ್ ವಿಜಯವು ಅತ್ಯಂತ ವಿಶೇಷವಾದದ್ದು.

2007ರಲ್ಲಿ ಇದೇ ಕೆರೀಬಿಯನ್ ನಾಡಿನಲ್ಲಿ ನಡೆದಿದ್ದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು ಹೀನಾಯ ಸೋಲು ಅನುಭವಿಸಿತ್ತು. ಆಗ ತಂಡಕ್ಕೆ ರಾಹುಲ್ ದ್ರಾವಿಡ್ ನಾಯಕರಾಗಿದ್ದರು. ಆ ಸೋಲಿಗಾಗಿ ದೇಶದ ಜನತೆಯ ಆಕ್ರೋಶವನ್ನು ಆಟಗಾರರು ಎದುರಿಸಿದ್ದರು. ಮಹೇಂದ್ರಸಿಂಗ್ ಧೋನಿ ಸೇರಿದಂತೆ ಕೆಲವು ಆಟಗಾರರ ಮನೆಗಳ ಮೇಲೆ ಕಿಡಿಗೇಡಿಗಳು ಕಲ್ಲು ತೂರಿದ್ದರು.

ಇದೀಗ ಅದೇ ರಾಹುಲ್ ದ್ರಾವಿಡ್ ಅವರ ಮಾರ್ಗದರ್ಶನದಲ್ಲಿ ಭಾರತ ತಂಡವು ಕೆರೀಬಿಯನ್ ನೆಲದಲ್ಲಿ ಟಿ20 ಪ್ರಶಸ್ತಿ ಜಯಿಸಿದೆ. ಇದರೊಂದಿಗೆ ರಾಹುಲ್ ತಮ್ಮ ಸ್ಥಾನದಿಂದ ನಿರ್ಗಮಿಸುತ್ತಿದ್ದಾರೆ. ಎರಡೂವರೆ ವರ್ಷಗಳ ಹಿಂದೆ ಕರ್ನಾಟಕದ ದ್ರಾವಿಡ್ ಅವರಿಗೆ ಈ ಸ್ಥಾನವನ್ನು ಬಿಸಿಸಿಐ ನೀಡಿದಾಗ ಹಲವರು ಹುಬ್ಬೇರಿಸಿದ್ದರು.

ಏಕೆಂದರೆ; ಶಿಸ್ತಿನ ಕೋಚ್ ಎಂದೇ ಹೆಸರಾಗಿದ್ದ ಕನ್ನಡಿಗ ಅನಿಲ್ ಕುಂಬ್ಳೆ ಅವರು ರಾಜೀನಾಮೆ ನೀಡಿದ್ದ ಘಟನೆಯನ್ನು ಕ್ರಿಕೆಟ್‌ಪ್ರೇಮಿಗಳು ಮರೆತಿರಲಿಲ್ಲ. ದ್ರಾವಿಡ್ ಕೂಡ ಕುಂಬ್ಳೆ ಸಮಕಾಲೀನರು ಮತ್ತು ಅಷ್ಟೇ ಶಿಸ್ತಿನ ವ್ಯಕ್ತಿಯಾಗಿದ್ದರು. ಭಾರತ ತಂಡದಲ್ಲಿ ಮುಖ್ಯ ಕೋಚ್ ಆದವರಿಗೆ ಎದುರಾಗುವ ಸವಾಲುಗಳು ವಿಭಿನ್ನ. ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಕೋಟಿ ಕೋಟಿ ಮೌಲ್ಯ ಪಡೆದ ಹಾಗೂ ತಾರಾವರ್ಚಸ್ಸು ಗಳಿಸಿ ರಾಷ್ಟ್ರೀಯ ಬಳಗಕ್ಕೆ ಬರುವ ಆಟಗಾರರಿಗೆ ‘ತರಬೇತಿ’ ನೀಡುವುದು ಸುಲಭವಲ್ಲ. ಆದರೆ ವಿಶ್ವ ಕ್ರಿಕೆಟ್ ದಿಗ್ಗಜರಲ್ಲಿ ಒಬ್ಬರಾಗಿರುವ ದ್ರಾವಿಡ್ ಈ ಸವಾಲು ಜಯಿಸಿದರು.



ದ್ರಾವಿಡ್ ಮುಖ್ಯ ಕೋಚ್ ಆದ ಸಂದರ್ಭದಲ್ಲಿ ಭಾರತದ ಕ್ರಿಕೆಟ್‌ನಲ್ಲಿ ಎಲ್ಲವೂ ಸರಿಯಿರಲಿಲ್ಲ. ಆಗಷ್ಟೇ ಕೋವಿಡ್ ಹೊಡೆತದಿಂದ ಜಗತ್ತು ಚೇತರಿಸಿಕೊಳ್ಳಲು ಪ್ರಯತ್ನಿಸುತ್ತಿತ್ತು. ಕ್ರಿಕೆಟ್‌ನಲ್ಲಿಯೂ ಹಲವು ಹೊಸ ನಿಯಮಗಳು ಬಂದಿದ್ದವು. ಟಿ20 ನಾಯಕತ್ವಕ್ಕೆ ವಿದಾಯ ಘೋಷಿಸಿದ್ದ ವಿರಾಟ್ ಅವರನ್ನು ಏಕದಿನ ಕ್ರಿಕೆಟ್ ತಂಡದ ನಾಯಕತ್ವದಿಂದ ಬಿಸಿಸಿಐ ಕೆಳಗಿಳಿಸಿತ್ತು. ಇದು ವಿರಾಟ್ ಮತ್ತು ಬಿಸಿಸಿಐ ನಡುವಣ ಮುಸುಕಿನ ಗುದ್ದಾಟಕ್ಕೂ ಕಾರಣವಾಗಿತ್ತು. 2022ರ ಜನವರಿಯಲ್ಲಿ ಅವರು ಟೆಸ್ಟ್ ಕ್ರಿಕೆಟ್ ನಾಯಕತ್ವಕ್ಕೆ ವಿದಾಯ ಹೇಳಿದ್ದರು. ಈ ಬೆಳವಣಿಗೆಯ ನಡುವೆ ನಾಯಕತ್ವ ವಹಿಸಿಕೊಂಡಿದ್ದ ರೋಹಿತ್ ಫಿಟ್‌ನೆಸ್ ಸಮಸ್ಯೆಯಿಂದ ಹೊರಬರುವ ಪ್ರಯತ್ನದಲ್ಲಿದ್ದರು.

ಯುವಪ್ರತಿಭೆಗಳ ದೊಡ್ಡ ದಂಡಿನಲ್ಲಿ ಅರ್ಹರಿಗೆ ಭಾರತ ತಂಡದಲ್ಲಿ ಅವಕಾಶ ಕೊಡುವ ಕಠಿಣ ಸವಾಲು ಕೂಡ ಅವರ ಮುಂದಿತ್ತು. ಆದರೆ ಈ ಸವಾಲುಗಳನ್ನು ದ್ರಾವಿಡ್ ತಮ್ಮ ಶಾಂತಚಿತ್ತದಿಂದಲೇ ಸಾಧಿಸಿದರು. ನಿಗಿನಿಗಿ ಕೆಂಡದಂತೆ ಪುಟಿಯುವ ವಿರಾಟ್ ಮತ್ತು ನಿರುಮ್ಮಳ ವ್ಯಕ್ತಿತ್ವದ ರೋಹಿತ್ ನಡುವೆ ಸಮನ್ವಯ ಏರ್ಪಡುವಂತೆ ಮಾಡುವಲ್ಲಿ ದ್ರಾವಿಡ್ ಪ್ರಯತ್ನವೇ ಪ್ರಮುಖವಾದದ್ದು. ಗಾಯದಿಂದ ದೀರ್ಘ ಬಿಡುವು ಪಡೆದು ಮರಳಿದ ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್, ರಿಷಭ್ ಪಂತ್, ರವೀಂದ್ರ ಜಡೇಜ ಮತ್ತು ಸೂರ್ಯಕುಮಾರ್ ಯಾದವ್ ಅವರೆಲ್ಲರ ಏಳು,ಬೀಳುಗಳಲ್ಲಿ ಬೆನ್ನುತಟ್ಟಿ ಮುನ್ನಡೆಸಿದರು. ಅದರ ಫಲ ಈಗ ದೊರೆತಿದೆ.

ಹೋದ ವರ್ಷ ಅಹಮದಾಬಾದಿನಲ್ಲಿಯೇ ಅವರಿಗೆ ಏಕದಿನ ವಿಶ್ವಕಪ್ ಗೌರವ ದೊರೆಯಬೇಕಿತ್ತು. ಆದರೆ ಆ ಟೂರ್ನಿಯುದ್ದಕ್ಕೂ ಅಜೇಯವಾಗಿದ್ದ ತಂಡವು ಫೈನಲ್‌ನಲ್ಲಿ ಮುಗ್ಗರಿಸಿತ್ತು. ಆದರೆ ಈಗ ಟಿ20 ವಿಶ್ವಕಪ್ ಕಿರೀಟ ಮುಡಿಗೇರಿದೆ. ಟೆಸ್ಟ್ ಕ್ರಿಕೆಟ್ ಮಾದರಿಯಲ್ಲಿ ಅಪ್ರತಿಮ ಬ್ಯಾಟರ್ ಆಗಿದ್ದ ದ್ರಾವಿಡ್, ವೇಗವೇ ಸರ್ವಸ್ವವಾಗಿರುವ ಟಿ20 ಕ್ರಿಕೆಟ್‌ನಲ್ಲಿ ‘ಚಾಂಪಿಯನ್ ಕೋಚ್’ ಆಗಿ ಹೊರಹೊಮ್ಮಿದ್ದಾರೆ. ಅಲ್ಲದೇ ಭಾರತ ತಂಡವನ್ನು ದೇಶಿ ಕೋಚ್ ಕೂಡ ಗೆಲ್ಲಿಸಬಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಮಹಿಳೆಯರ 4X100 ಮೀ. ರಿಲೆ: ಕರ್ನಾಟಕ ಕೂಟ ದಾಖಲೆ

ಪಂಚಕುಲಾ (ಪಿಟಿಐ): ಎಸ್. ಎಸ್. ಸ್ನೇಹಾ, ಕಾವೇರಿ ಪಾಟೀಲ, ಸಿಮಿ ಎನ್.ಎಸ್. ಮತ್ತು ದಾನೇಶ್ವರಿ ಅವರನ್ನು ಒಳಗೊಂಡ ಕರ್ನಾಟಕದ ಮಹಿಳೆಯರ 4x100 ಮೀಟರ್ ರಿಲೆ ತಂಡವು ಶುಕ್ರವಾರ ನಡೆದ ರಾಷ್ಟ್ರೀಯ ಅಂತರರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಸ್ಪರ್ಧೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಜಯಿಸಿತು.

ಕರ್ನಾಟಕ ತಂಡವು 45.38 ಸೆಕೆಂಡ್‌ನಲ್ಲಿ ಗುರಿ ತಲುಪಿತು. ಈ ಮೂಲಕ 2019ರಲ್ಲಿ ತಮಿಳುನಾಡು ತಂಡ ನಿರ್ಮಿಸಿದ್ದ ದಾಖಲೆಯನ್ನು (45.69 ಸೆ) ಮುರಿಯಿತು.

ಮಹಿಳೆಯರ ಜಾವೆಲಿನ್ ಸ್ಪರ್ಧೆಯಲ್ಲಿ ಕರ್ನಾಟಕದ ರಮ್ಯಶ್ರೀ ಜೈನ್ (53.14 ಮೀಟರ್) ಅವರು ಬೆಳ್ಳಿ ಪದಕ ಗೆದ್ದರು. ಮಹಿಳೆಯರ ಟ್ರಿಪಲ್ ಜಂಪ್ ಸ್ಪರ್ಧೆಯಲ್ಲಿ ಕರ್ನಾಟಕದ ಪವಿತ್ರಾ ಜಿ. (13.20 ಮೀ) ಬೆಳ್ಳಿ ಪದಕ ಗೆದ್ದರು. ಪುರುಷರ ಲಾಂಗ್‌ಜಂಪ್‌ನಲ್ಲಿ ಕರ್ನಾಟಕದ ಆರ್ಯ ಎಸ್. (7.78 ಮೀಟರ್) ಚಿನ್ನ ಗೆದ್ದರು. ತಮಿಳುನಾಡಿನ ಜೆಸ್ವಿನ್ ಆಲ್ಡ್ರಿನ್ (7.75 ಮೀ.) ಮತ್ತು ಅರವಿಂತ್ ಇ. (7.73 ಮೀ.) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.


ಬೆಂಗಳೂರಿನಲ್ಲಿ ಶನಿವಾರ ರಾತ್ರಿ ಭಾರತ ಕ್ರಿಕೆಟ್ ತಂಡದ ಅಭಿಮಾನಿಗಳ ಸಂಭ್ರಮಾಚರಣೆ –ಎಎಫ್‌ಪಿ ಚಿತ್ರ

ಒಲಿಂಪಿಕ್ಸ್: ಪ್ಯಾರಿಸ್‌ನಲ್ಲಿ ‘ಇಂಡಿಯಾ ಹೌಸ್’

ಮುಂಬೈ (ಪಿಟಿಐ): ಇದೇ ಮೊದಲ ಬಾರಿಗೆ ಪ್ಯಾರಿಸ್ ಒಲಿಂಪಿಕ್ಸ್ ಕೂಟದಲ್ಲಿ ‘ಇಂಡಿಯಾ ಹೌಸ್’ ಸ್ಥಾಪಿಸಲಾಗಿದೆ. ಇಲ್ಲಿ ಭಾರತದ ಸಮೃದ್ಧ ಕ್ರೀಡಾ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಪ್ರದರ್ಶಿಸಲಾಗುತ್ತದೆ. ‘ದೇಶದಿಂದ ಹೊರಗಿರುವ ಭಾರತದ ಅಥ್ಲೀಟುಗಳಿಗೆ’ ಇದು ‘ಹೊರದೇಶದ ವಾಸ್ತವ್ಯದ ತಾಣವಾಗಲಿದೆ’.

ಭಾರತ ಒಲಿಂಪಿಕ್ ಸಂಸ್ಥೆಯ ಸಹಭಾಗಿತ್ವದಲ್ಲಿ ರಿಲಯನ್ಸ್ ಫೌಂಡೇಷನ್ ಪರಿಕಲ್ಪನೆಯಡಿ ಇಂಡಿಯಾ ಹೌಸ್ ಮೂಡಿಬಂದಿದೆ ಎಂದು ಐಒಎ ಅಧ್ಯಕ್ಷೆ ಪಿ.ಟಿ.ಉಷಾ ಮತ್ತು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಸದಸ್ಯೆ ನೀತಾ ಅಂಬಾನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾರತ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿ ನೂರು ವರ್ಷಗಳಾದ ಸಂದರ್ಭದಲ್ಲಿ ಇಂಡಿಯಾ ಹೌಸ್ ತಲೆಯೆತ್ತಿದೆ. ‘ಪಾರ್ಕ್ ಆಫ್ ನೇಷನ್ಸ್’ (ಪಾರ್ಕ್ ಡಿ ಲಾ ವಿಲ್ಲೆ) ಪ್ರದೇಶದಲ್ಲಿ ನಿರ್ಮಾಣವಾಗಿದೆ. ಇದರ ಸುತ್ತ ಇತರ 14 ದೇಶಗಳ ಆತಿಥ್ಯಗೃಹಗಳು ತಲೆಯೆತ್ತಲಿವೆ. ನೆದರ್ಲೆಂಡ್ಸ್, ಕೆನಡಾ, ಬ್ರೆಜಿಲ್ ಮತ್ತು ಫ್ರಾನ್ಸ್ ಇವುಗಳಲ್ಲಿ ಒಳಗೊಂಡಿವೆ.ಭಾ ರತ ಒಲಿಂಪಿಕ್ಸ್‌ನಲ್ಲಿ ಮಾಡಿರುವ ಸಾಧನೆಗಳನ್ನು ಇದು ಪ್ರತಿಬಿಂಬಿಸಲಿದೆ ಎಂದು ಪಿ.ಟಿ.ಉಷಾ ತಿಳಿಸಿದ್ದಾರೆ.



ರಂಗದ ಮೇಲೆ ವಿಜ್ಞಾನ ಅನಾವರಣ 11



ಬಿಳಿಗಿರಿಯ ಸಸ್ಯರಾಮ 12



ಮಾಯಾನಗರಿ ಸಿಂಗಪುರದ ಹಸಿರು ಕಾಳಜಿ 13

ಅವರ ಫ್ಯಾಷನ್ ಶೋ ದುನಿಯಾ...!

ರಾಜ್ಯದಲ್ಲಿ ಮೊದಲ ಬಾರಿಗೆ ಲಿಂಗತ್ವ ಅಲ್ಪಸಂಖ್ಯಾತರ ಫ್ಯಾಷನ್ ಶೋ ನಡೆದಿದೆ. ಇದರಲ್ಲಿ ಪಾಲ್ಗೊಂಡು ರ್‍ಯಾಂಪ್ ಮೇಲೆ ಮಾರ್ಜಾಲ ಹೆಜ್ಜೆ ಹಾಕಿದ ಲಿಂಗತ್ವ ಅಲ್ಪಸಂಖ್ಯಾತರ ಬದುಕಿನಲ್ಲಿ ಆದ ಬದಲಾವಣೆಯ ಕಥನ ಇದು.



‘ಮಾಡೆಲಿಂಗ್ ಶಾಲೆ ಸೇರಿದ್ದೇನೆ’

ನನ್ನ ಹುಟ್ಟಿಗೆ ಅರ್ಥವೇ ಇಲ್ಲ ಅಂದುಕೊಂಡಿದ್ದೆ. ಒಂದೇ ಒಂದು ಫ್ಯಾಷನ್ ಶೋ ಅರ್ಥ ಕೊಟ್ಟಿತು. ಚಪ್ಪಾಳೆ ತಟ್ಟಿದಾಗ ಭಿಕ್ಷೆ ಹಾಕಿದ ಕೈಗಳೇ ಚಪ್ಪಾಳೆ ತಟ್ಟಿದ್ದು ಕಂಡು ದುಃಖ ಉಮ್ಮಳಿಸಿಬಂತು. ನನ್ನ ಬಗ್ಗೆ ನನಗೇ ಗೌರವ ಭಾವನೆ ಮೂಡುತ್ತಿದೆ. ನಮ್ಮ ಸಮುದಾಯ ಮಾತ್ರವಲ್ಲ; ಸಮಾಜದಲ್ಲೂ ಗೌರವ ಸಿಗುತ್ತಿದೆ. ನಾನೀಗ ಮಾಡೆಲಿಂಗ್ ತರಬೇತಿ ಶಾಲೆ ಸೇರಿಕೊಂಡಿದ್ದೇನೆ. ನಿಯಮಿತವಾಗಿ ಡಯೆಟ್ ಮಾಡುತ್ತಿದ್ದೇನೆ. ದೇಹ ಹುರಿಗೊಳಿಸುತ್ತಿದ್ದೇನೆ. ನಾನು ಶ್ರಮ ಹಾಕಬಲ್ಲೆ. ಮುಂದೆ ನನ್ನದೇ ಮಾಡೆಲಿಂಗ್ ಶಾಲೆ ತೆರೆಯಬೇಕು ಎಂಬ ಕನಸಿದೆ.

ಆಲಿಯಾ, ಮೊದಲ ಪ್ರಶಸ್ತಿ ಪಡೆದ ರೂಪದರ್ಶಿ



ಸಂತೋಷ ಈ. ಚಿನಗುಡಿ

ಚಪ್ಪಾಳೆ ತಟ್ಟಿ ಭಿಕ್ಷೆ ಬೇಡುತ್ತಿದ್ದ ಕೈಗಳು ಚಪ್ಪಾಳೆ ಗಿಟ್ಟಿಸಿಕೊಳ್ಳುತ್ತಿವೆ. ಕೀಳಾಗಿ ಕಾಣಲಾಗುತ್ತಿದ್ದ ದೇಹಗಳಿಗೆ ಹೊಸ ಮೈಮಾಟ ಬಂದಿದೆ. ಗೇಲಿಗೆ ಗುರಿಯಾಗಿದ್ದ ನಡಿಗೆ ‘ಕ್ಯಾಟ್‌ವಾಕ್’ ಆಗಿದೆ. ಮೂದಲಿಕೆಗೆ ಕಾರಣವಾಗಿದ್ದ ಮುಖದ ಮೇಲೆ ಮಾದಕ ಕಳೆ ಬಂದಿದೆ. ವಿರೂಪಿ ಎಂದು ಕರೆಸಿಕೊಳ್ಳುತ್ತಿದ್ದವರು ಈಗ ರೂಪದರ್ಶಿಗಳು...

ಹೌದು. ಲಿಂಗತ್ವ ಅಲ್ಪಸಂಖ್ಯಾತರ ಬಾಳಲ್ಲಿ ಪರಿವರ್ತನೆಯ ಸಮಯ ಬಂದಿದೆ. ಅವಮಾನಕ್ಕೆ ಒಳಗಾದವರು ಮುಖ್ಯವಾಹಿನಿಯಲ್ಲಿ ಸಾಗುವ ಯತ್ನ ನಡೆಸಿದ್ದಾರೆ. ಕೀಳಾಗಿ ಕಾಣುತ್ತಿದ್ದ ಕಣ್ಣುಗಳು ಹುಬ್ಬೇರಿಸಿ ದಿಟ್ಟಿಸುವಂತೆ ಅವರು ಬದಲಾಗುತ್ತಿದ್ದಾರೆ.

ಲಿಂಗತ್ವ ಅಲ್ಪಸಂಖ್ಯಾತರಲ್ಲಿ ಇಂಥ ಭರವಸೆ ಮೂಡಿಸಿದ್ದು ಬೆಳಗಾವಿಯಲ್ಲಿ ನಡೆದ ‘ಫ್ಯಾಷನ್ ಶೋ’! ಹದಿನೈದು ಮಂದಿ ಲಿಂಗತ್ವ ಅಲ್ಪಸಂಖ್ಯಾತರು ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿದರು.

ಇಂಥ ಹೊಸ ಸಾಧ್ಯತೆಯನ್ನು ತೋರಿಸಿಕೊಟ್ಟಿದ್ದು ಬೆಳಗಾವಿಯ ಕರ್ಮಭೂಮಿ ಫೌಂಡೇಷನ್. ರಾಜ್ಯದಲ್ಲಿ ಮೊದಲ ಬಾರಿಗೆ ಲಿಂಗತ್ವ ಅಲ್ಪಸಂಖ್ಯಾತರ ಫ್ಯಾಷನ್ ಶೋ ಏರ್ಪಡಿಸುವ ಆಲೋಚನೆ ಫೌಂಡೇಷನ್‌ನ ನಿರ್ಮಾತೃ ಶ್ವೇತಾ ಪಾಟೀಲ ಅವರಿಗೆ ಬಂದಿತು.

ಶ್ವೇತಾ ಅವರ ಮನಸ್ಸಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ಬದುಕಿಗೆ ಹೊಸ ಅರ್ಥ ಕೊಡಬೇಕು ಎಂಬ ತುಡಿತ ಇತ್ತು. ತಮ್ಮ ದೇಹದ ಬಗ್ಗೆ ಅವರಲ್ಲೇ ಕೀಳರಿಮೆ ಬೆಳೆದಿರುತ್ತದೆ. ಕೀಳರಿಮೆ ಇರುವಲ್ಲೇ ಯಶಸ್ಸಿನ ಗುಟ್ಟು ಇರುತ್ತದೆ ಎಂಬುದು ಶ್ವೇತಾ ಅವರ ನಂಬಿಕೆ. ದೇಹವನ್ನೇ ವಿಷಯವನ್ನಾಗಿಸಿಕೊಂಡು ಏನಾದರೂ ಮಾಡಬೇಕು ಎಂಬ ಆಲೋಚನೆ ಮಾಡಿದಾಗ ಹೊಳೆದಿದ್ದು ಫ್ಯಾಷನ್ ಶೋ.

ದುಡಿಯುತ್ತೇವೆ ಎಂದರೂ ಕೆಲಸ ಕೊಡುವವರಿಲ್ಲ, ನರ್ತಿಸುತ್ತೇವೆಂದರೆ ವೇದಿಕೆಗಳಿಲ್ಲ, ಸೇವೆ ಮಾಡಿ ಬದುಕುತ್ತೇವೆ ಎಂದರೂ ಜತೆ ಸೇರಿಸುವವರಿಲ್ಲ, ಕೊನೆ ಪಕ್ಷ ಮನೆಯ ಮೂಲೆಯಲ್ಲಿ ಬಿದ್ದಿರುತ್ತೇವೆ ಎಂದರೂ ಇಟ್ಟುಕೊಳ್ಳುವವರಿಲ್ಲ. ಹೆತ್ತವರೇ ಮಡಿಲಿನಿಂದ ಹೊರಹಾಕಿದ ಜೀವಗಳು ಅವು. ಸಮಾಜವಂತೂ ತಿರಸ್ಕಾರದ ಮುದ್ರೆ ಒತ್ತಿದೆ. ಅದೇ ಸಮಾಜದ ಮುಂದೆ ಫ್ಯಾಷನ್ ಪ್ರದರ್ಶನ ನೀಡುವ ಸವಾಲು ಸ್ವೀಕರಿಸಬೇಕಾಗಿತ್ತು. ಅವಮಾನಿಸಿದ ದೇಹಕ್ಕೆ ಗೌರವ ತಂದುಕೊಡುವಲ್ಲಿ ಶ್ವೇತಾ ಯಶಸ್ವಿಯೂ ಆದರು.



ಬೆಳಗಾವಿಯಲ್ಲಿ ನಡೆದ ಲಿಂಗತ್ವ ಅಲ್ಪಸಂಖ್ಯಾತರ ಫ್ಯಾಷನ್ ಶೋ ಝಲಕ್

ಪ್ರತಿಕ್ರಿಯೆಗಾಗಿ
bhanuvara@prajavani.co.in

ತಿರಸ್ಕಾರದಿಂದ ಪುರಸ್ಕಾರ

ಶ್ವೇತಾ ಅವರ ಆಲೋಚನೆಗೆ ಜೊತೆಗೂಡಿದವರು ‘ಬಿ ಮಾಡೆಲಿಂಗ್ ಅಕಾಡೆಮಿ’ಯ ನಿಖಿತಾ ತರ್ಲೆ. ಅವರು ಲಿಂಗತ್ವ ಅಲ್ಪಸಂಖ್ಯಾತರಿಗೆ ಫ್ಯಾಷನ್ ಲೋಕವನ್ನು ಪರಿಚಯಿಸಿದರು. ಮೇಕಪ್ ಕಲಾವಿದೆ ಶ್ರೇಯಾ ವದನಗಳಿಗೆ ಗ್ಲಾಮರ್ ತಂದರು. ಚಲನಚಿತ್ರ ನಟರಾದ ವಂಶಿ ರಾವಿಕೃಷ್ಣ, ಆರ್.ಎನ್.ಕುಮಾರ್, ರೂಪದರ್ಶಿ ಸುವಿನಾ ಗೌಡ, ಫ್ಯಾಷನ್ ಡಿಸೈನರ್ ನವನೀತ್ ಪಾಟೀಲ, ಪ್ರೀತಿ ಪಾವಟೆ ಈ ಪ್ರತಿಭೆಗಳನ್ನು ಹೆಕ್ಕಿ ತೆಗೆದರು. ಮೇಕ್ ಮಿ ಸ್ಮೈಲ್ ಫೌಂಡೇಷನ್, ಏವಿಯೇಷನ್ ಏರ್‌ಹೋಸ್ಟಿಸ್‌ಗಳ ತಂಡ, ವಿಷನ್ ಫ್ಲಾಯಿಂಗ್, ಬ್ಲ್ಯಾಕ್‌ಕ್ಯಾಟ್‌ನ ಬೌನ್ಸರ್‌ಗಳು, ಕಾಲೇಜು ವಿದ್ಯಾರ್ಥಿಗಳು ಸ್ವಯಂ ಸೇವಕರಾದರು. ಈ ಎಲ್ಲ ಮನಸ್ಸುಗಳೂ ಉಚಿತವಾಗಿ ಕೆಲಸ ಮಾಡಿದವು.

ಆಡಿಷನ್ ಕರೆದಾಗ ಮೂವತ್ತು ಲಿಂಗತ್ವ ಅಲ್ಪಸಂಖ್ಯಾತರು ಬಂದರು. ಅಳೆದು ತೂಗಿ ಹದಿನೈದು ಜನರನ್ನು ಆಯ್ಕೆ ಮಾಡಲಾಯಿತು. ತರಬೇತಿಯ ಆರಂಭದಲ್ಲೇ ಹತ್ತು ಮಂದಿ ಹಿಂದಡಿ ಇಟ್ಟರು. ತಾವು ಊಹಿಸಲೂ ಆಗದ ಮಾರ್ಗದಲ್ಲಿ ಹೆಜ್ಜೆ ಹಾಕುವುದು ಅಸಾಧ್ಯ ಎಂದುಕೊಂಡರು. ಮತ್ತೆ ಕೌನ್ಸೆಲಿಂಗ್ ಮಾಡಿ ಅವರನ್ನು ಅಣಿಗೊಳಿಸಲಾಯಿತು.

ಗಡಸು ಮಾತು, ಒರಟು ವರ್ತನೆಗಳಿಂದ ಅವರನ್ನು ಹೊರತರುವುದು ಶ್ವೇತಾ ಅವರ ಮೊದಲ ಸವಾಲಾಗಿತ್ತು. ಅದಕ್ಕೆ ಆಯ್ಕೆ ಮಾಡಿಕೊಂಡಿದ್ದು ಧ್ಯಾನ ಮತ್ತು ಯೋಗ. ಎರಡು ತಿಂಗಳ ತರಬೇತಿ ಬಳಿಕ ತಮಗೇ ಅರಿವಿಲ್ಲದೆ ತಮ್ಮಲ್ಲಿ ಉಂಟಾದ ನಾಜೂಕಿನ ಬಾಳು ಅವರಲ್ಲಿ ಭರವಸೆ ಮೂಡಿಸಿತು. ಮುಂದೆ ಎದುರಾಗಿದ್ದು ಮಿತ ಆಹಾರ (ಡಯೆಟ್)ದ ಸವಾಲು. ಇದನ್ನು ಗೆದ್ದಿದ್ದು ಪವಾಡೇ ಸರಿ.

ಎಲ್ಲ ಅಡೆತಡೆಗಳನ್ನೂ ಮೀರಿ ಪ್ರದರ್ಶನ ನನಸಾಗಿದ್ದು ಬರೋಬ್ಬರಿ ಏಳು ತಿಂಗಳ ಬಳಿಕ.

ಝಗಮಗಿಸುವ ವೇದಿಕೆಯ ರ್‍ಯಾಂಪ್ ಮೇಲೆ ಲಲನಾಮಣಿಯರು ಬಳುಕಿದಾಗ ಪ್ರೇಕ್ಷಕರ ಗ್ಯಾಲರಿಯಿಂದ ಸಿಳ್ಳೆ, ಚಪ್ಪಾಳೆಗಳ ಭೋರ್ಗರೆತ. ಪಾಲಕರಲ್ಲಿ, ಸಮುದಾಯದವರಲ್ಲಿ ಹರ್ಷದ ಹೊನಲು.

ಲಿಂಗತ್ವ ಅಲ್ಪಸಂಖ್ಯಾತರ ಜೊತೆಗೆ ವೃತ್ತಿಪರ ಮಾಡೆಲ್‌ಗಳಾದ ತಲಾ ಹತ್ತು ಯುವಕರು, ಯುವತಿಯರೂ ಹೆಜ್ಜೆ ಹಾಕಿದರು. ಲಿಂಗತ್ವ ಅಲ್ಪಸಂಖ್ಯಾತರನ್ನಷ್ಟೇ ಪ್ರತ್ಯೇಕಿಸಿ ನೋಡಬಾರದು ಎಂಬ ಉದ್ದೇಶವೂ ಇದರ ಹಿಂದಿತ್ತು.

12ನೇ ಪುಟಕ್ಕೆ...

‘ಸಣ್ಣ ಅವಕಾಶ ಕೊಡಿ’

ಪುಣೆಯಲ್ಲಿ ಭಿಕ್ಷೆ ಬೇಡುತ್ತಿದ್ದ ನಾನು ಈಗ ರೂಪದರ್ಶಿ. ಅಪ್ಪ ತೀರಿಕೊಂಡ ಮೇಲೆ ಅಮ್ಮ ಮತ್ತು ನಾನು ಗೋಕಾಕದಲ್ಲಿ ವಾಸವಾಗಿದ್ದೇವೆ. ಎರಡು ಹೊಟ್ಟೆ ತುಂಬಿಸಿಕೊಳ್ಳುವುದಷ್ಟೇ ಗುರಿಯಾಗಿತ್ತು. ಆದರೆ, ಈ ರೂಪದರ್ಶಿ ಭೂಮಿಕೆ ನನ್ನಲ್ಲಿ ಕನಸು ಮೊಳೆಯುವಂತೆ ಮಾಡಿದೆ. ಪಾಶ್ಚಾತ್ಯ ಶೈಲಿಯ ನೃತ್ಯ ಕಲಿತಿದ್ದೇನೆ. ಭಿಕ್ಷೆ ಬೇಡಲು ಇಷ್ಟವಿಲ್ಲ. ಯಾರಾದರೂ ಕೆಲಸ ಕೊಟ್ಟರೆ ಸಾಕು; ವಿನಮ್ರತೆಯಿಂದ ಮಾಡುತ್ತೇನೆ. ಸಮಾಜದಲ್ಲಿ ಈಗ ಜನರೂ ಗೌರವ ಕೊಡುತ್ತಿದ್ದಾರೆ. ನಿಜವಾಗಿ ನನಗೆ ಬೇಕಿರುವುದು ಅವಕಾಶ.

ದಿಲ್ಬರ್, ರನ್ನರ್‌ಅಪ್ ರೂಪದರ್ಶಿ




‘ಐಡೆಂಟಿಟಿಯೇ ಇಲ್ಲದವರು’

ಯಾವುದೇ ಅಂಗವೈಕಲ್ಯ ಇದ್ದರೂ ಸರ್ಕಾರ ಗುರುತಿನಚೀಟಿ ನೀಡುತ್ತದೆ. ಆದರೆ, ನಮಗೆ ‘ಐಡೆಂಟಿಟಿ’ ಎಂಬುದೇ ಇಲ್ಲ. ಸಮಾಜ ಮಾತ್ರವಲ್ಲ; ಸರ್ಕಾರವೂ ತಿರಸ್ಕಾರ ಭಾವನೆ ಹೊಂದಿದೆ. ಮಹಿಳೆಯರಿಗೆ ಇರುವಂಥ ಮೀಸಲಾತಿ ನಮಗೆ ನೀಡಿಲ್ಲ. ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದರೆ ಸರ್ಕಾರ, ಸಮಾಜ ಧಿಕ್ಕರಿಸಿ ನಿಲ್ಲುತ್ತವೆ. ನಮ್ಮಂಥವರಿಗೆ ನಿತ್ಯವೂ ಹಾದಿಬೀದಿಯಲ್ಲಿ ಲೈಂಗಿಕ ದೌರ್ಜನ್ಯ ನಡೆಯುತ್ತದೆ.

ಶಾಲೆ–ಕಾಲೇಜುಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ಬಗ್ಗೆ ಮನವರಿಕೆ ಮಾಡುವ ಪಾಠಗಳು ಬೇಕು. ಆಗ ಸಮಾಜದ ದೃಷ್ಟಿಕೋನ ಬದಲಾಗಲು ಸಾಧ್ಯ. ‘ಹಸಿವಿನಿಂದ ಬಳಲುವ ಪ್ರಜೆ ದೇಶದ ದೊಡ್ಡ ಶತ್ರು’ ಎಂಬ ಮಾತಿದೆ. ಈ ದೇಶದ ಲಿಂಗತ್ವ ಅಲ್ಪಸಂಖ್ಯಾತರು ಹಸಿವಿನಿಂದ ಬಳಲುತ್ತಿದ್ದಾರೆ ಎಂಬುದನ್ನು ಸರ್ಕಾರಗಳು ಪರಿಗಣಿಸುತ್ತಲೇ ಇಲ್ಲ.

ಚಿನ್ನು, ತೃತೀಯ ಬಹುಮಾನ ಪಡೆದ ರೂಪದರ್ಶಿ





ಹತ್ತರ ವಯಸ್ಸಿನಲ್ಲೇ ಪೆನ್ನು, ಪೆನ್ಸಿಲ್ ಮೇಲೆ ಕಡುಮೋಹ ಹೊಂದಿದ್ದ ಸಮೀರ್ ದತ್ತಾ, ಬೀದಿ, ಮನೆ, ಗಿಡ–ಮರಗಳನ್ನು ಗೀಚುತ್ತಲೇ ಜಗತ್ತಿನ ಖ್ಯಾತ ಕಾರುಗಳಲ್ಲಿ ಒಂದಾದ ಹಮ್ಮರ್ ವಿನ್ಯಾಸ ಮಾಡಿದವರು. ಈ ಹಳ್ಳಿ ಹಮ್ಮೀರನ ಕನಸಿನ ಪಯಣ ಇಲ್ಲಿದೆ.

ಹಳ್ಳಿ ಹಮ್ಮೀರನ ಹಮ್ಮರ್ ವಿನ್ಯಾಸ ಯಾನ



ಕೆ.ಎಚ್. ಓಬಳೇಶ್

ಕೃಷಿಯನ್ನೇ ನಂಬಿದ ಕುಟುಂಬ ಅದು. ಈಗಲೂ ಆ ಕುಟುಂಬದವರಿಗೆ ಕೃಷಿಯೇ ಖುಷಿ. ಅವರ ನಡುವೆಯೇ ಬೆಳೆದ ಸಮೀರ್ ದತ್ತಾ ಅವರ ಮನಸ್ಸಿನಲ್ಲಿ ಅಚ್ಚೊತ್ತಿದ್ದು ಬೇರೆಯೇ ಕನಸು. ಆಗ ಕನಸಿನಲ್ಲಿ ಕಾಸಿಗೆ ಅಷ್ಟೊಂದು ಬೆಲೆ ಇರಲಿಲ್ಲ. ಬದಲಿಗೆ ಆಟೊಮೋಟಿವ್ ವಿನ್ಯಾಸ ಕ್ಷೇತ್ರದಲ್ಲಿ ಸಾಧನೆ ಮಾಡುವುದಷ್ಟೇ ಅವರ ಸುಂದರ ಸ್ವಪ್ನವಾಗಿತ್ತು. ಅದರ ಬೆನ್ನೇರಿ ಪಶ್ಚಿಮ ಬಂಗಾಳದ ಮಿಡ್ನಾಪುರ ಎಂಬ ಹಳ್ಳಿಯಿಂದ ಬೆಂಗಳೂರಿಗೆ ಬಂದರು. ಕನಸು, ಪ್ರತಿಭೆ, ಬದ್ಧತೆ ಮತ್ತು ಪರಿಶ್ರಮದಿಂದಾಗಿ ಆಟೊಮೋಟಿವ್ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದರು.

ವಾಹನ ವಲಯದಲ್ಲಿ ಅಮೆರಿಕದ ಸುಪ್ರಸಿದ್ಧ ಜನರಲ್ ಮೋಟರ್ ಕಂಪನಿಯದ್ದು (ಜಿಎಂಸಿ) ಮುಂಚೂಣಿ ಹೆಸರು. ಆ ಕಂಪನಿ ತಯಾರಿಸುವ ವಾಹನಗಳ ಬೆಲೆಯೂ ಅಷ್ಟೇ ದುಬಾರಿ. ಜಿಎಂಸಿ ತಯಾರಿಸಿರುವ ವಿದ್ಯುತ್‌ಚಾಲಿತ ಹಮ್ಮರ್ ಕಾರು ರಸ್ತೆಯಲ್ಲಿ ಚಲಿಸುವಾಗ ವಾಹನ ಪ್ರಿಯರು ಅದರ ಲೋಹದ ದೇಹ ವಿನ್ಯಾಸವನ್ನು ಬೆರಗಿನಿಂದ ನೋಡುವುದು ಖಚಿತ. ಆ ಕಾರಿನ ವಿನ್ಯಾಸ ರೂಪಿಸಿದ ಹಿರಿಮೆ ಸಮೀರ್ ದತ್ತಾ ಅವರದ್ದು.

ತನ್ನ ಅಪ್ಪ ಉಳುಮೆ ಮಾಡುವುದನ್ನು ನೋಡುತ್ತಲೇ ಅವರು ವಾಹನಗಳ ವಿನ್ಯಾಸದ ಸೆಳೆತಕ್ಕೆ ಸಿಲುಕಿದ್ದು ಸೋಜಿಗ. ಹತ್ತರ ವಯಸ್ಸಿನಲ್ಲಿದ್ದಾಗಲೇ ಅವರಿಗೆ ಪೆನ್ನು, ಪೆನ್ಸಿಲ್ ಮೇಲೆ ಕಡುಮೋಹ. ಅವು ಕೈಗೆ ಸಿಕ್ಕಿದ ತಕ್ಷಣ ನೋಟ್‌ಬುಕ್‌ನಲ್ಲಿ ಗೀಚಲು ತೊಡಗುತ್ತಿದ್ದರು. ಊರಿನ ಬೀದಿ, ಮನೆ, ಗಿಡ, ಮರಗಳು ಅವರ ನೆನಪಿನ ಉಗ್ರಾಣದಲ್ಲಿ ದೃಶ್ಯಭಾಷೆಯಾಗಿ ಸಂಗ್ರಹವಾಗುತ್ತಿದ್ದವು. ಅವುಗಳಿಗೆ ಬಣ್ಣ ತುಂಬುತ್ತಾ ತನ್ನದೆ ಆದ ಮಾಯಾಲೋಕದಲ್ಲಿ ವಿಹರಿಸುವುದು ಅವರ ನಿತ್ಯದ ಕಾಯಕವಾಗಿತ್ತು. ಕೊನೆಗೆ, ಚಿತ್ರಕಲೆ ಎಂಬ ವರ್ಣಕ್ರಿಯೆ ಅವರಿಗೆ ಆಪ್ತವಾಯಿತು.

ಶಾಲಾ ಮಟ್ಟದ ಸ್ಪರ್ಧೆಗಳಲ್ಲಿ ಅವರು ರಚಿಸಿದ ಚಿತ್ರಗಳಿಗೆ ಬಹುಮಾನವೂ ಬಂತು. ತನ್ನನ್ನು ಬಿಟ್ಟು ಮುಂದೆ ಓಡುತ್ತಿರುವಂತೆ ಭಾಸವಾಗುತ್ತಿದ್ದ ಪ್ರಪಂಚವು, ಚಿತ್ರಕಲೆಯ ಅಲೆಯಲ್ಲಿ ಭಿನ್ನವಾಗಿ ಕಂಡಿತು. ಅವರ ಕನಸಿಗೆ ಪೋಷಕರು ರೆಕ್ಕೆ ಕಟ್ಟಿದರು. ಹೀಗೆ ಹಾರುತ್ತಲೇ ಆಟೊಮೋಟಿವ್ ವಿನ್ಯಾಸಕ ಸಮೀರ್ ದತ್ತಾ ಅವರಿಗೆ ಅಂತರರಾಷ್ಟ್ರೀಯ ವೃತ್ತಿಪರತೆ ಕರಗತವಾಯಿತು. ಬಳಿಕ ಅವರು ವಿಶ್ವದ ಅಗ್ರಮಾನ್ಯ ಆಟೊಮೊಬೈಲ್ ಸ್ಟುಡಿಯೊ ‘ಒಇಎಂ ಡಿಸೈನ್ ಸ್ಟುಡಿಯೊ’ದ ಒಳಹೊಕ್ಕರು.

ಭಾರತದ ಕಲೆ ಮತ್ತು ಶ್ರೀಮಂತಿಕೆಯು ಆಳವಾದ ಚರಿತ್ರೆ ಹೊಂದಿದೆ. ಇಲ್ಲಿ ವಿನ್ಯಾಸಗೊಳಿಸುವ ವಸ್ತುಗಳಿಗೆ ಜಾಗತಿಕ ಮಟ್ಟದಲ್ಲಿ ಭಾರಿ ಬೇಡಿಕೆ ಮತ್ತು ಮನ್ನಣೆ ಇದೆ. ಅದರ ಮಹತ್ವ ಅರಿಯಲು ಸಮೀರ್‌ಗೆ ಹೆಚ್ಚು ದಿನಗಳು ಹಿಡಿಯಲಿಲ್ಲ. ದೇಶೀಯಮಟ್ಟದ ಆಟೊಮೋಟಿವ್ ವಿನ್ಯಾಸಕರು ಮತ್ತು ಪರಿಣತ ಎಂಜಿನಿಯರ್‌ಗಳ ಜೊತೆಗೆ ಕೆಲಸ ನಿರ್ವಹಿಸುತ್ತಲೇ ವಾಹನಗಳ ವಿನ್ಯಾಸದ ಕಲೆಯು ಅವರಿಗೆ ಸಿದ್ಧಿಸಿತು.

ಜಾಗತಿಕ ಮಟ್ಟದಲ್ಲಿ ಆಟೊಮೋಟಿವ್ ವಿನ್ಯಾಸದ ವ್ಯಾಪ್ತಿಯು ಬಹುವಿಸ್ತಾರವಾಗಿದೆ.

12ನೇ ಪುಟಕ್ಕೆ...



'ಗೆಲಿಲಿಯೋಸ್ ಡಾಟರ್' ನಾಟಕ
ಚಿತ್ರಗಳು: ಹ.ಪ.ನಾಗರಾಜ್

ರಂಗದ ಮೇಲೆ ವಿಜ್ಞಾನ ಅನಾವರಣ

ಕೆ.ನರಸಿಂಹಮೂರ್ತಿ

'ಯಾರು ಏನೇ ಹೇಳಲಿ, ಭೂಮಿ ಸೂರ್ಯನ ಸುತ್ತ ಸುತ್ತೋದನ್ನು ತಪ್ಪಿಸಲು ಆಗಲ್ಲ....'

–ಚರ್ಚಿನ ಮುಖ್ಯಸ್ಥರ ಮುಂದೆ ಮೊಣಕಾಲೂರಿ ಕುಳಿತು, ತನ್ನ ಸಂಶೋಧನೆಯನ್ನು ತಾನೇ ಅಲ್ಲಗಳೆದ ಬಳಿಕ ಗೆಲಿಲಿಯೋ ಗೆಲಿಲಿ, ತನ್ನಷ್ಟಕ್ಕೆ ತಾನು ಈ ಮಾತನ್ನು ಹೇಳಿ ತುಂಟ ಕಿರುನಗೆ ನಕ್ಕ ಕೂಡಲೇ ಪ್ರೇಕ್ಷಕ ವಲಯದಲ್ಲೊಂದು ಅಚ್ಚರಿ, ಮೆಚ್ಚುಗೆಯ ಭಾವ.

ಇದು, ಸಮಾಜದಲ್ಲಿ ಧರ್ಮ ಮತ್ತು ವಿಜ್ಞಾನ ಒಟ್ಟಿಗೇ ಹೋಗುವ ಸಾಧ್ಯ–ಅಸಾಧ್ಯತೆಯ ಕುರಿತ ಖಚಿತ ನಿಲುವು. ಸೋಲೊಪ್ಪಿದ ಬಳಿಕವೂ ಗೆದ್ದೆನೆನ್ನುವ ಖುಷಿ. ಇದು, ಸೋತು ಗೆಲ್ಲುವ ಪರಿ. ವಿಜ್ಞಾನವು ನಾಟಕದಲ್ಲಿ ಬರುವುದೇ ಹೀಗೆ. ಇದು ಪ್ರೊ.ಎಸ್.ಆರ್.ರಮೇಶ್ ಅವರ ಇಂಗ್ಲಿಷ್ ನಾಟಕ 'ಗೆಲಿಲಿಯೋಸ್ ಡಾಟರ್'ನ ಕೊನೆಗೆ ಬರುವ ಪ್ರಮುಖ ದೃಶ್ಯಗಳಲ್ಲೊಂದು.

ಭಿನ್ನ ಕಾಲಘಟ್ಟಗಳು ಮತ್ತು ವೈಜ್ಞಾನಿಕ ಸಂಶೋಧನೆಗಳ ಕುರಿತ ಕಥನಗಳನ್ನು ನಾಟಕಗಳನ್ನಾಗಿಸಿ ಮಂಡಿಸುವ ಪ್ರಯತ್ನದಲ್ಲಿ ನಿರಂತರತೆಯನ್ನು ಕಾಪಾಡಿಕೊಂಡು ಬಂದಿರುವ ಮೈಸೂರು ವಿಜ್ಞಾನ ನಾಟಕೋತ್ಸವ–2024 ರಲ್ಲಿ ಈ ನಾಟಕ ತನ್ನ ಪರಿಣಾಮದ ದೃಷ್ಟಿಯಿಂದ ಹೆಚ್ಚು ಚರ್ಚೆಗೆ ಒಳಗಾಯಿತು.

ಮೈಸೂರಿನ ರಮಾಬಾಯಿ ಗೋವಿಂದ ರಂಗಮಂದಿರದಲ್ಲಿ ನಡೆದ 7ನೇ ವರ್ಷದ ನಾಟಕೋತ್ಸವದ ನಾಲ್ಕೂ ದಿನ ಅಪರೂಪದ ವಿಜ್ಞಾನಿಗಳು, ಅವರ ಸಂಶೋಧನೆಗಳು ಮತ್ತು ಜೀವನಚರಿತ್ರೆಯ ಹೊಳೆವ ತುಣುಕುಗಳು ಪ್ರೇಕ್ಷಕರ ಎದುರು ಹಾದುಹೋದವು.

'ಭೂಮಿ ಸೂರ್ಯನ ಸುತ್ತ ಸುತ್ತುತ್ತದೆ' ಎಂದು 16ನೇ ಶತಮಾನದಲ್ಲೇ ಪ್ರತಿಪಾದಿಸಿ, ಚರ್ಚ್‌ನ ವಿರೋಧ ಕಟ್ಟಿಕೊಂಡು, ಶಿಕ್ಷೆಗೆ ಗುರಿಯಾಗಿ, ಒತ್ತಡದ ಕಾರಣಕ್ಕೆ ತನ್ನ ಸಂಶೋಧನೆಯನ್ನು ತಾನೇ ಅಲ್ಲಗೆಳೆದ ಆಧುನಿಕ ವಿಜ್ಞಾನದ ಪಿತಾಮಹ ಇಟಲಿಯ ಗೆಲಿಲಿಯೋ ಗೆಲಿಲಿಯ ಸಂಶೋಧನೆ ಮತ್ತು ಕೌಟುಂಬಿಕ ಜೀವನವೆರಡೂ ಅಲ್ಲಿ ಮುಖಾಮುಖಿಯಾಗಿತ್ತು.

ಗೆಲಿಲಿಯೋ ತನ್ನ ಸಂಶೋಧನೆಯ ಕಾರಣಕ್ಕೆ ಜೀವನದುದ್ದಕ್ಕೂ ಎದುರಿಸಿದ ಸಂಘರ್ಷ, ಇಬ್ಬರು ಹೆಣ್ಣು ಮಕ್ಕಳಾದ ವರ್ಜಿನಿಯಾ ಮತ್ತು ಮಾರಿಯಾ ಜೊತೆಗಿನ ಪತ್ರ ವ್ಯವಹಾರಗಳಲ್ಲಿ ವ್ಯಕ್ತಪಡಿಸಿದ ಸಂಕಟ, ವೇದನೆ, ಸಂಭ್ರಮಗಳು ಅತ್ಯಂತ ಅಚ್ಚುಕಟ್ಟಾಗಿ ಮೂಡಿ ಬಂದವು.

ಇತ್ತೀಚೆಗೆ ಅಗಲಿದ ಮೈಸೂರಿನ ರಂಗಕರ್ಮಿ ನ.ರತ್ನ ಅವರಿಗೆ ಈ ನಾಟಕವನ್ನು ಅರ್ಪಿಸಿದ್ದು ವಿಶೇಷ. ಗೆಲಿಲಿಯೋ ಕುರಿತು ಬಂದಿರುವ ಕೃತಿಗಳನ್ನು ಆಧರಿಸಿ ಪ್ರೊ.ಎಸ್.ಆರ್.ರಮೇಶ್ ಅವರು ರಚಿಸಿ, ನಿರ್ದೇಶಿಸಿದ ನಾಟಕ, ಅತಿರೇಕಗಳಿಲ್ಲದೆ ಗೆಲಿಲಿಯೋ ಸಂಶೋಧನೆ–ಕೌಟುಂಬಿಕ ಬದುಕನ್ನು ದಾಟಿಸುವ ಪ್ರಯತ್ನ. ಇಂಗ್ಲಿಷ್ ನಾಟಕಗಳು ಮೈಸೂರಿಗೆ ಅಪರೂಪ. ಹೀಗಾಗಿ ಇದನ್ನು ಉತ್ಸವದ ವಿಶೇಷ ಎನ್ನಲೇಬೇಕು.

ಎಸಿ ಮತ್ತು ಡಿಸಿ ವಿದ್ಯುತ್ ಪ್ರವರ್ತಕ ಉದ್ಯಮಗಳ ನಡುವಿನ ಸ್ಪರ್ಧೆಯ ತೀವ್ರತೆಯು 'DC vs AC: ಹೀಗೊಂದು ಕದನ ಕಥೆ'ಯಲ್ಲೂ ಅನಾವರಣಗೊಂಡಿತು. ವಿದ್ಯುತ್ ದೀಪಗಳ ಬಳಕೆ ಆರಂಭವಾದ ಕಾಲಘಟ್ಟದ ಸಂಶೋಧನೆಯನ್ನೇ ಆಧರಿಸಿ ನಾಟಕ ವಿದ್ಯುತ್ ಶಕ್ತಿಯಂತೆಯೇ, ಪ್ರೇಕಕರಿಗೆ ಸವಾಲೊಡ್ಡುವ ಶಕ್ತಿಯುಳ್ಳ ನಾಟಕ.


ವಿದ್ಯಾರ್ಥಿಗಳಿಗೂ ಅವಕಾಶ

ಈ ಬಾರಿಯ ಉತ್ಸವ ವಿದ್ಯಾರ್ಥಿಗಳಿಗೂ ಅವಕಾಶ ನೀಡಿದ್ದು ವಿಶೇಷ. ಸರಗೂರಿನ ವಿವೇಕ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ಅಭಿನಯಿಸಿದ 'ವಿಜ್ಞಾನ–ವಿಕಾಸವಾದ' ನಾಟಕ ತನ್ನ ಗಾಂಭೀರ್ಯದಿಂದಲೇ ಗಮನ ಸೆಳೆಯಿತು. ವಿಕಾಸವಾದದ ರೂವಾರಿಗಳು ಎದುರಿಸಿದ ಆಂತರಿಕ ಸಂಘರ್ಷ ಮತ್ತು ತಳೆದ ನಿಲುವುಗಳ ಹಿನ್ನೋಟ, ವಿಶ್ಲೇಷಣೆ, ಈ ಕಿರುನಾಟಕದಲ್ಲಿ ಗಮನ ಸೆಳೆದಿತ್ತು. ವಿದ್ಯಾರ್ಥಿಗಳ ನಡುವೆ ವಿಜ್ಞಾನಿಗಳೇ ಬಂದು ತಮ್ಮ ಸಂಶೋಧನೆಗಳ ಹಿನ್ನೋಟ ಮೂಡಿಸುವ ಕಲ್ಪನೆಯು ವಿಷಯ ಮಂಡನೆಯನ್ನು ಸಲೀಸುಗೊಳಿಸಿತ್ತು.

ಧಾರವಾಡದ 'ಅಭಿಯನ ಭಾರತಿ', 'ಪರಿವರ್ತನ ರಂಗಸಮಾಜ ಮೈಸೂರು', 'ಕಲಾಸುರುಚಿ ಮೈಸೂರು', 'ಕುತೂಹಲಿ' ಹಾಗೂ 'ಅರಿವು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್' ಸಹಯೋಗದಲ್ಲಿ ನಡೆದ ನಾಟಕೋತ್ಸವಕ್ಕೆ ಪ್ರೇಕ್ಷಕರ ಕೊರತೆ ಎಳ್ಳಷ್ಟೂ ಇರಲಿಲ್ಲ. ವಿಜ್ಞಾನ ಸಾಹಿತ್ಯದಲ್ಲಿ ಆಸಕ್ತರಾದ ಲೇಖಕರು, ಓದುಗರು, ಪೋಷಕರು, ಶಾಲೆ–ಕಾಲೇಜು ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಜಾಗ ಸಾಕಾಗದೆ ಹಲವರು ನೆಲದ ಮೇಲೆ ಕುಳಿತು ನಾಟಕ ನೋಡಿದರು. ವಿಜ್ಞಾನವನ್ನು ನಾಟಕದಲ್ಲಿ ತರುವ ಪ್ರಯತ್ನಗಳಿಗೆ ಸದಾ ತಮ್ಮ ಬೆಂಬಲವಿದೆ ಎಂಬುದನ್ನೂ ನಿರೂಪಿಸಿದರು.

ಈ ಬೆಂಬಲದ ಕಾರಣಕ್ಕೆ ಇಷ್ಟು ವರ್ಷಗಳಿಂದ ನಡೆದಿರುವ ಉತ್ಸವವೇ 21 ಹೊಸ ನಾಟಕಗಳಿಗೆ ಪ್ರೇರಣೆ ನೀಡಿದೆ ಎಂಬುದು ಬಹಳ ಮಂದಿಗೆ ತಿಳಿದಿಲ್ಲ. ನಾಟಕ ರಚನೆಯ ಗಂಧಗಾಳಿಯೂ ಇಲ್ಲದವರೇ ವಿಶೇಷ ನಾಟಕ ರಚನೆಯ ಪ್ರಯೋಗಕ್ಕೂ ತಮ್ಮನ್ನೂ ಒಡ್ಡಿಕೊಂಡರು.

ಉತ್ಸವದ ನಾಲ್ಕೂ ದಿನವೂ ನಾಟಕ ಪ್ರದರ್ಶನಕ್ಕೆ ಮುನ್ನ ಆಯೋಜಿಸಿದ್ದ ವಿಜ್ಞಾನ ಗೀತೆಗಳ ಗಾಯನ, ಕನ್ನಡ, ಇಂಗ್ಲಿಷ್ ವಿಜ್ಞಾನ ನಾಟಕಗಳ ಆಯ್ದಭಾಗಗಳ ಓದು–ಇವು ಉತ್ಸವದ ಆಯೋಜಕರ ವಿಜ್ಞಾನ ಬದ್ಧತೆಯನ್ನು ತೋರಿದವು.



'ಹಸಿರೇ ಹೊನ್ನು' ನಾಟಕ

ಹಾಸ್ಯ ನುಂಗಿದ 'ಹಸಿರೇ ಹೊನ್ನು'

ಸಸ್ಯಶಾಸ್ತ್ರ ಸಂಶೋಧನೆಯಲ್ಲಿ ಕರ್ನಾಟಕಕ್ಕೆ ಜಾಗತಿಕವಾಗಿ ಪ್ರಖ್ಯಾತಿ ತಂದುಕೊಟ್ಟ ಪ್ರೊ. ಬಿಜಿಎಲ್ ಸ್ವಾಮಿ ಅವರ ಜೀವನಾಧಾರಿತ 'ಹಸಿರೇ ಹೊನ್ನು' ನಾಟಕವು ಕನ್ನಡದ ಮಟ್ಟಿಗೆ ಹೊಸ ಪ್ರಯೋಗ. 2023ರ ಉತ್ಸವದ ಹೊತ್ತಿಗೆ ಮೊಳಕೆಯೊಡೆದಿದ್ದ ಪರಿಕಲ್ಪನೆ ಈ ಬಾರಿ ರಂಗಕ್ಕೆ ಬಂದಿದೆ. ಆಗ 'ಸಲೀಂ ಆಲಿ' ಜೀವನಚರಿತ್ರೆ ಆಧರಿಸಿ ನಾಟಕ ಬರೆದಿದ್ದ ಡಾ.ಸಿ. ಮನೋಹರ್ ಅವರೇ ಇದನ್ನೂ ರಚಿಸಿದ್ದಾರೆ.

ಮೈಸೂರಿನ ಅರಿವು ರಂಗ ಪ್ರಸ್ತುತಪಡಿಸಿದ ಈ ನಾಟಕದಲ್ಲಿ, ಸ್ವಾಮಿಯವರಲ್ಲಿದ್ದ ಹಾಸ್ಯ ಪ್ರವೃತ್ತಿಗೇ ಹೆಚ್ಚಿನ ಒತ್ತು ಕೊಟ್ಟಿದ್ದರಿಂದ, ಅವರ ಸಂಶೋಧಕ ಮತ್ತು ವಿಜ್ಞಾನ ಲೇಖಕ ಪ್ರತಿಭೆಯ ಮೇಲೆ ಹಾಸ್ಯದ ದಪ್ಪ ಪರದೆ ಹೊದಿಸಿದಂತಾಗಿತ್ತು.

ವಿಜ್ಞಾನದ ಅಂಶಗಳನ್ನು ಪ್ರೇಕ್ಷಕರಿಗೆ ತಲುಪಿಸಲು ಹಾಸ್ಯ ಇರಲೇಬೇಕು ಎಂಬ ಸರಳ ನಿಲುವೂ ಇದಕ್ಕೆ ಕಾರಣವಿರಬಹುದು. ಸ್ವಾಮಿಯವರ ಬದುಕಿನಲ್ಲಿ ಪ್ರಮುಖ ಪಾತ್ರ ವಹಿಸಿದ ಪ್ರೊ.ಎ.ಆರ್.ಕೃಷ್ಣಶಾಸ್ತ್ರಿ, ಎಂ.ಜಿ. ಆರ್, ನಾಡಿಗ ಕೃಷ್ಣಮೂರ್ತಿಯವರ ವ್ಯಕ್ತಿತ್ವವನ್ನು ಕಟ್ಟಿಕೊಟ್ಟ ಬಗೆಯಲ್ಲೂ ಹಾಸ್ಯವೇ ಪ್ರಧಾನವಾಗಿತ್ತು.

ಉತ್ಸವದಲ್ಲಿ ಪ್ರದರ್ಶನಗೊಂಡ 'ಗೆಲಿಲಿಯೋಸ್ ಡಾಟರ್' ನಾಟಕದುದ್ದಕ್ಕೂ ಹಾಸ್ಯವಿತ್ತು. ಆದರೆ, ಗೆಲಿಲಿಯೋನ ಸಂಶೋಧನೆಗಳು, ಅವುಗಳನ್ನು ಕಂಡುಕೊಂಡ, ಮಂಡಿಸುತ್ತಿದ್ದ ಬಗೆ, ವಿಜ್ಞಾನದ ಮೇಲೆ ಧರ್ಮ ಗೆಲುವು ಸಾಧಿಸುವ ಅಂಶಗಳಿಗೂ ಹೆಚ್ಚಿನ ಒತ್ತು ನೀಡಲಾಗಿತ್ತು.

ಮುನ್ನೋಟ 30-06-2024 ರಿಂದ 06-07-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ದೇಹಾರೋಗ್ಯದ ಕಡೆಗೆ ಹೆಚ್ಚು ಗಮನ ಕೊಡುವಿರಿ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ನಿಮ್ಮ ಕೆಲವು ನಡವಳಿಕೆಗಳ ಬಗ್ಗೆ ಹಿರಿಯರು ವಿರೋಧ ವ್ಯಕ್ತಪಡಿಸುವರು. ಭೂ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ಜೀರ್ಣಕ್ರಿಯೆ ಬಗ್ಗೆ ಎಚ್ಚರವಹಿಸಿರಿ. ಸಂಗಾತಿಯು ನಿಮ್ಮ ಮೇಲೆ ಪ್ರಭಾವ ಬೀರಲು ಪ್ರಯತ್ನ ಪಡುವರು. ತೆರಿಗೆ ತಜ್ಞರು ತಮ್ಮ ಕೆಲಸದಲ್ಲಿ ಹೆಚ್ಚು ಎಚ್ಚರವಾಗಿರುವುದು ಒಳ್ಳೆಯದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಸ್ವತ್ತಿನ ದಾಖಲೆಗಳ ವಿಚಾರದಲ್ಲಿ ಸ್ವಲ್ಪ ತಕರಾರು ಮೂಡಬಹುದು. ಹಿರಿಯರಿಂದ ಧನ ಸಹಾಯ ಸಿಗುವ ಸಾಧ್ಯತೆ ಇದೆ. ವೃತ್ತಿಯಲ್ಲಿ ಹೆಚ್ಚಿನ ಸ್ಥಾನ ದೊರೆಯಬಹುದು. ಭೂಮಿ ಸಂಬಂಧಿತ ವ್ಯವಹಾರ ಮಾಡುವವರಿಗೆ ಸ್ವಲ್ಪ ನಷ್ಟವಾಗುವ ಸಾಧ್ಯತೆಗಳಿವೆ. ಹೈನುಗಾರಿಕೆ ಮಾಡುವವರಿಗೆ ಸಿಗಬೇಕಾದ ಸಹಾಯ ಧನಗಳು ಬರುತ್ತವೆ. ಉದ್ಯೋಗದಲ್ಲಿ ಶ್ರಮಪಟ್ಟು ಮೇಲೆರಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಆತ್ಮಾಭಿಮಾನದ ಜೊತೆಗೆ ಸ್ವಂತ ಅಲಂಕಾರಕ್ಕೂ ಹೆಚ್ಚು ಗಮನ ಕೊಡುವಿರಿ. ಆದಾಯ ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಗಳು ನಿಮ್ಮ ವೃತ್ತಿಯ ಮೇಲೆ ಹೆಚ್ಚು ಕೇಂದ್ರೀಕೃತವಾಗಿರುತ್ತದೆ. ಸಂಗೀತ ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಪಕ್ಕೆ ನೋವುಗಳು ಕೆಲವರನ್ನು ಕಾಡಬಹುದು. ಸಂಗಾತಿಯ ಓದಿನ ಸಲಕರಣೆಗಳಿಗಾಗಿ ಹೆಚ್ಚು ಹಣ ಖರ್ಚಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಆದಾಯವಿದ್ದರೂ, ಅಷ್ಟೇ ಖರ್ಚು ಇರುತ್ತದೆ. ಧರ್ಮದ ಕಡೆಗೆ ಹೆಚ್ಚು ಒಲವು ತೋರುವಿರಿ. ಆಸ್ತಿ ವ್ಯವಹಾರ ಮಾಡುವವರಿಗೆ ಕಾನೂನಿನ ತೊಡಕುಗಳು ಬರಬಹುದು. ಪಿತ್ತಕೋಶದ ತೊಂದರೆ ಇರುವವರು ಎಚ್ಚರ ವಹಿಸಿರಿ. ಸಂಗಾತಿಯಿಂದ ನಿರೀಕ್ಷಿತ ಸಹಕಾರಗಳು ಸಿಗದಿರಬಹುದು. ನೇತ್ರ ತಜ್ಞರಿಗೆ ಬೇಡಿಕೆ ಹೆಚ್ಚಾಗುತ್ತದೆ. ಧರ್ಮ ಕಾರ್ಯಗಳಿಗಾಗಿ ಹಣ ಖರ್ಚಾಗುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಸರ್ಕಾರಿ ಅಧಿಕಾರಿಗಳಿಗೆ ಸಾಕಷ್ಟು ಅಭಿವೃದ್ಧಿ ಇರುತ್ತದೆ. ಧಾರ್ಮಿಕ ಉಪನ್ಯಾಸ ಮಾಡುವವರಿಗೆ ಬೇಡಿಕೆ ಹೆಚ್ಚುತ್ತದೆ. ನಿಮ್ಮ ಆದಾಯವು ಕಡಿಮೆ ಇರುತ್ತದೆ. ಸ್ತ್ರೀಯರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿಯಾಗಬಹುದು. ಸಂಸಾರದಲ್ಲಿ ಸುಖವನ್ನು ಕಾಣುವ ಬದಲು ತಪ್ಪು ಹುಡುಕಲು ಯತ್ನಿಸುವಿರಿ. ಮಕ್ಕಳ ಉದ್ಯೋಗದ ಬಗ್ಗೆ ಸಿಹಿ ಸುದ್ದಿ ಕೇಳುವಿರಿ. ಪಾದದಲ್ಲಿ ಸೆಳೆತ ಅಥವಾ ನೋವುಗಳು ಕೆಲವರನ್ನು ಕಾಡಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಮ್ಮೆಲ್ಲ ಆಲೋಚನೆಗಳು ಮತ್ತು ಉಪಾಯಗಳು ನಿಂತಂತೆ ಕಾಣುತ್ತವೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಕೆಲಸ ಕಾರ್ಯಗಳನ್ನು ಆರಂಭಿಸಲು ಉತ್ಸಾಹ ಇರುವುದಿಲ್ಲ. ಸ್ಥಿರಾಸ್ತಿ ವ್ಯವಹಾರವನ್ನು ಮಾಡುವವರಿಗೆ ಸ್ವಲ್ಪಮಟ್ಟಿನ ಲಾಭವಿರುತ್ತದೆ. ಶತ್ರುಗಳ ಕಾಟ ಹೆಚ್ಚಾಗುವ ಸಾಧ್ಯತೆಗಳಿವೆ. ಪಾದಗಳಿಗೆ ಸಂಬಂಧಪಟ್ಟ ತೊಂದರೆಗಳು ಕಾಣಿಸಬಹುದು. ಹಿರಿಯರ ವೃತ್ತಿಯನ್ನು ನೀವು ಅನುಸರಿಸುವಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನಿಮ್ಮ ಮನಸ್ಥಿತಿಯಲ್ಲಿ ಕ್ರೌರ್ಯ ತುಂಬಿರುತ್ತದೆ. ಆದಾಯವು ಬಹಳ ಕಡಿಮೆ ಇರುತ್ತದೆ. ನಿಮ್ಮ ಮಾತು ನಿಮ್ಮ ನಡವಳಿಕೆ ಮೇಲೆ ಪರಿಣಾಮ ಬೀರುತ್ತದೆ. ಕೃಷಿಭೂಮಿಯನ್ನು ಈಗ ಹೊಂದುವ ಅವಕಾಶವಿದೆ. ತಾಂತ್ರಿಕ ವಿದ್ಯೆಯನ್ನು ಕಲಿಯುವವರಿಗೆ ಹೆಚ್ಚು ಅವಕಾಶಗಳು ದೊರೆಯುತ್ತವೆ. ಸಂಗಾತಿಯ ಕಠಿಣ ನುಡಿಗಳು ಅಥವಾ ನಡವಳಿಕೆಗಳು ನಿಮ್ಮನ್ನು ವಿಚಲಿತವಾಗಿಸುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಆಲಸೀತನ ನಿಮ್ಮಲ್ಲಿ ಮನೆ ಮಾಡಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಶತ್ರುಗಳನ್ನು ನಿಗ್ರಹಿಸಲು ತಂತ್ರಗಳನ್ನು ಹೂಡುವಿರಿ. ಸಂಸಾರದಲ್ಲಿ ಹೊಂದಾಣಿಕೆಯಿಂದ ಇರುವುದು ಅತಿ ಮುಖ್ಯ. ವಿದೇಶದಲ್ಲಿ ಓದುತ್ತಿರುವವರಿಗೆ ಹೆಚ್ಚು ಅನುಕೂಲವಿರುತ್ತದೆ. ಸಾಹಸ ಕಲಾವಿದರು ಎಚ್ಚರದಿಂದ ಸಾಹಸ ಕಲೆ ಪ್ರದರ್ಶನ ಮಾಡಬೇಕು. ಸಂಗಾತಿಯಿಂದ ಧನ ಸಹಾಯ ಸಿಗುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಸಮಾಜದಲ್ಲಿ ಬಹಳ ಗೌರವಯುತವಾಗಿ ನಡೆದುಕೊಳ್ಳುವಿರಿ. ಆದಾಯವು ಕಡಿಮೆ ಇರುತ್ತದೆ. ನಿಮ್ಮ ವಿರುದ್ಧ ಷಡ್ಯಂತ್ರ ಮಾಡುವವರನ್ನು ಅವರದೇ ತಂತ್ರಗಳನ್ನು ಬಳಸಿ ಮಟ್ಟಹಾಕುವಿರಿ. ಹೊರದೇಶದಲ್ಲಿರುವವರು ಸ್ಥಿರಾಸ್ತಿಯನ್ನು ಈಗ ಮಾಡಿಕೊಳ್ಳಬಹುದು. ಎಲೆಕ್ಟ್ರಾನಿಕ್ ಉದ್ದಿಮೆದಾರರಿಗೆ ಆದಾಯ ಹೆಚ್ಚುತ್ತದೆ. ಲೇವಾದೇವಿ ಮಾಡುವವರಿಗೆ ನಷ್ಟ ಸಂಭವಿಸಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಈ ವಾರ ಸ್ಥಿರ ಮನಸ್ಕರಾಗಿರುವಿರಿ. ಆದಾಯವು ಸ್ವಲ್ಪ ಮಟ್ಟಿಗೆ ಚೇತರಿಕೆಯನ್ನು ಕಾಣುತ್ತದೆ. ವಿದೇಶದಲ್ಲಿರುವವರ ಆದಾಯ ಹೆಚ್ಚುತ್ತದೆ. ಬಹಳ ಚುರುಕಾಗಿ ಕೆಲಸಮಾಡುವಿರಿ. ಪಾರಂಪರಿಕ ವೈದ್ಯರಿಗೆ ಬೇಡಿಕೆ ಹೆಚ್ಚುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚು ಗಮನ ಕೊಡಿ, ಇಲ್ಲವಾದಲ್ಲಿ ಆದಾಯ ನಷ್ಟವಾಗಬಹುದು. ಪಾಲುದಾರಿಕೆ ವ್ಯವಹಾರಗಳಲ್ಲಿ ನಿಮಗೆ ಅಭಿವೃದ್ಧಿ ಇರುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಆದಾಯವು ಚೇತರಿಕೆಯ ಹಾದಿಯತ್ತ ಹೊರಳುತ್ತದೆ. ವಿದೇಶಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಆದಾಯ ಹೆಚ್ಚುವ ಸಾಧ್ಯತೆ ಇದೆ. ಕುಸ್ತಿಪಟುಗಳಿಗೆ ತಮ್ಮ ದೇಹವನ್ನು ಶಕ್ತಿಯುತವಾಗಿ ರೂಪಿಸಿಕೊಳ್ಳಲು ಅವಕಾಶ ಸಿಗುತ್ತದೆ. ಧರ್ಮ ಪ್ರವಚನ ಮಾಡುವವರಿಗೆ ಹೆಚ್ಚಿನ ಅವಕಾಶ ಮತ್ತು ಸೌಲಭ್ಯಗಳು ದೊರೆಯುತ್ತವೆ. ಮಿತಿಮೀರಿದ ಮಾತು ಕೆಲವರನ್ನು ಉದ್ಯೋಗದಿಂದ ವಂಚಿತರನ್ನಾಗಿ ಮಾಡುವ ಸಂದರ್ಭವಿದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಮನಸ್ಸಿನಲ್ಲಿ ಗಟ್ಟಿ ನಿರ್ಧಾರಗಳಿಲ್ಲದೆ ಬಹಳ ಡೋಲಾಯಮಾನವಾಗಿರುತ್ತದೆ. ಮಾತಿನಲ್ಲಿ ಕಠಿಣತೆ ಇದ್ದು ಮಾತನಾಡುವಾಗ ಎಚ್ಚರವಹಿಸಿ. ಹಿರಿಯರು ನಿಮ್ಮ ನಡವಳಿಕೆ ನೋಡಿ ನಿಮಗೆ ಸಹಾಯ ಮಾಡುವವರು. ದಿನಸಿ ವ್ಯಾಪಾರಗಳಿಗೆ ಲಾಭವಿರುತ್ತದೆ. ನೇತ್ರ ಸಂಬಂಧಿ ತೊಂದರೆಗಳು ಕೆಲವರನ್ನು ಕಾಡಬಹುದು. ಸ್ತ್ರೀಯರಿಂದ ಮತ್ತು ಸಹೋದ್ಯೋಗಿಗಳಿಂದ ಕಿರಿಕಿರಿಗಳಾಗಬಹುದು.

ಪದಬಂಧ 2848



ಮೇಲಿನಿಂದ ಕೆಳಕ್ಕೆ

1. ಗೌರವ ಆದರಗಳಿಂದ ದೊರೆತ ಹುದ್ದೆಯನ್ನು ಹೀಗೆನ್ನಬಹುದೆ? 5
2. ಅಚ್ಚ ಕನ್ನಡದ ಶ್ಯಾಮ ವರ್ಣ 4
3. ಪಿತೃಯಾನವನ್ನು ವಿವರಿಸುವ ವಿಷ್ಣುವಾಹನದ ಪುರಾತನ ಕತೆ 6
4. ಹಣ,ಒಡವೆ,ಐಶ್ವರ್ಯ ಒಂದಾಗಿದೆ 5
6. ಶ್ರೇಷ್ಠರಲ್ಲಿ ಶ್ರೇಷ್ಠರಾದ ದಾಸವರೇಣ್ಯರು ವಿಠಲ ಭಕ್ತರು 7
8. ಮಂದಿ ಮೆಚ್ಚಿದ ಪ್ರಸಿದ್ಧ ರಂಗ ಪ್ರದರ್ಶನ 7
13. ಗಂಡು ಹೆಣ್ಣಿನ ಪ್ರೇಮ ಸಲ್ಲಾಪದಿಂದ ಸ್ಫೂರ್ತಿ ಪಡೆದ ಭಾವನಾ ಕಲ್ಪನೆಯ ಸಾಲುಗಳು 6
14. ಕೊಡಲಿ ಹಿಡಿದ ಜಮದಗ್ನಿ ಪುತ್ರ 5
16. ನೀರಿನ ತಂದೆಯ ಪಟ್ಟ ಪಡೆದ ರಾಸಾಯನಿಕ 5
18. ಊರನ್ನು ಬಿಟ್ಟು ಹೊರಟವ ಅನ್ಯ ದೇಶದವನೆ ಸರಿ 4

ಎಡದಿಂದ ಬಲಕ್ಕೆ

1. ಒಂದು ಬಗೆಯಲ್ಲಿ ಸಂಸಾರವನ್ನು ಬಿಟ್ಟು ಸಂನ್ಯಾಸಿಯಾಗಿರುವ ಆಚಾರ್ಯ 5
3. ಸಡಿಲವಾಗದ ಭದ್ರವಾದ ನೆಂಟಸ್ತನ 5
5. ಪಕ್ಕದ ತಮಿಳುನಾಡಿನವರು ಅಡುಗೆಗೆ ಬಳಸುವ ಬೇಳೆ 3
7. ವಡೋದರಾ ಪಡೆದ ಆಂಗ್ಲ ಹೆಸರು 3
8. ಕುದುರೆ ಎಳೆವ ಗಾಡಿ 3
9. ರಂಗ ಹಿರಿಯ ಅನುಜನಾಗಿ ಹೀಗಾದ 3
10. ಕನ್ನಡ ಪುಸ್ತಕದ ಪುಟ ತಿರುಗಿಸಿದರೆ ಗೋಕುಲ ನಿರ್ಗಮನದ ಕವಿ ಕಾಣಬಹುದು 3
11. ಜಗಳಕ್ಕೆ ಗ್ರಾಸವಾಗುವ ವಾದ 3
12. ಪ್ರಿಯತಮೆ ಕೊನೆಯಲ್ಲಿ ಪಡೆದ ಅಂಕ 3
13. ಸಾಕ್ಷಿಯಾಗಿ ನೀಡುವ ವಚನ 3
14. ಪರರಿಗೆ ಮುಖ ಕಾಣದಂತೆ ಹಾಕಿದ ದೀರ್ಘ ಮುಸುಕು 3
15. ನಾಡಲ್ಲಿ ಜನಿಸಿದ ಪಂಪನ ಹೆಸರಲ್ಲಿ ಇದೀಗ ಪ್ರತಿಷ್ಠಿತ ಪ್ರಶಸ್ತಿ 3
17. ಕಳೆದು ಹೋಗುತ್ತಿರುವ ಕಾಲ 3
18. ಅನೇಕ ಪದರಗಳ ಚಪಾತಿ ಉತ್ತರಭಾರತದ ತಿನಿಸು 3
19. ಸಕ್ಕರೆ ಖಾಯಿಲೆಗೆ ಆಡುಭಾಷೆಯ ಆಂಗ್ಲನಾಮ 3
20. ಕಾದ ಕಬ್ಬಿಣವನ್ನು ಬಗ್ಗು ಬಡಿಯುವವ 3
21. ಧಾನ್ಯ ತುಂಬುವ ಒಟ್ಟಿಲು 3
22. ಹಾಡುವವರಿಗೆ, ಕೇಳುವವರಿಗೆ ಜೇನಿನಂತೆ ಸಿಹಿ ಎನಿಸುವ ಹಾಡು 5
23. ಬೆಳ್ಳಿತೆರೆಯ ಜಗತ್ತು 5

ಪದಬಂಧ ಉತ್ತರ -2847

ಮೇಲಿಂದ ಕೆಳಕ್ಕೆ

1. ಆಕಾಶಪುರಾಣ 2.ಸುಕರ್ಣ 3.ವನಿತೆ 4.ರಕ್ತನಿಧಿ 6.ವರುಣಾ 8.ಲಕುಮಿಕರ 9.ಹಾರೆ 12.ರಕ್ಷಣಾಪಡೆ 14.ಸಮಯಸಾಧಕ 16.ಸಂಗ್ರಾಮ 17.ಹಿಮಾಲಯ 18.ಬಲ 21.ಕೊರಳು 22.ಸರೋವರ

ಎಡದಿಂದ ಬಲಕ್ಕೆ

1. ಆಸುಪಾಸು 3.ವಸಂತವಿಹಾರ 5.ಕಬಿನಿ 6.ವರ್ಣ 7.ತೆಲ 9.ಹಾಸಿನಿ 10.ಕುದುರೆ 11.ರಾವಣಾಸುರ 13.ಕ್ಷಣಿಕ 15.ರಥಸಂಭ್ರಮ 18.ಬಳಪ 19.ಮಾತುಲ 20.ಡೆಕೊ 22.ಮಾಮ 23.ರತುನ 24.ಯಜ್ಞಪಶುಗಳು 25.ಸಮರ್ಪಕ

ಪ್ರತಿಕ್ರಿಯೆ



'ಜನಪ್ರತಿನಿಧಿಗಳು ಓದಬೇಕಾದ ಲೇಖನ'

ನದಿಗೆ ಮರುಜೀವ ಕೊಟ್ಟ ಪಂಜಾಬ್‌ನ ಸಂತ (ಜಗದೀಶ್ ಕೊಪ್ಪ, ಜೂನ್ 23) ಲೇಖನ ನನ್ನಲ್ಲಿ ಕಂಪನವನ್ನು ಸೃಷ್ಟಿಸಿತು. ದೇಶದ ಈ ಹೊತ್ತಿನ ರಾಜಕಾರಣದ ಸಂದರ್ಭದಲ್ಲಿ 'ಗುಜರಾತ್ ಮಾದರಿ, ಉತ್ತರ ಪ್ರದೇಶ ಮಾದರಿ' ಎಂಬ ಮಾತುಗಳನ್ನು ಪದೇ ಪದೇ ಹೇಳುವ ಜನಪ್ರತಿನಿಧಿಗಳು ಈ ಲೇಖನವನ್ನು ಓದಬೇಕು. ದೇಶದ ಅಭಿವೃದ್ಧಿ ಕುರಿತು ಜನಪ್ರತಿನಿಧಿಗಳ ಒಳನೋಟ, ಮಾದರಿಗಳಲ್ಲಿ 'ಬಲ್ಬೀರ್ ಸಿಂಗ್ ಮಾದರಿ'ಯೂ ಸೇರಿದರೆ ದೇಶದ ಹತ್ತಾರು ನದಿಗಳು ಶುದ್ಧೀಕರಣ ಗೊಳ್ಳಬಹುದಲ್ಲವೇ?

ಸಿದ್ಧಲಿಂಗಸ್ವಾಮಿ ಹಿರೇಮಠ ಮೈಸೂರು

ನದಿಗೆ ಮರುಜೀವ ಕೊಟ್ಟ ಪಂಜಾಬ್‌ನ ಸಂತರ ಕುರಿತಾದ ಲೇಖನ ಮನಮುಟ್ಟುವಂತಿತ್ತು. ನಮ್ಮ ರಾಜ್ಯದ ಮಠಾಧೀಶರು, ಸ್ವಾಮೀಜಿಗಳು ಸಂತ ಬಲ್ಬೀರ್ ಸಿಂಗ್ ಅವರನ್ನು ಅನುಸರಿಸಿದರೆ ಬದುಕು ಎಷ್ಟು ಹಸನು ಅಲ್ಲವೇ?

ಸಿಹಿಮೊಗೆ ರಮೇಶ್ ಮೈಸೂರು

ಸಂತ ಬಲ್ಬೀರ್ ಸಿಂಗ್ 160 ಕಿ.ಮೀ ಉದ್ದದ ಕಾಳಿಬೆನ್ ನದಿಯನ್ನು ಶುದ್ಧೀಕರಿಸಲು ಶ್ರಮದಾನ ಮಾಡಿದ್ದು ಎಲ್ಲರೂ ಮೆಚ್ಚುವಂತಿದೆ. ನಾವು ಸಹ ಇಂತಹ ಕೆಲಸ ಮಾಡಬೇಕೆಂದು ಮನಸ್ಸು ತುಡಿಯುತ್ತಿದೆ.

ಎಂ.ಆಂಜನೇಯ ಹಾವೇರಿ

ಜಲಮೂಲಗಳ ಸಂರಕ್ಷಣೆಯಲ್ಲಿ ಈ ಸಂತರ ಕಾರ್ಯ ಮಾದರಿ. ಇತರ ಸೇವೆಗಳ ಜೊತೆಗೆ ಇಂದಿನ ದಿನಗಳಲ್ಲಿ ಜಲಮೂಲಗಳ ರಕ್ಷಣೆ ಎಲ್ಲರ ಹೊಣೆ ಎಂಬುದನ್ನು ತೋರಿಸಿದ್ದಾರೆ.

ವಿನಾಯಕ ಆರ್. ರಾಯಚೂರು

ನದಿಗೆ ಮರುಜೀವ ಕೊಟ್ಟ ಪಂಜಾಬ್‌ನ ಸಂತ ಲೇಖನವು ಕಣ್ಣ ತೆರೆಸಿತು. ಇಚ್ಛಾಶಕ್ತಿ ಜೊತೆಗೆ ಕ್ರಿಯಾಶಕ್ತಿಯೂ ಸೇರಿದರೆ ಅಸಾಧ್ಯವಾದುದನ್ನು ಸಾಧ್ಯವಾಗಿಸುತ್ತದೆ ಎಂಬುದಕ್ಕೆ ಸಂತ ಬಲ್ಬೀರ್ ಸಿಂಗ್ ಸಾಕ್ಷಿಯಾಗಿದ್ದಾರೆ.

ಉಷಾಲಕ್ಷ್ಮಿ ಅರವಿಂದ ಹೊಳ್ಳ ಬೆಂಗಳೂರು

ಈ ಲೇಖನವು ಆಧುನಿಕತೆ, ಜಾಗತೀಕರಣದ ಅಮಲಿನಲ್ಲಿ ತೇಲುತ್ತಿರುವ ಜನರ ಕಣ್ತೇರಿಸುವಂತಿದೆ. ಕೆಲವರ ಒಳಿತಿಗಾಗಿ ನಮ್ಮ ರೈತರ ಬದುಕನ್ನು ಬಲಿಕೊಡುತ್ತಿರುವ ದೇಶದ ನಾಯಕರು ಈಗಲಾದರೂ ಎಚ್ಚೆತ್ತುಕೊಳ್ಳಲಿ. ಇರುವ ಜಲಮೂಲಗಳನ್ನು ಸಮುದಾಯದ ಜೊತೆಗೂಡಿ ಕಾಪಾಡಲಿ. ಮುಂದಿನ ಜನಾಂಗಕ್ಕೆ ನಾವು ಕೊಡುವ ಅತ್ಯುತ್ತಮ ಕಾಣಿಕೆ ಇದು.

ಶಿ.ಮ .ಮಂಜುನಾಥ ಚಿಂತಾಮಣಿ

'ಅಪರೂಪದ ಕೆಲಸ'

ವೆಂಕಟೇಶ್ ಸಂಪರ್ಕ ಸಂಖ್ಯೆ: 8553814264

ಜೇನುನೊಣಗಳ ರಕ್ಷಕ ವೆಂಕಟೇಶ್ (ಅಬ್ದುಲ್ ರಹಿಮಾನ್) ಮಾಡುತ್ತಿರುವ ಕೆಲಸ ಅಪರೂಪದ್ದು ಹಾಗೂ ಮೆಚ್ಚುವಂಥದ್ದು. ತಮ್ಮ ಜೀವದ ಹಂಗು ತೊರೆದು ಜೇನು ಬಿಡಿಸುವುದರೊಂದಿಗೆ ಜೇನುಹುಳಗಳನ್ನು ರಕ್ಷಿಸಿ ತಾವು ರಕ್ಷಣೆ ಮಾಡಿಕೊಂಡು ಜನರಿಗೆ ಅನುಕೂಲ ಮಾಡುವುದರಿಂದ ಹೆಸರು ಗಳಿಸಿದ್ದಾರೆ. ಜೇನು ಹುಟ್ಟು ಎಲ್ಲಿದಿಯೋ ಅಲ್ಲಿಗೆ ಹೋಗಿ ಅದನ್ನು ತೆರವು ಗೊಳಿಸುವುದರಿಂದ ಅಲ್ಲಿಯ ಜನರಿಗೆ ಸಹಾಯವಾಗುತ್ತಿದೆ.

ಬಸಪ್ಪ ಸೊ ಮುಳ್ಳೂರ ಹಲಗತ್ತಿ ರಾಮದುರ್ಗ ತಾಲ್ಲೂಕು

ವೆಂಕಟೇಶ್ ಅವರ ಕೆಲಸದಿಂದ ಹೆಚ್ಚು ಜನರಿಗೆ ಉಪಯೋಗವಾಗುತ್ತಿದೆ. ಇವರು ಸಂಪರ್ಕ ಸಂಖ್ಯೆಯನ್ನು ಕೊಟ್ಟಿದ್ದರೆ ಅನುಕೂಲವಾಗುತ್ತಿತ್ತು. ಇಂತಹ ಉಪಯುಕ್ತ ಲೇಖನಗಳಲ್ಲಿ ಸಂಪರ್ಕ ಸಂಖ್ಯೆ ಕೊಡಬೇಕು.

ಎಸ್.ಎಂ.ಲಕ್ಷ್ಮಿಕಾಂತಪ್ಪ ಬೆಂಗಳೂರು

ಸೊಗಸಾದ ಕಟ್ಟೆ ಪುರಾಣ

ಕಟ್ಟೆ ಕಟ್ಟೆ ದೊಡ್ಡಕಟ್ಟೆ ಎಲ್ಹೋಗಿಟ್ಟೆ (ಸುಭಾಸ ಯಾದವಾಡ) ಅವರ ಲೇಖನ ಸೊಗಸಾಗಿದೆ. ಹಳ್ಳಿಕಟ್ಟೆಗಳು, ಅಲ್ಲಿ ನಡೆಯುತ್ತಿದ್ದ ರಸವತ್ತಾದ ಹಿರಿಯರ ಚರ್ಚೆಗಳು, ಮನೋರಂಜಕ ಹರಟೆ, ಹಳ್ಳಿಯಿಂದ ದಿಲ್ಲಿಯವರೆಗೆ ನಡೆಯುವ ಮಾತುಕತೆಯನ್ನು ಮನಮುಟ್ಟುವಂತೆ ಬರೆದಿದ್ದಾರೆ. ಈಗ ಆ ಕಟ್ಟೆಗಳೆಲ್ಲ ಮಾಯವಾಗಿವೆ. ಅಲ್ಲಲ್ಲಿ ಕಟ್ಟೆಗಳಿದ್ದರೂ ಬಂದು ಕುಳಿತುಕೊಳ್ಳುವ ಜನರಿಲ್ಲ.

ಕಾಶೀನಾಥ. ಪಿ. ಸಾಲಿಮಠ ನರೇಗಲ್ಲ

ಕಟ್ಟೆ ಅಂದಾಕ್ಷಣ ನಮಗೆ ಥಟ್ ಅಂಥ ನೆನಪಾಗೋದು ಊರಲ್ಲಿರುವ ಪಂಚಾಯಿತಿ ಕಟ್ಟೆ. ನ್ಯಾಯ ಪಂಚಾಯಿತಿ ಮುಗಿದ ಮೇಲೆ ಅದು ಹೆಂಗಳೆಯರಿಗೆ ಅಶ್ವತ್ಥ ಕಟ್ಟೆ, ವಯೋವೃದ್ಧರಿಗೆ ಮಾತಿನ ಕಟ್ಟೆ, ಸೋಮಾರಿಗಳಿಗೆ ಸೋಮಾರಿ ಕಟ್ಟೆಯಾಗಿ ರೂಪಾಂತರಗೊಳ್ಳುತ್ತಿತ್ತು. ಇಂತಹ ಕಟ್ಟೆಯಲ್ಲಿ ಲೆಕ್ಕವಿಲ್ಲದಷ್ಟು ಜನರು ಕಳೆದ ಅವಿಸ್ಮರಣೀಯ ಸಮಯ, ಮಾತಿನ ವ್ಯವಹಾರ, ನಗು, ತಮಾಷೆ ಎಲ್ಲರನ್ನೂ ಒಂದು ಮಾಡುವ ಸ್ಥಳವಾಗಿತ್ತು.

ಲಕ್ಷ್ಮಣ ಭಾರದ್ವಾಜ ಬೆಂಗಳೂರು

ಕಣ್ಮರೆಯಾಗುತ್ತಿರುವ ನಮ್ಮ ಹಳ್ಳಿಯ ಹರಟೆ ಕಟ್ಟೆಗಳಿಗೆ ಕಾರಣ ಲೇಖಕರು ಹೇಳಿದಂತೆ ಬರೀ ದೂರ ದರ್ಶನ ಒಂದೇ ಅಲ್ಲ, ಜಾಗತೀಕರಣದ ಪರಿಣಾಮವಾಗಿ ವೇಗದ ಬದುಕು ಸಹ ಕಾರಣವಾಗಿದೆ. ಹಾಗೆಯೇ ನಮ್ಮ ಹಳ್ಳಿ ಹಳ್ಳಿಗೂ ಸಹ ವ್ಯಾಪಿಸಿದ ಮದ್ಯಪಾನ ವ್ಯಸನವೂ ಸಹ ಮತ್ತೊಂದು ಕಾರಣ ಎಂಬುದು ಅಗದಿ ಕಹಿ ಸತ್ಯವಲ್ಲವೇ?

ಹುರುಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ

'ನಟರ ಆದರ್ಶ ತೆರೆಯ ಮೇಲಷ್ಟೆ'

ಸಿನಿಮಾ & ಅಪರಾಧದ ಅಧ್ಯಾಯಗಳು (ಕೆ. ಪುಟ್ಟಸ್ವಾಮಿ, ಜೂನ್ 23) ಲೇಖನ ಸಕಾಲಿಕವಾಗಿತ್ತು. ಒಂದಲ್ಲ ಒಂದು ಅಪರಾಧ ಪ್ರಕರಣಗಳಲ್ಲಿ ಸಿಲುಕಿರುವ ಸಿನಿಮಾ ನಟರು ತೆರೆಯ ಮೇಲೆ ಆದರ್ಶ ಪಾತ್ರಗಳನ್ನು ನಿರ್ವಹಿಸಿ ಸಮಾಜದ ಅಂಕು-ಡೊಂಕುಗಳನ್ನು ತಿದ್ದಿ ವಿಜೃಂಭಿಸಿದವರೇ! ಆದರೆ ಇವರು ಮಾಡಿರುವ ಕೃತ್ಯಗಳನ್ನು ಗಮನಿಸಿದಾಗ ಆದರ್ಶ ಎನ್ನುವುದು ತೆರೆಯ ಮೇಲೆ ಮಾತ್ರವೇ ಇರಬಹುದು ಎನ್ನುವಂತಾಗಿದೆ.

ಶಂಕರೇಗೌಡ ಮಂಡ್ಯ

ಚಾರ್ಲಿ ಚಾಪ್ಲಿನ್ ಬಗ್ಗೆ ಓದಿ ಮನಸ್ಸಿಗೆ ತುಂಬಾ ನೋವಾಯಿತು. ಬಹುತೇಕ ಕಲಾವಿದರ ಬಣ್ಣ ತೆಗೆದ ಮೇಲಿನ ವ್ಯಕ್ತಿತ್ವವನ್ನು ಜನಸಾಮಾನ್ಯರು ಅನುಸರಿಸಲಾಗದು ಎನ್ನುವುದೂ ಸತ್ಯ.

ಶ್ರೀಕಾಂತ ಕೆ. ಮಾಳೋದೆ ಬೆಂಗಳೂರು

sensational ವಿಷಯವೊಂದು ಲೀಡ್ ಆಗಬೇಕಿತ್ತೆ? ಟಿ.ವಿ.ಮಾಧ್ಯಮ ಅಂಥ 'ಇತಿಹಾಸ'ದ ವಿಷಯಗಳ ಬಗ್ಗೆ ಕಾರ್ಯಕ್ರಮ ಪ್ರಸಾರ ಮಾಡಿಬಿಟ್ಟಿದೆ.

ಎಚ್.ಎಸ್.ಮಂಜುನಾಥ ಗೌರಿಬಿದನೂರು



ರಾಮೇಗೌಡರ ಅಪರೂಪದ ನರ್ಸರಿ

ಚಿತ್ರಗಳು: ಡಾ.ಪ್ರಶಾಂತ್

ಬಿಳಿಗಿರಿಯ ಸಸ್ಯರಾಮ

ಜಿ.ಎಸ್. ಜಯದೇವ, ಕೃಷ್ಣಮೂರ್ತಿ ಹನೂರು

ಬಿಳಿಗಿರಿ ರಂಗನ ಬೆಟ್ಟದ ತಪ್ಪಲಿನಲ್ಲಿ ವಿವಿಧ ಬಗೆಯ ಸಸ್ಯಗಳನ್ನು ಬೆಳೆಸಿರುವ ರಾಮೇಗೌಡರು ನರ್ಸರಿ ಕ್ಷೇತ್ರದಲ್ಲಿ ಚಿರಪರಿಚಿತ. ಸಸ್ಯ ಸಂಕುಲದ ಕುರಿತು ಅವರಿಗಿರುವ ಜ್ಞಾನವೂ ಅನನ್ಯವಾದುದು...

ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ 'ಚಿದಂಬರ ರಹಸ್ಯ' ಕಾದಂಬರಿಯಲ್ಲಿ ಬರುವ ಕೆಸರೂರು ಸುತ್ತಿನ ಅನೇಕಾನೇಕ ವ್ಯಕ್ತಿಗಳ ನಡುವೆ ಅಲ್ಲಿಯ ಅರಣ್ಯವೂ ಒಂದು ಪಾತ್ರವೇ ಆಗಿ ಬರುತ್ತದೆ. ಕೆಸರೂರಿನ ಸಮೃದ್ಧ ಬೆಳೆಯಾದ ಏಲಕ್ಕಿಗೆ ಅಂಟಿದ ವೈರಸ್ ಅದು ಮತ್ತೊಂದು ಬಗೆಯಲ್ಲಿ ಜನಗಳ ಅಂತರಂಗ ಬಹಿರಂಗ ವ್ಯವಹಾರಕ್ಕೂ ತಗುಲಿಕೊಂಡು, ಇಲ್ಲಿಯ ಶ್ರೀಮಂತರಿಗೆ ತಮ್ಮ ಇನ್ನಷ್ಟು ಶ್ರೀಮಂತಿಕೆಗೆ ಕಾಡಿನ ಒಂದೊಂದು ಗಿಡ ಮರ ಬಳ್ಳಿಯೂ ದುಡ್ಡಿನಚೀಲದಂತೆ ಕಾಣುತ್ತದೆ. ಈ ಕಾರಣವಾಗಿ ಕೆಸರೂರಿನ ಕಾನಿನಾದ್ಯಂತ ಹೆಜ್ಜೆಯೂರಲು ಎಡೆಯಿಲ್ಲದಂತೆ ಅಥವಾ ಅಲ್ಲಿಯೇ ಹುಟ್ಟಿ ಬೆಳೆಯುವ ಪ್ರಾಣಿ ಸಂಕುಲವೇ ಸಹಜವಾಗಿ ಹೆಜ್ಜೆಯಿಡಲಾಗದಂತೆ ಲಾಂಟಾನ ಬೆಳೆದುಕೊಂಡಿರುವುದನ್ನು ತೇಜಸ್ವಿ ಪುನರಾವರ್ತನೆಯಾಗಿ ಹೇಳುತ್ತಾರೆ.

ತೇಜಸ್ವಿಯವರು ಒಮ್ಮೆ ಗಂಭೀರವಾಗಿ ಮತ್ತೊಮ್ಮೆ ಹಾಸ್ಯದ ಪರಿಕ್ರಮದಲ್ಲಿ ಬರೆದಿರುವ ನಲವತ್ತು ವರ್ಷಗಳ ಹಿಂದಿನ ಕಾದಂಬರಿ ಸಂಗತಿಯಂತೆ, ಈ ಹೊತ್ತಿನ ವಾಸ್ತವ ಎಂದರೆ ದಕ್ಷಿಣ ಭಾರತ ಅಥವಾ ಏಷ್ಯಾದ ಸಸ್ಯ ಸಮೃದ್ಧಿಯ ತಾಣ ಎನಿಸಿರುವ ಬಿಳಿಗಿರಿ ರಂಗನ ಬೆಟ್ಟದಲ್ಲಿ ಇನ್ನಿಲ್ಲದಂತೆ ಬೆಳೆಯುತ್ತಿರುವ ಲಾಂಟಾನದ ಹಾವಳಿ ತಡೆಯದಂತಿದೆ. ಊರ ಬಯಲಲ್ಲಿ ಪಾರ್ಥೇನಿಯಂ ಬೆಳೆದಂತೆ ಇದೀಗ ಅರಣ್ಯ ಸುತ್ತಿನಲ್ಲಿ ಲಂಟಾನಾ ಹಬ್ಬತೊಡಗಿದೆ. ನಲವತ್ತು ವರ್ಷಗಳ ಹಿಂದೆ ತೇಜಸ್ವಿ ಬರೆದದ್ದನ್ನೇ, ಹೇಳುತ್ತಿದ್ದುದನ್ನೇ ಇಂದು ಬಿಳಿಗಿರಿ ರಂಗನ ಬೆಟ್ಟದ ಸೋಲಿಗರ ಬುಡಕಟ್ಟಿನ ರಾಮೇಗೌಡರೂ ಪುನರಾವರ್ತನೆಯಾಗಿ ಹೇಳುತ್ತಾರೆ.



ಈಶಾನ್ಯದ ದೇವಮೂಲೆಯಿಂದ ಆರಂಭವಾಗುವ ಕರ್ನಾಟಕದ ಅರಣ್ಯ ಸೀಮೆ, ಅದು ಹಾಗೆಯೇ ಹಬ್ಬಿಕೊಂಡು ನೈರುತ್ಯ ದಿಕ್ಕಿನ ಬಿಳಿಗಿರಿ ರಂಗನ ಗುಡ್ಡ ಬೆಟ್ಟಗಳಿಂದ ಹಾಯುತ್ತ ದಕ್ಷಿಣದ ಬಂಡೀಪುರ ಅಲ್ಲಿಂದ ಕೊಡಗಿನಾಚೆಯ ಸಹ್ಯಾದ್ರಿ ಮುಟ್ಟುತ್ತದೆ. ಇದು ಕರ್ನಾಟಕದ ಪ್ರಾಕೃತಿಕ ಶ್ರೀಮಂತಿಕೆ. ಈ ಅರಣ್ಯದ ಜೀವಸಂಕುಲ ಮತ್ತು ಸಸ್ಯಸಂಕುಲದ ನಡುವೆ ಅನೇಕ ಬುಡಕಟ್ಟು ಸಮೂಹಗಳು ವಾಸವಾಗಿರುತ್ತವೆ. ಇಲ್ಲಿಯ ಆದಿವಾಸಿ ಸಮೂಹಗಳ ಜೀವನ ಬದಲಾವಣೆ, ಗ್ರಾಮ ನಗರಗಳ ಸುಧಾರಣೆಯಷ್ಟು ಸುಲಭವಲ್ಲ. ಬುಡಕಟ್ಟುಗಳದು ಸರಳ ಜೀವನವಾದರೂ ಇವರ ನಡುವೆ ಕೆಲವೇ ಕೆಲವು ನಂಬಿಕೆ ಸಂಪ್ರದಾಯಗಳು ಬಲವಾದವು. ಅರಣ್ಯದ ನಡುವಣ ಮೃಗ ಸಂತತಿಗೆ ಹೆದರದ ಇವರು ತಮ್ಮ ನಂಬಿಕೆಗಳ ಪಲ್ಲಟಕ್ಕೆ ಬೆದರುತ್ತಾರೆ. ಇದೇನೇ ಇರಲಿ, ಇಪ್ಪತ್ತಾರು ವರ್ಷಗಳಿಂದ ರಾಮೇಗೌಡರ ಸಸ್ಯ ಸಂರಕ್ಷಣೆ ಮತ್ತು ಆ ಕುರಿತು ಅವರಿಗಿರುವ ಜ್ಞಾನವನ್ನು ನಾಡಿನ ಜನ ಮೆಚ್ಚಲೇಬೇಕು.

ಹುಟ್ಟಿನಿಂದ ತಮ್ಮ ಜೀವನ ಪರ್ಯಂತ ಅರಣ್ಯದಲ್ಲೇ ಬದುಕುವ ಈ ಸೋಲಿಗ ಸಮೂಹದ ಮೈ ಮನಸಿನಲ್ಲಿ ಕಾಡು ಮತ್ತು ಅಲ್ಲಿಯ ಜೀವ ವೈವಿಧ್ಯದ ಸಂಗತಿಗಳು ಸಹಜವಾಗಿಯೇ ತುಂಬಿರುತ್ತವೆ. ಇನ್ನೇನು ಬಿಳಿಗಿರಿ ರಂಗನ ಬೆಟ್ಟದ ಊರಲ್ಲದ ಊರನ್ನು ಸೇರುತ್ತೇವೆ ಅನ್ನುವ ಒಂದು ಕಿಲೊಮೀಟರ್ ಹಿಂದಕ್ಕೆ ರಸ್ತೆಯ ಅಂಚಿನಲ್ಲೇ ಜಡೆ ರುದ್ರಸ್ವಾಮಿಯ ಹೆಸರಿನ ರಾಮೇಗೌಡರ ಸಸ್ಯ ಸಂಕುಲದ ನರ್ಸರಿ ಕಾಣಿಸುತ್ತದೆ. ಅದರ ಪಕ್ಕದಲ್ಲೇ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಆ ನರ್ಸರಿಯಲ್ಲಿ ಬೆಳೆಸಲಾಗಿರುವ ಮತ್ತು ಮಾರಾಟಕ್ಕಿರುವ ಹೂವು ಮತ್ತು ಮೂಲಿಕೆ ಸಸ್ಯ ಸಮೂಹದ ಹೆಸರುಗಳ ದೊಡ್ಡ ಫಲಕವಿದೆ. ಈ ಸಸ್ಯಾರಾಮದ ಗಿಡಗಳು ಸೀಮೆಗೊಬ್ಬರ, ದ್ರಾವಕ ಇತ್ಯಾದಿಗಳಿಂದ ಬೆಳೆಯುತ್ತಿರುವವಲ್ಲ. ಅಷ್ಟು ಬಂಡವಾಳ ಹಾಕಿ ಈ ಸಸಿಗಳನ್ನು ಬೆಳೆಸುವ ಶಕ್ತಿ ರಾಮೇಗೌಡರಿಗೆ ಇಲ್ಲವೂ ಇಲ್ಲ. ಈ ಸಸಿಗಳು ಬರಿಯ ಮಣ್ಣು ಅದರ ಸಾರದ ಮೇಲೆ ಬೆಳೆದವು. ಮಳೆಯ ಹೆಚ್ಚಳದಿಂದಲೋ, ಬಿಸಿಲಿನಿಂದಲೋ, ಮತ್ತ್ಯಾವುದೋ ಕಾರಣಕ್ಕೋ ಕೊಳೆ ರೋಗ ತಗುಲಿದರೆ ಒಂದಿಷ್ಟು ಶಿಲೀಂದ್ರ ನಾಶಕ ಸಿಂಪಡಿಸಿದರೆ ಆಯಿತು. ರಾಮೇಗೌಡರಿಗೆ ಯಾವ ಸೀಜನ್ನಿಗೆ ಯಾವ ಗಿಡ ತಂದು ತಮ್ಮ ನರ್ಸರಿಯಲ್ಲಿ ಬೆಳೆಸಬೇಕೆಂಬುದು ಗೊತ್ತು. ಇಲ್ಲಿರುವ ಸಸ್ಯ ವೈವಿಧ್ಯ ಸುಮಾರು ಮುನ್ನೂರರಿಂದ ನಾನೂರು. ಉಪ್ಪಿನಕಾಯಿಯ ಕಾರಣಕ್ಕಾಗಿ ಮಾಗಳಿ ಬೇರಿಗೆ ಹೆಚ್ಚಿನ ಬೇಡಿಕೆ. ಅಳಲೆಕಾಯಿಗೂ ಅದರ ಔಷಧಿಗೂ ಕೋರಿಕೆ ಉಂಟು. ರಾಮೇಗೌಡರಿಗೇ ಅಷ್ಟಿಷ್ಟು ಮೂಲಿಕೆ ಔಷಧಿ ಜ್ಞಾನವಿದೆ.

ಬಿಕ್ಕಿಲು, ಏಕಮುಖ ರುದ್ರಾಕ್ಷಿ ಬಿತ್ತನೆ ಈ ವರ್ಷ ಮಾಡಿದರೆ ಅದು ಚಿಗುರೊಡೆಯುವುದು ಮುಂದಿನ ವರ್ಷವೇ. ಕಾನು ಧೂಪವೂ, ಜಾಲಾರಿಯೂ ಅಷ್ಟೇ. ನೂರಾರು ವರ್ಷ ಬದುಕುವ ಗಿಡಮರಗಳ ಹುಟ್ಟು ಬೆಳವಣಿಗೆ ನಿಧಾನವೇ. ಧೂಪದ ಗಿಡ, ಮಾಗಳಿ ಬಳ್ಳಿ ಸಿಕ್ಕುವುದು ಕಷ್ಟ. ಕಾಡೆಲ್ಲ ತಿರುಗಬೇಕು. ಬೆಳೆದಿರುವ ಲಾಂಟಾನಾದ ನಡುವೆ ಅಡ್ಡಾಡುವುದೇ ಕಷ್ಟ. ಮಾಗಳಿ ಬೇರಿನ ಇನ್ನೊಂದು ಹೆಸರು ನಿಮಗೆ ಗೊತ್ತೇ? ಅದನ್ನು ರಾವಣನ ಮೀಸೆ ಎಂದು ಕರೆಯುವುದುಂಟು ಎನ್ನುತ್ತಾರೆ ರಾಮೇಗೌಡರು. ಇದೀಗ ಬೆಟ್ಟದ ನೆಲ್ಲಿಕಾಯಿ ಹೆಚ್ಚು ಸಿಗುತ್ತಿಲ್ಲ, ಉಪ್ಪಿಲು ಗಿಡ ಕಳೆಯಂತೆ ಬೆಳೆದು ಅದರ ಸಂತಾನವನ್ನು ಹಾಳು ಮಾಡುತ್ತಿದೆಯಂತೆ.

ಹೀಗೆ ಸಸ್ಯ ಸಂತತಿಯ ವಿವರಗಳನ್ನು ಕೇಳಿದಂತೆಲ್ಲ ಹೇಳುತ್ತ ಹೋಗುವ ರಾಮೇಗೌಡರು ಅರಣ್ಯದ ಯಾವ್ಯಾವ ಪ್ರಾಣಿ ಪಕ್ಷಿಗಳಿಗೆ ಯಾವ್ಯಾವ ಥರದ ಬೀಜ ಸೊಪ್ಪು ಮಾಂಸ ಇಷ್ಟವೆಂಬುದನ್ನು ಹೇಳುತ್ತಾರೆ. ಇವರ ನರ್ಸರಿಯ ನೀರಿನ ಅನುಕೂಲಕ್ಕೆ ಕೊಳವೆಬಾವಿ ಕೊರೆಸಲು ಅನುಮತಿ ಇಲ್ಲದೇ ಹೋದುದರಿಂದ ನಿತ್ಯ ಬೇರೆ ಕಡೆಯಿಂದ ನೀರು ಸಾಗಿಸಿ ತಂದು ನರ್ಸರಿಯ ಸಸ್ಯ ಸಂಕುಲವನ್ನು ರಕ್ಷಿಸುತ್ತಿದ್ದಾರೆ. ಕಾಡನ್ನು ಯಾರ ಕೈಯಲ್ಲೂ ಕೃತಕ ರೀತಿಯಿಂದ ಬೆಳೆಸಲಾಗದು, ಆದರೆ ರಕ್ಷಿಸಬಹುದು. ಇಂಥದೊಂದು ಕಾಯಕಕ್ಕೆ ರಾಮೇಗೌಡರಿಗೆ ಬೆಂಬಲವಾಗಿ ನಿಂತಿರುವವರು ಅವರ ಹೆಂಡತಿ ಮತ್ತು ಮೂವರು ಹೆಣ್ಣು ಮಕ್ಕಳು. ಈ ಹಿಂದೆ ರಾಮೇಗೌಡರು, ಮದ್ಯಪಾನ ಚಟಕ್ಕೆ ದಾಸರಾಗಿದ್ದು ಈ ಸಸ್ಯಜೀವಿಗಳ ಸಹವಾಸದಿಂದ ದೂರವಾಗಲು ಸಾಧ್ಯವಾಯಿತು ಎನ್ನುತ್ತಾರೆ.

ಅರಣ್ಯದ ನಡುವಣ ಈ ಬಗೆಯ ಸಸ್ಯ ಕಾಯಕಕ್ಕೆ ರಾಮೇಗೌಡರಿಗೆ ಈಚೆಗೆ ಅವರಿರುವ ಬಿಳಿಗಿರಿ ರಂಗನ ಬೆಟ್ಟದ ಬಂಗ್ಲೆ ಪೋಡಿನಲ್ಲಿಯೇ ಬೆಂಗಳೂರಿನ ಭುವನೇಶ್ವರಿ ಚಾರಿಟಬಲ್ ಟ್ರಸ್ಟ್‌ನ ರಾಜಶೇಖರ್ ಅವರಿಂದ ಒಂದು ಲಕ್ಷ ರೂಪಾಯಿಗಳ ನಗದು ಸಹಾಯದ ಸನ್ಮಾನ ಸಮಾರಂಭ ಜರುಗಿತು. ಇದರೊಂದಿಗೆ ರಾಮೇಗೌಡರ ನರ್ಸರಿಯ ಕೆಲಸಕ್ಕೆ ಇನ್ನಿತರ ಸಾಮಾನು ಸರಂಜಾಮನ್ನೂ ಒದಗಿಸಿ, ಅವರ ಅರಣ್ಯ ರಕ್ಷಣೆಯ ಸೇವೆಯನ್ನು ಶ್ಲಾಘಿಸಲಾಯಿತು.

ಪ್ರಕೃತಿಯನ್ನು ಮಣಿಸುವುದು ಕಷ್ಟ. ಎರಡು ಮೂರು ವಾರಗಳ ಹಿಂದೆ ಇದ್ದ ಬಿಸಿಲ ಝಳ ಈಗಲೂ ಮುಂದುವರೆದಿದ್ದರೆ ಅದೆಂಥ ವಾತಾವರಣ ಸೃಷ್ಟಿಯಾಗುತ್ತಿತ್ತೋ ಏನೋ! ಹೀಗಾಗಿ ಪ್ರಕೃತಿಯ ನಡುವೆ ಇರುವವರು ಪ್ರಕೃತಿಗೆ ಮಣಿದೇ ಬದುಕಬೇಕಾಗಿದೆ.



ರೂಪದರ್ಶಿ ಗೌರಿ

ಅವರ ಫ್ಯಾಷನ್ ಶೋ ದುನಿಯಾ...!

10ನೇ ಪುಟದಿಂದ...

ವೃತ್ತಿಪರ ರೂಪದರ್ಶಿಯರನ್ನೂ ಅವರು ನಾಚಿಸುವಂತೆ ಪ್ರದರ್ಶನ ನೀಡಿದರು. ಇಷ್ಟು ವರ್ಷ ತಮಗೆ, ತಮ್ಮ ಸಮುದಾಯಕ್ಕೆ ಇದ್ದ ಅಸ್ತಿತ್ವಕ್ಕೆ ಹೊಸ ಗುರುತು ನೀಡಿದ ಗೆಲುವು ಅವರದ್ದಾಯಿತು. ಈ ಪ್ರದರ್ಶನಕ್ಕೆ 'ಭಾರತ್ ಅಚೀವರ್ಸ್ ಪ್ರಶಸ್ತಿ' ಕೂಡ ಬಂದಿದೆ.

ಲಿಂಗತ್ವ ಅಲ್ಪಸಂಖ್ಯಾತರ ಬದುಕು ತಾವು ಮಾಡಿಕೊಂಡಿದ್ದಲ್ಲ; ದೇವೇಚ್ಛೆ ಎಂಬುದು ಅವರ ಗಾಢ ನಂಬಿಕೆ. ಅವರಿಗೆ ಆಪ್ತವಾಗಲಿ ಎಂಬ ಕಾರಣಕ್ಕೆ ಪ್ರದರ್ಶನದ ಹೆಸರನ್ನು 'ವಿಲ್ ಆಫ್ ಗಾಡ್ (ದೇವೇಚ್ಛೆ)' ಎಂದು ಇಟ್ಟಿದ್ದು ವಿಶೇಷ.

ಈ ಪ್ರದರ್ಶನದ ಬಳಿಕ ಕೆಲವರು ಮಾಡೆಲಿಂಗ್ ಅನ್ನೇ ವೃತ್ತಿಯನ್ನಾಗಿ ಸ್ವೀಕರಿಸಲು ಮುಂದಾಗಿದ್ದಾರೆ. ಕೆಲವರಿಗೆ ಸ್ಟಾರ್ ಹೋಟೆಲ್‌ಗಳಲ್ಲಿ, ವಾಣಿಜ್ಯ ಮಳಿಗೆಗಳಲ್ಲಿ ಕರೆದು ಕೆಲಸ ಕೊಡಲಾಗಿದೆ. ಜಾಹೀರಾತು ಸಂಸ್ಥೆಗಳಲ್ಲಿ ಅವಕಾಶಗಳು ಕಾದಿವೆ. ಹೀಗೆ ಇವರ ಬದುಕಲ್ಲಿ ಹೊಸ ಹೊಸ ದಾರಿಗಳು ತಾನೇ ತಾನಾಗಿ ತೆರೆದುಕೊಂಡಿವೆ.

ಮನುಷ್ಯನನ್ನು ಗುರುತಿಸಬೇಕಾದುದು ಲಿಂಗಾಧಾರಿತವಾಗಿ ಅಲ್ಲ; ಮನುಷ್ಯತ್ವದ ಮೇಲೆ ಎಂಬ ಸ್ಪಷ್ಟ ಸಂದೇಶ ನೀಡುವಲ್ಲಿ ಈ ರೂಪದರ್ಶಿಯರು ಯಶಸ್ವಿಯಾದರು.



ರೂಪದರ್ಶಿ ಪೂಜಾ

ಹಳ್ಳಿ ಹಮ್ಮೀರನ ಹಮ್ಮರ್ ವಿನ್ಯಾಸ ಯಾನ

10ನೇ ಪುಟದಿಂದ...

ಸ್ಪೋರ್ಟ್ಸ್ ಕಾರುಗಳು, ದೊಡ್ಡ ಎಸ್‌ಯುವಿಗಳು ಮತ್ತು ಸ್ವಯಂಚಾಲಿತ ವಾಹನವರೆಗೆ ಇದು ವಿಸ್ತರಿಸಿದೆ. ಆದರೆ, ಭಾರತದ ಮಟ್ಟಿಗೆ ಈ ಕ್ಷೇತ್ರವು ಅಷ್ಟೊಂದು ಪ್ರವರ್ಧಮಾನಕ್ಕೆ ಬಂದಿಲ್ಲ.

ಎರಡು ದಶಕಗಳ ಹಿಂದೆ ಭಾರತೀಯ ಯುವಕರು ಸಾಂಪ್ರದಾಯಿಕ ವ್ಯಾಪಾರ ಕ್ಷೇತ್ರದತ್ತ ಗಮನ ಕೇಂದ್ರೀಕರಿಸುತ್ತಿದ್ದುದು ಸರ್ವೇ ಸಾಮಾನ್ಯವಾಗಿತ್ತು. ಸಮೀರ್ ಅವರಿಗೆ ಸಾಫ್ಟ್‌ವೇರ್ ಎಂಜಿನಿಯರ್ ಆಗುವ ಹಂಬಲ ಚಿಗುರೊಡೆದಿತ್ತು. ಕೆಳ ಮಧ್ಯಮ ವರ್ಗದಿಂದ ಬರುವ ಯುವಕರು ಕಾಣುವ ಕನಸುಗಳು ಅವರನ್ನು ಬೆಂಬಿಡದೆ ಕಾಡಿದ್ದು ಉಂಟು.

ಆಟೊಮೊಬೈಲ್ ಎಂಜಿನಿಯರಿಂಗ್‌ನಲ್ಲಿ ಸೃಜನಾತ್ಮಕ ವಿನ್ಯಾಸದ ಕಲಿಕೆಗೆ ಮುಂದಾದರು. ಆಗ ಬೆಂಗಳೂರಿನ ಎಂ.ಎಸ್.ರಾಮಯ್ಯ ಅಡ್ವಾನ್ಸ್ಡ್ ಸ್ಟಡೀಸ್ ಕಾಲೇಜಿಗೆ ಸೇರ್ಪಡೆಗೊಂಡರು.

'ಆರ್ಥಿಕ ಭದ್ರತೆಯೇ ನನ್ನ ಮುಂದಿದ್ದ ಮೊದಲ ಗುರಿಯಾಗಿತ್ತು. ಕಂಪ್ಯೂಟರ್‌ನಲ್ಲಿ ವಿನ್ಯಾಸ ರಚಿಸುವ ಮೂಲಕ ವೃತ್ತಿ ಆರಂಭಿಸಿದೆ. ನಾನು ನೆಟ್ಟೂರ್ ತಾಂತ್ರಿಕ ತರಬೇತಿ ಫೌಂಡೇಶನ್‌ನಲ್ಲಿ ಓದುತ್ತಿದ್ದಾಗ ಹಿರಿಯ ವಿದ್ಯಾರ್ಥಿಗಳು ಇದೇ ವೃತ್ತಿ ಮಾಡುತ್ತಿದ್ದರು. ನಾನು ಕೂಡ ಅವರಿಂದ ಪ್ರೇರಣೆಗೊಂಡಿದ್ದು ಸಹಜವಾಗಿತ್ತು' ಎಂದು ನೆನಪಿಸಿಕೊಳ್ಳುತ್ತಾರೆ.

ಟಾಟಾ ಎಲ್ಕ್ಸಿ ಕಂಪನಿಯಲ್ಲಿ ಕೆಲಸ ನಿರ್ವಹಿಸುವಾಗ ಅಲ್ಲಿನ ಸಹೋದ್ಯೋಗಿಗಳು ಮತ್ತು ಸ್ನೇಹಿತರ ಪ್ರೇರಣೆಯಿಂದ ಅವರ ಆಟೊಮೋಟಿವ್ ವಿನ್ಯಾಸದತ್ತ ಹೊರಳಿದರು.



ಕಾರಿನ ವಿನ್ಯಾಸ ರೂಪಿಸುವ ಕುರಿತಂತೆ ವಿನ್ಯಾಸಗಾರನಿಗೆ ಸ್ಪಷ್ಟತೆ ಮುಖ್ಯ. ಆಗಷ್ಟೇ ನಿರ್ದಿಷ್ಟ ಗುರಿ ಸಾಧನೆ ಸಾಧ್ಯ. ಕಾರಿನ ಹೊರಭಾಗದ ವಿನ್ಯಾಸದ ವೇಳೆ ಆ ಸರಕು ಮತ್ತು ಕಂಪನಿಯ ಬ್ರ್ಯಾಂಡ್ ಮೌಲ್ಯ, ಗ್ರಾಹಕರ ಅಭಿರುಚಿ ಬಗ್ಗೆಯೂ ಸ್ಪಷ್ಟ ತಿಳಿವಳಿಕೆ ಇರಬೇಕು ಎಂಬುದು ಅವರ ನಂಬಿಕೆ.

'ವಿನ್ಯಾಸದ ಬಗ್ಗೆ ಕಾಗದ ಅಥವಾ ಪರದೆ ಮೇಲೆ ಕಲಾತ್ಮಕವಾಗಿ ರೇಖಾಚಿತ್ರಗಳ ಮೂಲಕ ಬಿಡಿಸಬೇಕು. ನಮ್ಮ ಸ್ಮೃತಿಪಟಲದಲ್ಲಿ ಮೂಡಿದ್ದು ಪರದೆ ಮೇಲೆ ಸಾಕಾರಗೊಂಡರೆ ವಿನ್ಯಾಸಗಾರನಿಗೆ ಮುಕ್ಕಾಲು ಪಾಲು ಯಶಸ್ಸು ಲಭಿಸಿದಂತೆ. ಆದರೆ, ಬಹಳಷ್ಟು ಸ್ಟುಡಿಯೊಗಳು ಈ ರಚನೆಯ ಹೊರತಾಗಿಯೂ ಮತ್ತಷ್ಟು ನಿರೀಕ್ಷೆಗಳನ್ನು ಹೊಂದಿರುತ್ತವೆ' ಎಂಬುದು ಅವರ ಅನುಭವದ ಸಾರ.

ಇದಕ್ಕೆ ಅವರು ಸ್ಪೋರ್ಟ್ಸ್ ಕಾರುಗಳ ವಿನ್ಯಾಸವನ್ನು ನಿದರ್ಶನ ನೀಡುತ್ತಾರೆ. ಈ ಕಾರುಗಳ ಬಾಹ್ಯರೂಪ ಸೇರಿ ಹಲವು ಅಂಶಗಳು ವಿಭಿನ್ನವಾಗಿರುತ್ತವೆ. ಆದರೆ, ಎಸ್‌ಯುವಿ ಅಥವಾ ಸಣ್ಣ ಮಾದರಿಯ ಕಾರುಗಳಲ್ಲಿ ವಿನ್ಯಾಸದಲ್ಲಿ ಅಷ್ಟೊಂದು ಭಿನ್ನತೆ ಕಾಣುವುದಿಲ್ಲ ಎನ್ನುತ್ತಾರೆ.

ಕಾರಿನ ವಿನ್ಯಾಸದ ವೇಳೆ ಆಟೊಮೋಟಿವ್ ಲೈಟಿಂಗ್ ವ್ಯವಸ್ಥೆಯ ನಿರ್ಣಾಯಕವಾದುದು. ಇದು ಪ್ರತಿಯೊಂದು ವಾಹನದ ಅವಿಭಾಜ್ಯ ಅಂಗ. ರಾತ್ರಿ ವೇಳೆಯಲ್ಲಿ ಸುರಕ್ಷಿತವಾಗಿ ಚಾಲನೆಗೆ ಇದರ ಅವಶ್ಯಕತೆ ಹೆಚ್ಚು. ಚಾಲಕರು ರಸ್ತೆಯಲ್ಲಿ ಸರಿಯಾಗಿ ಸಾಗಲು ಮತ್ತು ಇತರೆ ರಸ್ತೆ ಬಳಕೆದಾರರಿಗೆ ವಾಹನವನ್ನು ಗೋಚರಿಸುವಂತೆ ಮಾಡಲು ಅತ್ಯಗತ್ಯ. ವಾಹನದ ಸೌಂದರ್ಯ ಹೆಚ್ಚಿಸುವಲ್ಲಿಯೂ ಇದರ ಪಾತ್ರ ನಿರ್ಣಾಯಕ ಎಂಬುದು ಅವರ ವಿವರಣೆ.

ಎರಡು ದಶಕಗಳ ಆಟೊಮೋಟಿವ್ ವಿನ್ಯಾಸದ ಬಗ್ಗೆ ಹೆಚ್ಚಿನ ಮಾಹಿತಿ ಮತ್ತು ಸವಲತ್ತು ಸಿಗುತ್ತಿರಲಿಲ್ಲ. ಅನುಭವಿಗಳು ನೀಡುತ್ತಿದ್ದ ಮಾಹಿತಿಗಳೇ ಕಲಿಕೆಗೆ ನೆರವಾಗುತ್ತಿದ್ದವು. ಆಟೊಮೋಟಿವ್ ವಿನ್ಯಾಸವು ಕೇವಲ ವಾಹನದ ಒಳಭಾಗ ಅಥವಾ ಹೊರಭಾಗದ ರೇಖಾಚಿತ್ರಗಳ ರಚನೆಗಷ್ಟೇ ಸೀಮಿತಗೊಂಡಿಲ್ಲ.

'ವಾಹನಗಳ ವಿನ್ಯಾಸದ ಸಾಮ್ರಾಜ್ಯ ಹೊಕ್ಕಿರುವುದು ಸುಲಭವೂ ಅಲ್ಲ. ಈಗ ತಂತ್ರಜ್ಞಾನ ಕ್ಷೇತ್ರ ಅಗಾಧವಾಗಿ ಬೆಳೆದಿದೆ. ಸದ್ಯ ಆನ್‌ಲೈನ್‌ನಲ್ಲಿ ಈ ಬಗ್ಗೆ ಮಾಹಿತಿಯ ಮಹಾಪೂರವೇ ಸಿಗುತ್ತಿದೆ. ಈ ಕ್ಷೇತ್ರಕ್ಕೆ ಬರುವ ಹೊಸಬರು ಇದರ ಪ್ರಯೋಜನ ಪಡೆದುಕೊಳ್ಳಬೇಕಿದೆ. ಅಂದಹಾಗೆ ಈ ಜ್ಞಾನ ಒಂದೇ ಗುಟುಕಿಗೆ ದಕ್ಕುವುದಿಲ್ಲ. ಇಲ್ಲಿ ಮ್ಯಾರಥಾನ್ ಮಾಡುತ್ತಲೇ ಕರಗತ ಮಾಡಿಕೊಳ್ಳಬೇಕು' ಎಂಬುದು ಅವರ ಸಲಹೆ.

ಮೊದಲ ಓದು

ಯೋಚಿಸಲು ಪ್ರಚೋದಿಸುವ ಕಥೆಗಳು...

ತೊಟ್ಟು ಕ್ರಾಂತಿ ಎಂಟು ಕತೆಗಳ ಸಂಕಲನ. ಪ್ರತಿಯೊಂದು ಕತೆಯೂ ರಾಷ್ಟ್ರಗಳ ಸೀಮೆ, ಎಲ್ಲೆಯನ್ನೂ ಮೀರಿ, ಮನುಷ್ಯನ ಆಂತರಿಕ ತುಮುಲ, ಗೊಂದಲವನ್ನು ಹರಡುತ್ತ ಹೋಗುತ್ತದೆ. ಕತೆಗಳ ಪಾತ್ರಗಳಿಲ್ಲಿ, ನಮ್ಮದೇ ವಲಯದಲ್ಲಿರುವಂತೆ ಕಂಡು ಬರುತ್ತವೆ. ವಂಚನೆಯ ಕಾರ್ಪೊರೇಟ್ ಜಗತ್ತು, ಸ್ನೇಹವೆಂಬುದು ಅನುಕೂಲಸಿಂಧುವಾಗುವ ಕಥಾಸಂಕಲನದ ಹೆಸರಿರುವ ಕಥಾ ಹಂದರ ಔದ್ಯೋಗಿಕ ಪ್ರಪಂಚದ ಹಲವಾರು ಸ್ಪರ್ಧೆಗಳನ್ನು ಬಿಚ್ಚಿಡುತ್ತದೆ. ಟ್ಯಾಟು ಅಥವಾ ಪಿಂಕಿ ಕತೆಗಳು ಮಮತೆ, ಬಾಂಧವ್ಯ ಮತ್ತು ಬಂಧಗಳ ನಡುವಿನ ಸಂಘರ್ಷವನ್ನು ಸ್ಪಷ್ಟವಾಗಿಯೇ ನವಿರಾದ ಭಾಷೆಯಲ್ಲಿ ಹೇಳುತ್ತ ಹೋಗುತ್ತವೆ.

ಎಂಟೂ ಕತೆಗಳು ವಿಭಿನ್ನ. ವಿಶಿಷ್ಟ ಭಾಷಾ ಪ್ರಯೋಗ. ಉತ್ತರ ಕನ್ನಡದ ಭಾಷೆಯಿಂದ, ಈ ಜೆನ್ ಎಕ್ಸ್, ಜೀಗಳ ಸ್ಲ್ಯಾಂಗ್‌ವರೆಗೂ ಎಲ್ಲವನ್ನೂ ಕಾವ್ಯ ದುಡಿಸಿಕೊಂಡಿದ್ದಾರೆ. ಈ ತಲೆಮಾರುಗಳ ನಡುವಿನ ಮೌಲ್ಯ ಮತ್ತು ಬಾಂಧವ್ಯಗಳ ನಡುವಿನ ಸಂಘರ್ಷ ಈ ಕತೆಗಳಲ್ಲಿ ಎದ್ದು ಕಾಣುತ್ತವೆ. ಹೆಣ್ತನ ಮತ್ತು ಹೆಣ್ಣುಮಕ್ಕಳ ಲೋಕದಲ್ಲಿ ಸಂಚರಿಸುವ ಈ ಕತೆಗಳು ಒಂದೇ ಗುಕ್ಕಿಗೆ ಓದುವಂಥದ್ದಲ್ಲ. ಪ್ರತಿ ಕತೆಯೂ ಒಂದೊಂದು ಆಯಾಮದಲ್ಲಿ ಯೋಚಿಸಲು ಪ್ರಚೋದಿಸುವಂತಿವೆ. ರಾಘವೇಂದ್ರ ಪಾಟೀಲ ಕಥಾ ಪ್ರಶಸ್ತಿ ಪಡೆದಿರುವ ಈ ಸಂಕಲನ ಕಾವ್ಯರ ಎಂಟನೆಯ ಕೃತಿ ಆಗಿದೆ.



ಪು: 148
₹180

ತೊಟ್ಟು ಕ್ರಾಂತಿ
ಲೇ: ಕಾವ್ಯ ಕಡಮೆ
ಪ್ರ: ಛಂದ ಪುಸ್ತಕ
ಸಂ: 9844422782

ಸಿನಿಮಾವೊಂದು ಕಾದಂಬರಿಯಾಗಿ...



ಪು: 150
₹120

ನಾತಿಚರಾಮಿ
ಲೇ:ಎನ್.ಸಂಧ್ಯಾರಾಣಿ
ಪ್ರ: ವೀರಲೋಕ
ಸಂ: 70221 22121

ಕಾದಂಬರಿಯೊಂದು ಸಿನಿಮಾ ಆಗಿರುವ ಉದಾಹರಣೆಗಳು ಸಾಕಷ್ಟಿವೆ. ಮೊದಲು ಸಿನಿಮಾ ಆಗಿ ನಂತರ ಕಾದಂಬರಿಯಾಗಿರುವ ಪ್ರಯೋಗ 'ನಾತಿಚರಾಮಿ'ಯದ್ದು. ಸಿನಿಮಾ ನೋಡದೇ ಓದಿದರೆ ಮೂರು ಹೆಣ್ಣುಮಕ್ಕಳ ಕತೆ, ಏಕ್ತಾರಿಯಲ್ಲಿ ತಂದಿರುವ ಸುಂದರ ಓದು ಇದಾಗುತ್ತದೆ. ಗೌರಿ, ಲಕ್ಷ್ಮಮ್ಮ ಮತ್ತು ಸುಮಾ ಮೂವರೂ ಒಂದೊಂದು ಬಗೆಯ ಕತೆಯನ್ನು ಹೇಳಿಕೊಡುತ್ತಾರೆ. ಹೆಣ್ಣುಮಕ್ಕಳ ಸೆಕ್ಶುಯಾಲಿಟಿ ಎಂದು ಒಂದೇ ಪದದಲ್ಲಿ ಇದನ್ನು ಹೇಳಬಹುದು. ಗೌರಿಗೆ ದೇಹದ ಅಗತ್ಯಗಳನ್ನು ಪೂರೈಸಿಕೊಳ್ಳುವ ಜಿಜ್ಞಾಸೆ. ಲಕ್ಷ್ಮಮ್ಮನಿಗೆ ಗಂಡ ಅನ್ಯ ಧರ್ಮದ ಮಹಿಳೆಯಲ್ಲಿ ಕಾಣುವ ಆಕರ್ಷಣೆ ಏನು ಎಂಬ ಪ್ರಶ್ನೆಯೊಂದಿಗೆ ಏಗುವುದು, ಸುಮಾ ಒಲ್ಲದ ಗಂಡನಿಂದ ಒಲವನ್ನು ನಿರೀಕ್ಷಿಸುವ ಜೀವ. ಈ ಮೂವರೂ ಒಂದೊಂದು ಸ್ತರದಲ್ಲಿ ಮಹಿಳೆಯ ಬಯಕೆ, ದೇಹದ ಬೇಡಿಕೆ, ಸಾಮಾಜಿಕ ಮನ್ನಣೆ ಇವೆಲ್ಲವನ್ನೂ ಒಟ್ಟೊಟ್ಟಿಗೆ ಚರ್ಚಿಸುತ್ತ ಹೋಗುತ್ತದೆ. ಸಿನಿಮಾ ನೋಡಿ, ಪುಸ್ತಕ ಓದುವವರಿಗೆ ಸಿನಿಮಾ ಮನಸಿನಲ್ಲಿಯೇ ರಿವೈಂಡ್ ಆಗುತ್ತಿರುತ್ತದೆ. ಸಿನಿಮಾ ನೋಡದೆಯೇ ಓದುವವರಿಗೆ ಹೆಣ್ಣುಮಕ್ಕಳ ಮನೋವ್ಯಾಪಾರಗಳು, ಗಂಡು ಮಕ್ಕಳ ವಾಂಛೆಗಳು, ಬದುಕನ್ನು ನೋಡುವ ಹೆಣ್ಣು ಮತ್ತು ಗಂಡು ನೋಟಗಳೆರಡೂ ವಿಭಿನ್ನವಾಗಿ ದಕ್ಕುತ್ತ ಹೋಗುತ್ತವೆ.

ಲೇಖಕಿ ಸಂಧ್ಯಾರಾಣಿ ಗಂಡು ಹೆಣ್ಣಿನ ಮನೋವ್ಯಾಪಾರವನ್ನು ಮಾತುಗಳಲ್ಲಿ ವ್ಯಕ್ತಪಡಿಸುತ್ತಲೇ ಹಲವಾರು ಅವ್ಯಕ್ತ ಭಾವಗಳನ್ನು ಅನಾವರಣಗೊಳಿಸುತ್ತ ಹೋಗುತ್ತಾರೆ. ಕಾಫಿ, ವಿಂಡ್‌ಚೈಮ್, ಲಿಲ್ಲಿ ಹೂ ಪ್ರತಿಮೆಗಳಂತೆಯೂ, ರೂಪಕಗಳಾಗಿಯೂ, ಪುಸ್ತಕದಲ್ಲಿ ಪಾತ್ರಗಳಂತೆಯೇ ಕಾಣಿಸಿಕೊಳ್ಳುತ್ತವೆ. ಮನಸೊಪ್ಪಿದರೆ ಮಾತ್ರ ಮಿಲನ, ಇಲ್ಲದಿದ್ದಲ್ಲಿ ಅದು ಕ್ರಿಯೆ ಮಾತ್ರ. ಆ ಕ್ರಿಯೆಗೂ ಮನಸು ಸಿದ್ಧವಾಗಬೇಕು. ಇಲ್ಲದಿದ್ದಲ್ಲಿ ಸುಮಾ ಹೇಳುವಂತೆ, ಕಮೋಡ್ ಮೇಲೆ ಕುಳಿತು ಏಳುವಂಥ ಕ್ರಿಯೆಯಾಗುತ್ತದೆ. ದೈಹಿಕ ಬೇಡಿಕೆಯಾಗಿದ್ದೂ, ಅಗತ್ಯವಾಗಿದ್ದೂ, ಸಾಂಗತ್ಯದಲ್ಲಿ ನರಳಿಯೂ ಅರಳುವ, ಅರಳದೇ ನರಳುವ ಕಥನ ಈ ನೂರೈವತ್ತು ಪುಟಗಳಲ್ಲಿ ಓದುಗರನ್ನು ಹಿಡಿದಿಡುತ್ತದೆ.

ಕಾಮ, ಜಗತ್ತಿನ ಎಲ್ಲ ಭಾವಗಳನ್ನೂ ಹಿಡಿದಿಡುವಂತೆ, ಅದೇ ಎಳೆಯ ಸುತ್ತಲೇ ಸಮಾಜ, ತಂತ್ರಜ್ಞಾನ, ಆ್ಯಪ್‌ಗಳು, ಮನಃಸ್ಥಿತಿಗಳು, ಸಾಮಾಜಿಕ ಚೌಕಟ್ಟುಗಳು, ಹೆಣ್ಣುಮಕ್ಕಳ ಅಂತರಂಗ, ಗಂಡಸರ ಅಂತರಾಳ ಎಲ್ಲವನ್ನೂ ಹೆಣೆದಿಟ್ಟಿರುವ ಕಾದಂಬರಿ ಇದು.

ದ್ರೌಪದಿಯ ಅಂತರಾಳದ ಮಾತುಗಳು


ಮಹಾಕಾವ್ಯಗಳಲ್ಲಿ ಅಗ್ರಸ್ಥಾನ ಪಡೆದುಕೊಂಡಿರುವ 'ಮಹಾಭಾರತ'ದ ಪ್ರಮುಖ ಪಾತ್ರದ ಹಿಂದಿರುವ ಒಳನೋಟವೇ 'ಪಾಂಚಾಲಿಯ ಭಾವಾಗ್ನಿ'.

ಮೇಲ್ನೋಟಕ್ಕೆ ದಾಯಾದಿ ಕಲಹ, ಆಸ್ತಿ ಜಗಳ, ಮತ್ಸರ, ಅಧಿಕಾರ ದಾಹದ ಕಥೆ ಎನಿಸಿದರೂ ಪ್ರತಿ ಪಾತ್ರವೂ ನೀಡುವ ಹೊಳಹುಗಳು ಅನನ್ಯ. ಹಾಗಾಗಿ ಸರ್ವ ಕಾಲಕ್ಕೂ 'ಮಹಾಭಾರತ'ದ ಮನನ ಇಷ್ಟವೆನಿಸುತ್ತದೆ. ಇಂಥ ಮಹಾಕಾವ್ಯವನ್ನು ಒಂದು ದಿಕ್ಕಿನಿಂದ ಕಂಡರೆ ಕೇಂದ್ರಬಿಂದು ಎನಿಸುವ ದ್ರೌಪದಿ ಪಾತ್ರದ ಹುಟ್ಟು, ಅವಳ ರೋಷಾಗ್ನಿಯ ಭಾವ, ಅವಮಾನ, ಸಂಕಟ ಎಲ್ಲವನ್ನೂ ಹಿಡಿದಿಡುವ ಪ್ರಯತ್ನವಾಗಿ ಈ ಪುಸ್ತಕ ಕಾಣುತ್ತದೆ.

ಐದು ಮಹಾಪತಿವ್ರತೆಯರ ಅಂಶವಾಗಿ ಜನಿಸುವ ದ್ರೌಪದಿ ಪುತ್ರಿಕಾಮೇಷ್ಠಿಯಾಗದಲ್ಲಿ ಯಾಜ್ಞಸೇನಿಯಾಗಿ ಅವತರಿಸುತ್ತಾಳೆ. ಸುಡು ಸುಡು ಬೆಂಕಿಯಲ್ಲಿ ಜನ್ಮ ತಳೆದರೂ ಗುಲಾಬಿ ಎಸಳಿನಂಥ ಮನಸ್ಸುಳ್ಳವಳು. ಸಾಮಾಜಿಕ ಚೌಕಟ್ಟುಗಳ ಕಾರಣಕ್ಕೆ ಕರ್ಣನಲ್ಲಿ ಹುಟ್ಟಿದ ಅನುರಾಗವನ್ನು ಸದ್ದಿಲ್ಲದೆ ನುಂಗಿಕೊಂಡು, ಕುಂತಿಯ ಮಾತಿನ ಅನುಸಾರ ಪಂಚ ಪಾಂಡವರನ್ನು ಪತಿಯನ್ನಾಗಿ ಸ್ವೀಕರಿಸುತ್ತಾಳೆ. ಅದಕ್ಕಾಗಿ ಅವಳ ಪೂರ್ವಜನ್ಮದ ವೃತ್ತಾಂತವನ್ನು ಹೇಳಲಾಗಿದೆ. ಐವರನ್ನು ಪತಿಯಾಗಿ ಸ್ವೀಕರಿಸಿದ್ದಕ್ಕೆ ದ್ರೌಪದಿಯನ್ನು ಅವಹೇಳನ ಮಾಡುವ ಪ್ರಸಂಗವಿದೆ. ದಾಯಾದಿಗಳ ನಡುವೆ ಸಣ್ಣತನಗಳು, ಈರ್ಷ್ಯೆ, ಅಹಂಕಾರಗಳು ಎಲ್ಲ ಕಾಲಕ್ಕೂ ಇರುವಂಥದ್ದೆ. ಸಣ್ಣತನದ ಹಿಂದಿನ ಕಾರಣಗಳನ್ನು ಲೇಖಕಿ ವಿಸ್ತೃತವಾಗಿ ವಿಶ್ಲೇಷಿಸಿದ್ದಾರೆ.

ಮಹಾಕಾವ್ಯ ಎಂದಾಕ್ಷಣ ದೊಡ್ಡ ಶಬ್ದಭಂಡಾರಗಳಲ್ಲಿರುತ್ತದೆ; ಇದು ಸಾಮಾನ್ಯ ಓದುಗರಿಗಲ್ಲ ಎಂಬ ವಿಚಾರವನ್ನು ಮುರಿದುಕಟ್ಟಿದ್ದಾರೆ ಭಾಗ್ಯಕೃಷ್ಣಮೂರ್ತಿ. ಕೆಲವು ಕಡೆ ಕಥೆಯನ್ನು ಬಹಳ ಸರಳವಾಗಿ ಹೇಳಲು ಪ್ರಯತ್ನಿಸಿದ್ದಾರೆ. ಆದರೆ, ದ್ರೌಪದಿಯ ಸಂಕಟಗಳನ್ನು ಇನ್ನಷ್ಟು ಸಮರ್ಪಕವಾಗಿ ಕಟ್ಟಿಕೊಡಬಹುದಿತ್ತು. ಆ ಪಾತ್ರದ ನೆಲೆಯಲ್ಲಿ ಅವಳ ಧ್ವನಿಯನ್ನು ಬಿಂಬಿಸುವ ಅವಕಾಶವನ್ನು ಬಿಟ್ಟುಕೊಡಲಾಗಿದೆ.

ಪಾಂಚಾಲಿ ಪಾತ್ರವನ್ನು ಹೊರಗಿನ ನಿಂತು ನೋಡುವ ಬದಲು ಪಾತ್ರವೇ ತನ್ನ ಒಳ-ಹೊರಗನ್ನು ಅರ್ಥೈಸಿಕೊಳ್ಳುವ ರೀತಿಯಲ್ಲಿ ಕಥನವನ್ನು ಕಟ್ಟಿಕೊಟ್ಟಿದ್ದರೆ ಪುಸ್ತಕದ ಶೀರ್ಷಿಕೆಗೆ ನಿಜವಾದ ಅರ್ಥ ಒದಗಿ ಬರುತ್ತಿತ್ತು.



ಪು: 151
₹150

ಪಾಂಚಾಲಿಯ ಭಾವಾಗ್ನಿ
ಲೇ:ಭಾಗ್ಯ ಕೃಷ್ಣಮೂರ್ತಿ
ಪ್ರ: ಸಪ್ನ ಬುಕ್‌ಹೌಸ್
ಸಂ: 080 40114455

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಲೌಹವರ್ಷ

ಲೌಹ (ಗು). 1. ಲೋಹದಿಂದ ಮಾಡಿದ; ಲೋಹ ಸಂಬಂಧವಾದ 2. ಕಬ್ಬಿಣದ (ಸಂ). ಹೆಸರೊಲ್ಲದ ಓರ್ವ ಭಾರತೀಯ ದಳಪತಿಯ ಸಾಹಸ ಕುರಿತು ಕುವೆಂಪು ರಚಿಸಿರುವ ಕವನ 'ಎತ್ತು ಆರತಿ, ಓ ಭಾರತಿ!' ಅವನು ತನ್ನ ಮೆಷಿನ್‌ಗನ್‌ನಿಂದ ಚೀಣಿ ಸೈನಿಕರನ್ನು ಹೊಡೆದು ಉರುಳಿಸುತ್ತಿರುವ ವೀರಚಿತ್ರಣವನ್ನು ನೀಡುವಾಗ ಕುವೆಂಪು ಅವರು 'ಲೌಹವರ್ಷ' ಪದ ಪ್ರಯೋಗಿಸಿದ್ದಾರೆ.

ಮೆಷಿನ್‌ಗನ್ನು ಲೋಹದಿಂದ ಮಾಡಿದ ಗುಂಡುಗಳ ಮಳೆ ಸುರಿಸಿತು ಎಂಬುದನ್ನು ಕವಿ 'ಲೌಹವರ್ಷ' ಎಂದು ಬಣ್ಣಿಸಿ, ಅದರ ನಿರಂತರ ಪ್ರವಾಹದ ಅರಿವನ್ನುಂಟು ಮಾಡಿದ್ದಾರೆ.

'ಕುದಿವ ನನ್ನ ಮೆಷಿನ್‌ಗನ್ನ
ಲೌಹವರ್ಷ ಕರೆಯಿತು
ಕೆಂಪು ಚೀಣದೊಡಲ ಕೋಡಿ
ಒಡೆದು ಹೆಪ್ಪುಗಟ್ಟಿತು;
ಹಳದಿ ಜನರ ಹೆಣದ ಬಣಬೆ
ಸುತ್ತ ಕೋಂಟೆ ಬಿದ್ದಿತು!' (ಎತ್ತು ಆರತಿ, ಓ ಭಾರತಿ!- ಪ್ರೇತ-ಕ್ಯೂ)

ಗಿರಿನಿತಂಬ

ಗಿರಿನಿತಂಬ (ನಾ), ಬೆಟ್ಟದ ಮಗ್ಗುಲು, -ತಪ್ಪಲು; ಪರ್ವತದ ಇಳಕಲು ಪ್ರದೇಶ.

(ಗಿರಿ + ನಿತಂಬ)

ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋದ ನಂತರ ನಿರ್ಜನ ಕಾಡಿನಲ್ಲಿ ರಾಮಲಕ್ಷ್ಮಣರು ಸೀತೆಯನ್ನು ಹುಡುಕಿದರು. ಅಷ್ಟು ಹೊತ್ತಿಗೆ ಸಂಜೆಯು ಕೆಂಪು ಓಕುಳಿಯನ್ನು ಎರಚಿತು. ಆಗ ಸ್ವಲ್ಪ ದೂರದ ಪರ್ವತದ ಇಳಕಲಿನಂತಹ ಎತ್ತರದಲ್ಲಿ ವೈಡೂರ್ಯ ಸಮ ಹುಲ್ಲಿನ ಮೇಲೆ ವಜ್ರಗಳನ್ನು ಹರಡಿದ್ದಾರೊ ಎಂಬಂತೆ ಸೂರ್ಯನ ಕಾಂತಿಯಲ್ಲಿ ಮಣಿಗಳು ಮಿನುಗುತ್ತಿದ್ದವು. ಹೋಗಿ ನೋಡಲು ಅವು ಜಟಾಯುವಿನ ನಖಾಘಾತಕ್ಕೆ ಚೆಲ್ಲಿದ ರಾವಣನ ವಿಮಾನದ ಅಲಂಕೃತ ಮಣಿಗಳಾಗಿದ್ದವು. ಅದು ಅವರಿಗೆ ಲಲನೆ ಸೀತೆಯ ನೆಲೆಗೆ ಮೊದಲ ಸಾಕ್ಷಿಯಾಯಿತು.

ಕುವೆಂಪು ಅವರು ಬೆಟ್ಟದ ತಪ್ಪಲನ್ನು 'ಗಿರಿನಿತಂಬ' ಎಂಬ ಪದದಿಂದ ಸೂಚಿಸಿದ್ದಾರೆ.

ಅನತಿ ದೂರದ ಗಿರಿನಿತಂಬ ಸದೃಶದೊಂದೆಳ್ತರದಿ,
ವೈಡೂರ್ಯ ಸಮ ಶಾದ್ವಲದ ಮೇಲೆ, ಪರಪಿದರೊ
ವಜ್ರಗಳನೆನೆ ತಪನ ಕೋಟೀರ ಕಾಂತಿಯೊಳ್
ಕಿಡಿಕಿಡಿ ಪೊಳೆದುದೇನೊ ಕೌತುಕಂ!

ಮಾಯಾನಗರಿ ಸಿಂಗಪುರದ ಹಸಿರು ಕಾಳಜಿ

ಸಿಂಗಪುರದಲ್ಲಿ ಗಗನಚುಂಬಿ ಕಟ್ಟಡಗಳನ್ನಷ್ಟೇ ಅಲ್ಲ, ಕಣ್ಮರೆಯಾಗುತ್ತಿರುವ ಮಳೆ ಕಾಡನ್ನು 'ಕ್ಲೌಡ್ ಫಾರೆಸ್ಟ್ ಡೂಮ್'ನೊಳಗೆ ನೋಡಬಹುದು. ಅದರೊಳಗೊಂದು ಕೃತಕ ಜಲಪಾತ ಅಚ್ಚರಿ ಮೂಡಿಸುತ್ತದೆ. ಜನನಿಬಿಡ ನಗರದ ಮಧ್ಯದಲ್ಲಿಯೇ ದಟ್ಟ ಕಾಡಿನಲ್ಲಿ ಹಾದು ಹೋಗುತ್ತಿರುವಂಥ ಅನುಭವವನ್ನೂ ಈ ಫಾರೆಸ್ಟ್ ಡೂಮ್ ನೀಡುತ್ತದೆ.



ಸೌತ್ ಗಾರ್ಡನ್ ಬೇನಲ್ಲಿರುವ 'ಕ್ಲೌಡ್ ಫಾರೆಸ್ಟ್ ಡೂಮ್' ಹಾಗೂ 'ಫ್ಲವರ್ ಡೂಮ್'

ಎಚ್ ಎಸ್ ನವೀನ ಕುಮಾರ್ ಹೊಸದುರ್ಗ

ಆಧುನಿಕತೆಯೇ ಮೈವೆತ್ತಂತ್ತಿರುವ ಸಿಂಗಪುರ ಪ್ರಪಂಚದ ಎಲ್ಲಾ ಭಾಗದ ಪ್ರವಾಸಿಗರ ಸ್ವರ್ಗ. ಕಾರ್ಪೊರೇಟ್ ಜಗತ್ತಿನ ಹತ್ತು ಹಲವು ಬಹುರಾಷ್ಟ್ರೀಯ ಆರ್ಥಿಕ ಕಂಪನಿಗಳ ಮುಖ್ಯ ಕೇಂದ್ರ. ಕೇವಲ 700 ಚದರ ಕಿಲೊಮೀಟರ್ ವಿಸ್ತೀರ್ಣದ 50 ಲಕ್ಷ ಜನಸಂಖ್ಯೆಯ ಈ ನಗರ ಕಮ್ ದೇಶ ನೀರನ್ನು ಪಕ್ಕದ ಮಲೇಷ್ಯಾದಿಂದ ತರಿಸಿಕೊಳ್ಳುತ್ತದೆ. ಮಳೆ ಕೊಯ್ಲಿನ ವ್ಯವಸ್ಥೆ ಹಾಗೂ ಕೊಳಚೆ ನೀರಿನ ಶುದ್ಧೀಕರಣದ ಮೂಲಕ ನೀರಿನ ಮರುಬಳಕೆಯನ್ನು ಪರಿಣಾಮಕಾರಿಯಾಗಿ ಮಾಡಿಕೊಳ್ಳಲಾಗುತ್ತದೆ.

ಇಲ್ಲಿ ಏನನ್ನೂ ಬೆಳೆಯುವುದಿಲ್ಲ, ಯಾವುದೇ ರೀತಿಯ ಕೈಗಾರಿಕೆಗಳೂ ಇಲ್ಲ. ಪ್ರತಿಯೊಂದನ್ನೂ ಆಮದು ಮಾಡಿಕೊಳ್ಳುವ ಸಿಂಗಪುರ ಸುಂದರವಾಗಿ, ಶ್ರೀಮಂತವಾಗಿ ಬೆಳೆದಿದ್ದು ಹೇಗೆ? ಉತ್ತರವೆಂದರೆ ಈ ದೇಶದ ಜನರಲ್ಲಿರುವ ಅಪಾರವಾದ ಹಸಿರು ಕಾಳಜಿ. ಭೂಮಿಯ ಸಮಭಾಜಕ ವೃತ್ತದಿಂದ ಕೇವಲ ಒಂದು ಡಿಗ್ರಿ ಕೆಳಗೆ ಇರುವ ಈ ದೇಶದಲ್ಲಿ ಸಹಜವಾಗಿಯೇ ಬಿರು ಬಿಸಿಲು. ಆದರೆ ಭೌಗೋಳಿಕ ತಾಪಮಾನ ಅತಿಯಾಗಿ ಹೆಚ್ಚುತ್ತಿರುವ ಈ ಸಂದರ್ಭದಲ್ಲಿಯೂ ಇಲ್ಲಿನ ಉಷ್ಣತೆ 37 ಡಿಗ್ರಿ ಸೆಲ್ಸಿಯಸ್ ದಾಟಿಲ್ಲ! ಸಿಂಗಪುರ, ಏಷ್ಯಾದ ಅತ್ಯಂತ ಹಸಿರು ನಗರ ಎನ್ನುವ ಖ್ಯಾತಿಯನ್ನು ಪಡೆದಿದೆ. ವಿಶ್ವದ ಹಸಿರು ನಗರ ಸೂಚ್ಯಂಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. 1965ರಲ್ಲಿ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದ ಈ ದೇಶದಲ್ಲೂ ಅಪಾರವಾದ ಕೊಳಚೆಯಿತ್ತು. ಗಲೀಜಿನ ಕಾಲುವೆಗಳಿದ್ದವು. ಮಣ್ಣು ತುಂಬಿದ ನದಿಗಳಿದ್ದವು. ನಿಯಂತ್ರಣಕ್ಕೆ ಸಿಗದ ತ್ಯಾಜ್ಯ ನೀರಿನ ಹರಿವಿತ್ತು. ಆದರೆ ದೂರದೃಷ್ಟಿ ಹೊಂದಿದ್ದ ಮೊದಲ ಪ್ರಧಾನಿ ಲೀ ಕ್ವ್ಯಾನ್ ಅವರ ಪ್ರಮುಖ ಆದ್ಯತೆ, ಸ್ವಚ್ಛ ಮತ್ತು ಹಸಿರು ಉದ್ಯಾನದ ನಗರವನ್ನಾಗಿಸುವುದು. ಹೀಗಾಗಿ ತಮ್ಮ 40 ವರ್ಷಗಳ ಆಡಳಿತದಲ್ಲಿ ಜನರಲ್ಲಿ ತಿಳಿವಳಿಕೆ ಮೂಡಿಸಿದರು. ವಿದ್ಯಾರ್ಥಿಗಳಲ್ಲಿ, ಯುವ ಸಮೂಹದಲ್ಲಿ ಇಂತಹ ಅವಶ್ಯಕತೆಯ ಅರಿವನ್ನು ತುಂಬುವ ಕೆಲಸವನ್ನು ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ನಿರಂತರವಾಗಿ ಮಾಡಿದರು. ಜನತೆ ಸಕಾರಾತ್ಮಕವಾಗಿ ಸ್ಪಂದಿಸಿದರು. ಇದರಿಂದಲೇ ಸಿಂಗಪುರ ಸಂಪೂರ್ಣ ಆಧುನಿಕತೆಯ ನಡುವೆಯೂ ಹಸಿರುಮಯವಾಗಿದೆ.

ಸಿಂಗಪುರದಲ್ಲಿರುವ ಎಸ್.ಇ.ಎ. ಅಕ್ವೇರಿಯಂನಲ್ಲಿ ಜಲಚರಗಳ ಜಗತ್ತು



ಇದಕ್ಕಾಗಿ 'ಹಸಿರು ಆಡಳಿತ' ಮಾದರಿಯನ್ನು ಸರ್ಕಾರ ಅಳವಡಿಸಿಕೊಂಡಿದೆ. ತನ್ನ ಪ್ರಜೆಗಳ ದೈಹಿಕ ಹಾಗೂ ಮಾನಸಿಕ ಆರೋಗ್ಯವೇ ದೇಶದ ಭವಿಷ್ಯ ಹಾಗೂ ಆಸ್ತಿ ಎಂದು ಈ ದೇಶ ದೃಢವಾಗಿ ನಂಬಿದೆ. ಅದಕ್ಕಾಗಿ ಪರಿಸರ ಸ್ನೇಹಿ ಹಸಿರು ವಾತಾವರಣದ ಸೃಷ್ಟಿ ಹಾಗೂ ಅದರ ಸಮರ್ಪಕ ನಿರ್ವಹಣೆಯೇ ಈ ದೇಶದ ಮುಖ್ಯ ಗುರಿಯಾಗಿದೆ. ಇಲ್ಲಿನ ರಸ್ತೆಗಳಲ್ಲಿ ಪೊಲೀಸರು ಎಲ್ಲೂ ಕಂಡು ಬರುವುದಿಲ್ಲ. ಆದರೆ ನಮ್ಮ ಚಲನವಲನ ಗಮನಿಸುವ ಕಣ್ಣುಗಳು ಇರುತ್ತವೆ. ಇಲ್ಲಿ ಕಂಡ ಕಂಡಲ್ಲಿ ಕಸ ಎಸೆದರೆ ದಂಡ ಗ್ಯಾರಂಟಿ. ಜೊತೆಗೆ ಒಂದು ತಿಂಗಳು ರಸ್ತೆ ಗುಡಿಸುವ ಶಿಕ್ಷೆ!

ಪ್ರವಾಸ

1971ರಲ್ಲಿ ಶುದ್ಧಗಾಳಿ ಕಾಯ್ದೆಯನ್ನು ಅಳವಡಿಸಿಕೊಂಡ ಈ ದೇಶ, 1973 ರಲ್ಲಿಯೇ ಪರಿಸರ ಸಚಿವಾಲಯವನ್ನು ಆರಂಭಿಸಿತು. ಹಾಗೆ ಮಾಡಿದ ಪ್ರಪಂಚದ ಮೊದಲ ದೇಶವೆಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. 1971ರಲ್ಲಿ 55,000ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟ ಸಿಂಗಪುರದ ಪ್ರಜೆಗಳು, 2014ರ ಹೊತ್ತಿಗೆ ಅದನ್ನು 14 ಲಕ್ಷಕ್ಕೆ ಏರಿಸಿದರು. ಈಗ ಅವರ ಗುರಿ 2030 ರ ವೇಳೆಗೆ ಸುಮಾರು 30 ಲಕ್ಷಕ್ಕೂ ಹೆಚ್ಚು ಗಿಡಗಳನ್ನು ನೆಡುವುದು. ಒಂದು ದಶಕಕ್ಕೆ 10 ಲಕ್ಷಕ್ಕೂ ಹೆಚ್ಚು ಗಿಡ ನೆಟ್ಟು ಪರಿಸರ ಉಳಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದೆ. ಈ ಗಗನಚುಂಬಿ ಕಟ್ಟಡಗಳ ಮಾಯಾನಗರಿ! ಹೀಗಾಗಿ ಈ ನಗರದ ಬೀದಿ ಬೀದಿಗಳಲ್ಲೂ ಗಿಡ ಮರಗಳನ್ನು ಹೇರಳವಾಗಿ ಕಾಣಬಹುದು. ಅಷ್ಟೇ ಏಕೆ ಇಲ್ಲಿನ ಎಲ್ಲಾ ಕಟ್ಟಡಗಳೂ ಹಸಿರುಮಯ.

ಇಲ್ಲಿ ಪ್ರಪಂಚದ ಅತಿ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳ ಕಚೇರಿಗಳಿವೆ. ಆ ಜಾಗಕ್ಕೆ ಬಿಸಿನೆಸ್ ಡಿಸ್ಟ್ರಿಕ್ಟ್ ಎಂದು ಕರೆಯಲಾಗುತ್ತದೆ. ಆದರೆ ಈ ಕಚೇರಿಗಳನ್ನು ಹೊಂದಿರುವ ಬಹುಮಹಡಿ ಕಟ್ಟಡಗಳಿಗೆ 2005 ರಲ್ಲಿ ಅಳವಡಿಸಲಾದ ಗ್ರೀನ್ ಮಾರ್ಕ್ ಸ್ಕೀಮ್ (GMS) ಪ್ರಮಾಣಪತ್ರ ವ್ಯವಸ್ಥೆ ಕಡ್ಡಾಯ. ಈ ಪ್ರಮಾಣಪತ್ರ ಅಂಕಗಳ ಆಧಾರದ ಮೇಲೆ ಕಟ್ಟಡಗಳನ್ನು ಸರ್ಟಿಫೈಡ್, ಗೋಲ್ಡ್, ಗೋಲ್ಡ್ ಪ್ಲಸ್ ಹಾಗೂ ಪ್ಲಾಟಿನಂ ಎಂಬುದಾಗಿ ವಿಂಗಡಿಸಲಾಗುತ್ತದೆ. ಈ ಕಟ್ಟಡಗಳಲ್ಲೆಲ್ಲ ಕಡ್ಡಾಯವಾಗಿ ಹಸಿರನ್ನು ಬೆಳೆಸಲೇಬೇಕು.

ಸಿಂಗಪುರದ ಸುಪ್ರಸಿದ್ಧ ಜ್ಯೂಯೆಲ್ ಚೆಂಗಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕಾಲಿಟ್ಟ ತಕ್ಷಣ ನಾವು ವೀಕ್ಷಿಸಿದ್ದು ಅಲ್ಲಿನ ಟರ್ಮಿನಲ್ ಒಂದರಲ್ಲಿರುವ 'ರೈನ್ ವೊರ್ಟೆಕ್ಸ್' ಎಂಬ ಮನಮೋಹಕ ಒಳಾಂಗಣ ಜಲಪಾತ. ಏಳು ಮಹಡಿಗಳ, ನಲವತ್ತು ಮೀಟರ್‌ಗಳ ಎತ್ತರದಿಂದ ತೆರೆದ ಗಾಜಿನ ಗೋಳದಿಂದ ಧುಮುಕುವ ಈ ಜಲಪಾತ ಪ್ರಪಂಚದ ಅತ್ಯಂತ ಎತ್ತರದ ಒಳಾಂಗಣ ಜಲಪಾತ. ಇದರ ಸುತ್ತಲೂ ವಿವಿಧ ಮರ ಗಿಡಗಳಿಂದ ಕಾಡಿನ ಕಣಿವೆಯನ್ನೇ ಸೃಷ್ಟಿ ಮಾಡಲಾಗಿದೆ. ಇದರಲ್ಲಿ ಪ್ರಪಂಚದ 120ಕ್ಕೂ ಹೆಚ್ಚು ಪ್ರಭೇದಗಳ ಎರಡು ಸಾವಿರಕ್ಕೂ ಹೆಚ್ಚು ಮರಗಳು ಹಾಗೂ ಹತ್ತು ಸಾವಿರಕ್ಕೂ ಹೆಚ್ಚು ಗಿಡ ಬಳ್ಳಿಗಳಿವೆ. ಸಿಂಗಪುರದಲ್ಲಿ ಕಾಲಿಡುತ್ತಿದ್ದಂತೆಯೇ ಅಲ್ಲಿನ ತಂಪು ನೀಡುವ ಹಸಿರು ವಾತಾವರಣ ಸ್ವಾಗತಿಸುತ್ತದೆ. ಪ್ರವಾಸೋದ್ಯಮವೇ ಇಲ್ಲಿನ ಆರ್ಥಿಕತೆಯ ಆಧಾರ ಸ್ತಂಭವಾಗಿರುವುದರಿಂದ ಇವೆಲ್ಲವೂ ಕೂಡ ಈ ದೇಶಕ್ಕೆ ವರಮಾನದ ಮೂಲ ಕೂಡ ಆಗಿವೆ.

ಇಲ್ಲಿನ ಸೌತ್ ಗಾರ್ಡನ್ ಬೇನಲ್ಲಿರುವ 'ಕ್ಲೌಡ್ ಫಾರೆಸ್ಟ್ ಡೂಮ್' ಹಾಗೂ 'ಫ್ಲವರ್ ಡೂಮ್'ಗಳು ವಿಶೇಷ ಹಸಿರು ಅನುಭವ ನೀಡುತ್ತವೆ. ಕಣ್ಮರೆಯಾಗುತ್ತಿರುವ ಮಳೆ ಕಾಡನ್ನು 'ಕ್ಲೌಡ್ ಫಾರೆಸ್ಟ್ ಡೂಮ್'ನಲ್ಲಿ ಮರುಸೃಷ್ಟಿ ಮಾಡಲಾಗಿದೆ. ಇದರ 6ನೇ ಅಂತಸ್ತಿನಿಂದ ಮಾನವ ನಿರ್ಮಿತ ಜಲಧಾರೆಯೊಂದನ್ನು ಕೆಳಗೆ ಧುಮ್ಮಿಕ್ಕುವಂತೆ ಮಾಡಿರುವುದು ರೋಮಾಂಚನಕಾರಿಯಾಗಿದೆ. ಇದನ್ನು ಮೇಲೇರಿ ನೋಡಲು ಸ್ಕೈವಾಕ್ ಇದೆ. ಸಂಪೂರ್ಣ ವ್ಯಾವಹಾರಿಕ, ಜನನಿಬಿಡ ಗಗನಚುಂಬಿ ಕಟ್ಟಡಗಳ ನಗರದ ಮಧ್ಯದಲ್ಲಿಯೇ ದಟ್ಟ ಕಾಡಿನಲ್ಲಿ ಹಾದು ಹೋಗುತ್ತಿರುವಂಥ ಅನುಭವವನ್ನು ಈ ಫಾರೆಸ್ಟ್ ಡೂಮ್‌ನಿಂದ ಖಂಡಿತ ಪಡೆಯಬಹುದು. ಪ್ರಾಣಿಗಳನ್ನು, ಕೀಟಗಳನ್ನು ಹಿಡಿದು ತಿನ್ನುವ ಪಿಚ್ಚರ್ ಪ್ಲಾಂಟ್, ವೀನಸ್ ಫ್ಲೈ ಟ್ರ್ಯಾಪ್ ಮುಂತಾದ ಅಪರೂಪದ ಪ್ರಾಣಿ ಭಕ್ಷಕ ಗಿಡಗಳ ಸಂಗ್ರಹ ಇಲ್ಲಿವೆ. ಈ ಸಸ್ಯರಾಶಿಯ ಮಧ್ಯೆ ನಮ್ಮ ಕಣ್ಣಿಗೆ ಬಿದ್ದಿದ್ದು ಕರ್ನಾಟಕ ಮೂಲದ 'ಮೈಸೂರು ವೈನ್' ಎಂಬ ಬಳ್ಳಿ!

ಇಲ್ಲಿರುವ ಪ್ರತಿಯೊಂದು ಗಿಡ ಬಳ್ಳಿಗಳ ವೈಜ್ಞಾನಿಕ ವಿವರಗಳನ್ನು ಅಚ್ಚುಕಟ್ಟಾಗಿ ನೀಡಲಾಗಿದೆ. ಜಲಧಾರೆಯ ನೆತ್ತಿಯವರೆಗೂ ಹೋಗಿ ಸುತ್ತುವರಿದಿರುವ ಹಸಿರನ್ನು ಕಣ್ತುಂಬಿಕೊಂಡು ಕೆಳಗೆ ಬರುವುದು ನಿಜಕ್ಕೂ ವಿಶೇಷ ಅನುಭವ. ಹಾಗೆಯೇ ಇದರ ಪಕ್ಕದಲ್ಲಿರುವ ಹೂಗಳ ಗೋಳ 'ಫ್ಲವರ್ ಡೋಮ್' ನಲ್ಲಿ ಪ್ರಪಂಚದ ಸಾವಿರಾರು ಬಗೆಯ ಹೂಗಳ ವರ್ಣಮಯ ಸುಂದರ ಲೋಕವನ್ನು ಸೃಷ್ಟಿ ಮಾಡಲಾಗಿದೆ. ಮೂರು ತಿಂಗಳಿಗೊಮ್ಮೆ ಒಂದು ಹೂವಿಗೆ ಪ್ರಾಧಾನ್ಯತೆ ಕೊಟ್ಟು ಅದರ ವಿಶೇಷ ಪ್ರದರ್ಶನವಿರುತ್ತದೆ. ನಾವು ಭೇಟಿ ನೀಡಿದಾಗ ಟ್ಯುಲಿಪ್ ಪ್ರದರ್ಶನ ಇತ್ತು.

ಏನೇನೂ ಇರದೆ ನಿದ್ರಿಸುತ್ತಿದ್ದ ಪುಟ್ಟ ಮೀನುಗಾರಿಕಾ ದ್ವೀಪವೊಂದರಲ್ಲಿ ಎಲ್ಲವನ್ನೂ ಸೃಷ್ಟಿಸಿ ಆಧುನಿಕತೆ, ಐಷಾರಾಮಿಗಳ ಜೊತೆ ಜೊತೆಗೇ ಪ್ರಪಂಚದ ಉಳಿವಿಗೆ ಅತ್ಯಂತ ಅಗತ್ಯವಾದ ಹಸಿರನ್ನು ರೂಪಿಸಿರುವುದು ಸಿಂಗಪುರವನ್ನು ಸೊಗಸಾಗಿಸಿದೆ.

ದೇಶಪ್ರೇಮವೆಂದರೆ ಹಸಿರು ಪ್ರೇಮ ಹಾಗೂ ಸ್ವಚ್ಛತೆಯ ಕಾಳಜಿಯೂ ಕೂಡ ಎಂದು ಸಾರಿ ಹೇಳುತ್ತಿರುವ ಸಿಂಗಪುರ ಪ್ರಪಂಚಕ್ಕೇ ಅನನ್ಯ ಮಾದರಿ. ❖

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ




ಕ್ಲಿಕ್.. ಕಟ್!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗುಂಡ ಹೂಕುಂಡದಲ್ಲಿ ಬೆಳೆದಿದ್ದ ದಾಸವಾಳ ಹೂವಿನ ಫೋಟೊ ತೆಗೆಯಲು ಕ್ಯಾಮೆರಾ ತೆಗೆದುಕೊಂಡು ಬಂದು. ಬಹಳ ಹತ್ತಿರದಿಂದ ಫೋಟೊ ತೆಗೆಯಲು ಗುಂಡ ಪ್ರಯತ್ನಿಸಿದ. ಒಂದು ಹೆಜ್ಜೆ ಮುಂದಿಟ್ಟು ಫೋಟೊ ಕ್ಲಿಕ್ಕಿಸಿದ. ಕ್ಯಾಮೆರಾ ಫ್ಲ್ಯಾಶ್‌ನ ಶಾಖಕ್ಕೆ ಹೂವು ಉದುರಿ ನೆಲಕ್ಕೆ ಬಿತ್ತು. ಇದನ್ನು ಕಂಡು ಗುಂಡ ಅವಾಕ್ಕಾದ.



ಅಕ್ಷರ ಆಟ

ಇಲ್ಲಿರುವ ಮೂರು ಅಕ್ಷರ ಪದಕ್ಕೆ ಒಂದಕ್ಷರ ಸೇರಿಸಿ ನಾಲ್ಕಕ್ಷರದ ಪದ ಮಾಡಿ

1	ಕನ್ನಡ__
2	ಚಾಮರ__
3	ಕರಗ__
4	ಸಮರ__
5	ಕರಟ__
6	ಕರಣಿ__
7	ಕಟಕ__
8	ತಿರುಗು__

ಇದೇನಿದು 'E'ಲ್ಲದ ವಿಷಯ!


ENGLISH

ಮೋ G ನ

Study this paragraph and all things in it. What is vitally wrong with it? Actually, nothing in its is wrong, but you must admit that it is most unusual. Don't Just zip through it quickly, but study it scrupulously. With luck you should spot what is so particular about it and all words found in it. Can you say what it is ? Tax your brains and try again. Don't miss a word or a symbol. It is not all that difficult.


ಏನೆಂದು ತಿಳಿಯಿತೇ?: ಇಲ್ಲಿ ಕೊಟ್ಟಿರುವ ವಾಕ್ಯಗುಚ್ಛದಲ್ಲಿ 'E' ಇಲ್ಲ. ಮತ್ತೊಮ್ಮೆ ಓದಿ ಪರೀಕ್ಷಿಸಿ. ನೆನಪಿರಲಿ ಇಂಗ್ಲಿಷ್‌ನಲ್ಲಿ ಅತಿಹೆಚ್ಚು ಬಳಕೆಯಾಗುವುದು 'E' ಅಕ್ಷರ.

ಗಣಿತದಲ್ಲಿ ಗರ್ದಿ ಗಮ್ಮತ್ತು



ಅಂಕಾಧಿಪತಿ

ಅಂಕಿಗಳಲ್ಲೇ ಮೂಡಿದ ರಾಜನನ್ನು ನೋಡಿ...



ವರ್ಡ್ ಗೇಮ್

ಒಂದರಿಂದ ಹನ್ನೆರಡರವರೆಗಿನ ಮೂರು ಸಂಖ್ಯೆಗಳು ಕನ್ನಡದಲ್ಲಿ ಕ್ರಿಯಾಪದಗಳಾಗುತ್ತವೆ. ಅವು ಯಾವುವು?



ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1. ಪುಸ್ತಕ-ಮಸ್ತಕ 2. ಅಪಾರ-ವ್ಯಾಪಾರ 3. ಇಂಧನ-ಬಂಧನ 4. ಚಿನ್ಮಯ-ತನ್ಮಯ 5. ಚಿಣ್ಣಾಟ-ಮಣ್ಣಾಟ 6. ಸಂಕುಲ-ವ್ಯಾಕುಲ

ಒತ್ತಕ್ಷರ ಆಟ: 1.ಗಮ್ಮತ್ತು 2.ಪಲ್ಲಟ 3.ಗಜ್ಜರಿ 4.ಉದ್ದರಿ 5.ಸಮ್ಮತಿ 6.ಅಚ್ಚರಿ 7.ಅಕ್ಕರೆ 8.ಒಗ್ಗಟ್ಟು 9.ಒಪ್ಪತ್ತು 10.ಕತ್ತರಿ

ಐದು ಒಗಟುಗಳು: 1.ಹೇನು 2.ಇದ್ದಿಲು 3.ಲವಂಗ 4.ನಾಲಿಗೆ 5.ಕಣ್ಣುಗಳು

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in



ಪ್ರಾಸಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ

ಮ	ತ	ಇ	ದ
ಇಂ	ಹೊ	ಚ	ಧಿ
ನ	ಹಂ	ಕು	ಭ

1			2			3			4			5			6		
	ವ	ಸ		ಕ್ಕ	ಳು		ಕ್ಕ	ಡಿ		ಗಿ	ಸು		ವ	ಣೆ		ತ್ತಿ	ಗೆ
	ವ	ಸ		ಕ್ಕ	ಳು		ಕ್ಕ	ಡಿ		ಗಿ	ಸು		ವ	ಣೆ		ತ್ತಿ	ಗೆ


ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಚಿರಂತನ ಆರ್. ದಾವಣಗೆರೆ




ಸ್ಮೃತಿ ಎಸ್. ವಿಜಯಪುರ




ಶಶಿಧರ್ ಎನ್. ಗಬ್ಬೂರು



ನಿತ್ಯತ ಎಸ್.ಎಂ. ಮೈಸೂರು



ಕೃಷ್ಣಪ್ಪ ಎನ್. ಗಬ್ಬೂರು



ಸಾಕ್ಷಿ ಡಿ. ಮೂಡಬಿದಿರೆ

ಎರಡನೇ ದಿನದಾಟದಲ್ಲಿಯೂ ಆತಿಥೇಯರ ಪಾರಮ್ಯ; ಸ್ನೇಹಾಗೆ ಮೂರು ವಿಕೆಟ್

ವಿಶ್ವದಾಖಲೆ ಮೊತ್ತ ಪೇರಿಸಿದ ಭಾರತ





ಚೆನ್ನೈನಲ್ಲಿ ನಡೆಯುತ್ತಿರುವ ಮಹಿಳಾ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಭಾರತದ ಬ್ಯಾಟರ್ ರಿಚಾ ಘೋಷ್ ಆಟದ ವೈಖರಿ (ಎಡಚಿತ್ರ). ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ –ಪಿಟಿಐ ಚಿತ್ರಗಳು

ಚೆನ್ನೈ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡವು ಮಹಿಳಾ ಟೆಸ್ಟ್ ಕ್ರಿಕೆಟ್ ಇತಿಹಾಸ ದಲ್ಲಿಯೇ ಅತಿ ದೊಡ್ಡ ಮೊತ್ತ ಗಳಿಸಿದ ದಾಖಲೆಯನ್ನು ಬರೆಯಿತು. ಚೆಪಾಕ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದಕ್ಷಿಣ ಆಫ್ರಿಕಾ ಎದುರಿನ ಏಕೈಕ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ 115.1 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 603 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು.

ಹೋದ ಫೆಬ್ರುವರಿಯಲ್ಲಿ ಪರ್ತ್‌ನಲ್ಲಿ ನಡೆದಿದ್ದ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು ದಕ್ಷಿಣ ಆಫ್ರಿಕಾ ಎದುರು 9 ವಿಕೆಟ್‌ಗಳಿಗೆ 575 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತ್ತು. ಆ ದಾಖಲೆಯನ್ನು ಭಾರತ ತಂಡವು ಮೀರಿ ನಿಂತಿತು. ಮೊದಲ ಇನಿಂಗ್ಸ್ ಬ್ಯಾಟಿಂಗ್ ಆರಂಭಿಸಿರುವ ಪ್ರವಾಸಿ ಬಳಗವು ಎರಡನೇ ದಿನದಾಟದ ಕೊನೆಗೆ 72 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 236 ರನ್ ಗಳಿಸಿತು. ಮರಿಜಾನ್ ಕಾಪ್ (ಬ್ಯಾಟಿಂಗ್ 69) ಮತ್ತು ನದೈನ್ ಡಿ ಕ್ಲರ್ಕ್ (ಬ್ಯಾಟಿಂಗ್ 27) ತಂಡಕ್ಕೆ ಆಸರೆಯಾಗಿದ್ದಾರೆ.

ಪಂದ್ಯದ ಮೊದಲ ದಿನವಾದ ಶುಕ್ರವಾರ ಟಾಸ್ ಗೆದ್ದ ಆತಿಥೇಯ ತಂಡವು ಶಫಾಲಿ ವರ್ಮಾ (205 ರನ್) ಮತ್ತು ಸ್ಮೃತಿ ಮಂದಾನ (149 ರನ್) ಅವರ ಭರ್ಜರಿ ಬ್ಯಾಟಿಂಗ್ ಬಲದಿಂದ ಒಂದೇ ದಿನ 4 ವಿಕೆಟ್‌ಗೆ 525 ರನ್ ಪೇರಿಸಿತ್ತು. ಶನಿವಾರ ಆಟ ಮುಂದುವರಿಸಿದ ಹರ್ಮನ್‌ಪ್ರೀತ್ ಕೌರ್ ಮತ್ತು ರಿಚಾ ಘೋಷ್ ಅವರೂ ಅರ್ಧಶತಕಗಳನ್ನು ಹೊಡೆದು ತಂಡದ ಮೊತ್ತವು ಹೆಚ್ಚಲು ಕಾರಣರಾದರು.

ರಿಚಾ ತಮ್ಮ ವೈಯಕ್ತಿಕ ಶ್ರೇಷ್ಠ (86; 90ಎ, 4X18) ಸ್ಕೋರ್ ದಾಖಲಿಸಿದರು. ಕೌರ್ ಮತ್ತು ಘೋಷ್ ಅವರು ಐದನೇ ವಿಕೆಟ್ ಜೊತೆಯಾಟದಲ್ಲಿ 143 ರನ್ ಸೇರಿಸಿದರು. ಟುಮಿ ಸೆಕುಕುನೆ ಎಸೆತದಲ್ಲಿ ಹರ್ಮನ್‌ಪ್ರೀತ್ ಎಲ್‌ಬಿಡಬ್ಲ್ಯು ಆಗುವುದರೊಂದಿಗೆ ಜೊತೆಯಾಟ ಮುರಿಯಿತು.

ತಂಡದ ಮೊತ್ತ 600ರ ಗಡಿ ದಾಟಿದ ನಂತರ ರಿಚಾ ಘೋಷ್ ಅವರು ಮ್ಲಾಬಾ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಅದರೊಂದಿಗೆ ಭಾರತ ತಂಡವು ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು.

ಪ್ರವಾಸಿ ತಂಡಕ್ಕೆ ಲೌರಾ ವೊಲ್ವಾರ್ಟ್ (20 ರನ್) ಮತ್ತು ಅನೆಕಿ ಬಾಷ್ (39 ರನ್) ಉತ್ತಮ ಆರಂಭ ನೀಡುವ ಪ್ರಯತ್ನ ಮಾಡಿದರು. ಆದರೆ ತಂಡದ ಮೊತ್ತವು ನೂರರ ಗಡಿ ದಾಟುವ ಮುನ್ನವೇ ಈ ಇಬ್ಬರೂ ಬ್ಯಾಟರ್‌ಗಳ ವಿಕೆಟ್ ಗಳಿಸಿ ಸ್ನೇಹಾ ರಾಣಾ ಸಂಭ್ರಮಿಸಿದರು. ಈ ಹಂತದಲ್ಲಿ ಸುನೆ ಲೂಸ್ (65; 164ಎ, 4X6, 6X1) ಮತ್ತು ಕಾಪ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 93 ರನ್ ಸೇರಿಸಿದರು.

ಚಹಾ ವಿರಾಮದ ನಂತರ ಲೂಸ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ದೀಪ್ತಿ ಶರ್ಮಾ ಜೊತೆಯಾಟ ಮುರಿದರು. ದಿಯಾಮಿ ಟಕರ್ ಅವರು ಖಾತೆ ತೆರೆಯಲು ಸ್ನೇಹಾ ಬಿಡಲಿಲ್ಲ. ನಂತರ ಕಾಪ್ ಮತ್ತು ಕ್ಲರ್ಕ್ ಅವರು ಎಚ್ಚರಿಕೆಯಿಂದ ಬ್ಯಾಟಿಂಗ್ ಮಾಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ: 115.1 ಓವರ್‌ಗಳಲ್ಲಿ 6ಕ್ಕೆ603 ಡಿಕ್ಲೇರ್ಡ್ (ಹರ್ಮನ್‌ಪ್ರೀತ್ ಕೌರ್ 69, ರಿಚಾ ಘೋಷ್ 86, ದಿಯಾಮಿ ಟಕರ್ 141ಕ್ಕೆ2) ದಕ್ಷಿಣ ಆಫ್ರಿಕಾ: 72 ಓವರ್‌ಗಳಲ್ಲಿ 4ಕ್ಕೆ236 (ಲೌರಾ ವೊಲ್ವಾರ್ಟ್ 20, ಅನೆಕಿ ಬಾಷ್ 39, ಸುನೆ ಲೂಸ್ 65, ಮರಿಜಾನ್ ಕಾಪ್ ಬ್ಯಾಟಿಂಗ್ 69, ನದೈನ್ ಡಿ ಕ್ಲರ್ಕ್ ಬ್ಯಾಟಿಂಗ್ 27, ಸ್ನೇಹಾ ರಾಣಾ 61ಕ್ಕೆ3, ದೀಪ್ತಿ ಶರ್ಮಾ 40ಕ್ಕೆ1)

ಮಹಿಳಾ ಟೆಸ್ಟ್: ಅತಿ ಹೆಚ್ಚು ಮೊತ್ತದ ದಾಖಲೆ (ಇನಿಂಗ್ಸ್)

ತಂಡ	ಸ್ಕೋರ್	ಓವರ್	ಎದುರಾಳಿ	ಸ್ಥಳ	ವರ್ಷ
ಭಾರತ	6ಕ್ಕೆ603	115.1	ದ.ಆಫ್ರಿಕಾ	ಚೆನ್ನೈ	ಜೂನ್ 2024
ಆಸ್ಟ್ರೇಲಿಯಾ	9ಕ್ಕೆ575	125.2	ದ.ಆಫ್ರಿಕಾ	ಪರ್ತ್	ಫೆಬ್ರುವರಿ 2024
ಆಸ್ಟ್ರೇಲಿಯಾ	6ಕ್ಕೆ569	180	ಇಂಗ್ಲೆಂಡ್	ಗಿಲ್ಡ್‌ಫೋರ್ಡ್	ಆಗಸ್ಟ್ 1998

* ಮೇಲಿನ ಎಲ್ಲ ಇನಿಂಗ್ಸ್‌ಗಳೂ ಡಿಕ್ಲೇರ್ ಆಗಿವೆ

80
ಟೆಸ್ಟ್ ಕ್ರಿಕೆಟ್ ಇನಿಂಗ್ಸ್‌ವೊಂದರಲ್ಲಿ ಅತಿ ಹೆಚ್ಚು ಬೌಂಡರಿ ಗಳಿಸಿದ ಭಾರತ ಮಹಿಳಾ ತಂಡ. ಹೋದ ಫೆಬ್ರುವರಿಯಲ್ಲಿ ಪರ್ತ್ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ಇನಿಂಗ್ಸ್‌ನಲ್ಲಿ 78 ಬೌಂಡರಿ ಗಳಿಸಿತ್ತು

143 ರನ್
ಹರ್ಮನ್‌ಪ್ರೀತ್ ಕೌರ್ ಮತ್ತು ರಿಚಾ ಘೋಷ್ ಅವರು ಐದನೇ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ ರನ್‌ಗಳು, ಟೆಸ್ಟ್ ಕ್ರಿಕೆಟ್‌ನಲ್ಲಿಯೇ ಐದನೇ ವಿಕೆಟ್‌ಗೆ ಇದು ಗರಿಷ್ಠ ಮೊತ್ತವಾಗಿದೆ. 2003ರಲ್ಲಿ ದಕ್ಷಿಣ ಆಫ್ರಿಕಾದ ಜೊಮಾರಿ ಲಾಗ್ಟೆನ್‌ಬರ್ಗ್ ಮತ್ತು ಚಾರ್ಲ್ಸ್ ವ್ಯಾನ್ ಡೆರ್ ವೆಸ್ತುಝೆನ್ 138 ರನ್ ಸೇರಿಸಿದ್ದರು.

ಮಹಿಳಾ ಹಾಕಿ ಶಿಬಿರಕ್ಕೆ 33 ಸಂಭವನೀಯರು

ಬೆಂಗಳೂರು (ಪಿಟಿಐ): ಸಾಯ್ ಕೇಂದ್ರದಲ್ಲಿ ಸೋಮವಾರ ಆರಂಭವಾಗಲಿರುವ ಎರಡು ತಿಂಗಳ ತರಬೇತಿ ಶಿಬಿರಕ್ಕಾಗಿ ಹಾಕಿ ಇಂಡಿಯಾ 33 ಆಟಗಾರ್ತಿಯರ ಸಂಭವನೀಯ ಪಟ್ಟಿಯನ್ನು ಶನಿವಾರ ಪ್ರಕಟಿಸಿದೆ.

ಲಂಡನ್ ಮತ್ತು ಆ್ಯಂಟ್‌ವರ್ಪ್‌ನಲ್ಲಿ ನಡೆದ ಎಫ್‌ಐಎಚ್ ಹಾಕಿ ಪ್ರೊ ಲೀಗ್ ಋತುವಿನಲ್ಲಿ ತನ್ನ ಎಲ್ಲಾ ಪಂದ್ಯಗಳಲ್ಲಿ ಭಾರತ ಸೋಲು ಅನುಭವಿಸಿತ್ತು. ಆಗಸ್ಟ್ 31ರಂದು ಶಿಬಿರ ಅಂತ್ಯವಾಗಲಿದೆ.

‘ನಾವು ಇತ್ತೀಚೆಗೆ ಕೈಗೊಂಡಿದ್ದ ಲಂಡನ್ ಮತ್ತು ಆ್ಯಂಟ್‌ವರ್ಪ್ ಪ್ರವಾಸದಲ್ಲಿ ಫಲಿತಾಂಶಗಳು ನಮ್ಮ ಪರವಾಗಿರಲಿಲ್ಲ. ಆದರೂ ನಾವು ತಂಡವಾಗಿ ಸಾಕಷ್ಟು ಕಲಿತಿದ್ದೇವೆ’ ಎಂದು ಮುಖ್ಯ ಕೋಚ್ ಹರೇಂದ್ರ ಸಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಂಡ ಹೀಗಿದೆ: ಗೋಲ್ ಕೀಪರ್ಸ್: ಸವಿತಾ ಪೂನಿಯಾ, ಬಿಚುದೇವಿ ಕರಿಬಮ್, ಬನ್ಸಾರಿ ಸೋಲಂಕಿ, ಮಾಧುರಿ ಡಿಕೊ. **ಡಿಫೆಂಡರ್ಸ್:** ನಿಕ್ಕಿ ಪ್ರಧಾನ್, ಉದಿತಾ, ಇಶಿಕಾ ಚೌಧರಿ, ಮೋನಿಕಾ, ರೋಪ್ನಿ ಕುಮಾರಿ, ಮಹಿಮಾ ಚೌಧರಿ, ಜ್ಯೋತಿ ಚೆಟ್ರಿ , ಪ್ರೀತಿ. **ಮಿಡ್‌ಫೀಲ್ಡರ್ಸ್:** ಸಲೀಮಾ ಟೇಟೆ, ಮರೀನಾ ಲಾಲ್ರಂಗಿ, ವೈಷ್ಣವಿ ವಿಠ್ಠಲ್ ಫಾಲ್ಕೆ, ನೇಹಾ, ಜ್ಯೋತಿ, ಎಡುಲಾ ಜ್ಯೋತಿ, ಬಲಜೀತ್ ಕೌರ್, ಮನಿಷಾ ಚೌಹಾನ್, ಅಕ್ಷತಾ ಅಬ್ಲೋ ಧೇಕಳೆ, ಅಜ್ಮಿನಾ ಕುಜುರ್. **ಫಾರ್ವರ್ಡ್ಸ್:** ಸುನೆಲಿಟಾ ಟೊಪ್ಪೊ, ಮುಮ್ತಾಜ್ ಖಾನ್, ಲಾಲ್‌ರೆಮ್ಸಿಯಾನಿ, ಸಂಗೀತಾ ಕುಮಾರಿ, ದೀಪಿಕಾ, ಶರ್ಮಿಳಾ ದೇವಿ, ನವನೀತ್ ಕೌರ್, ದೀಪಿಕಾ ಸೊರೆಂಗ್, ಪ್ರೀತಿ ದುಬೆ, ವಂದನಾ ಕಟಾರಿಯಾ, ರುತುಜಾ ದಾದಾಸೊ ಪಿಸಾಳ್.

ಅಥ್ಲೆಟಿಕ್ಸ್: ವಿವೇಕಾನಂದ ಕಾಲೇಜು ಚಾಂಪಿಯನ್ಸ್

ಮೈಸೂರು: ಪುತ್ತೂರಿನ ವಿವೇಕಾನಂದ ಎಂಜಿನಿಯರಿಂಗ್ ಕಾಲೇಜು ತಂಡವು ಶನಿವಾರ ಇಲ್ಲಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮುಕ್ತಾಯಗೊಂಡ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳ ರಾಜ್ಯ ಮಟ್ಟದ 25ನೇ ಅಥ್ಲೆಟಿಕ್ ಕೂಟದಲ್ಲಿ ಸಮಗ್ರ ಪ್ರಶಸ್ತಿ ತನ್ನದಾಗಿಸಿಕೊಂಡಿತು.

ಪುರುಷರ ವಿಭಾಗದಲ್ಲಿ ವಿವೇಕಾನಂದ ಕಾಲೇಜು ತಂಡ ಪ್ರಥಮ, ಮಂಗಳೂರಿನ ಶ್ರೀನಿವಾಸ ಎಂಜಿನಿಯರಿಂಗ್ ಕಾಲೇಜು ದ್ವಿತೀಯ ಹಾಗೂ ತುಮಕೂರಿನ ಸಿದ್ದಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತೃತೀಯ ಸ್ಥಾನ ಪಡೆದವು. ಸಿದ್ಧಗಂಗಾ ಕಾಲೇಜಿನ ಕೃಷಿಕ್ ಉತ್ತಮ ಅಥ್ಲೀಟ್ ಗೌರವ ತಮ್ಮದಾಗಿಸಿಕೊಂಡರು.

ಮಹಿಳೆಯರ ವಿಭಾಗದಲ್ಲಿ ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಪ್ರಥಮ, ವಿವೇಕಾನಂದ ಕಾಲೇಜು ದ್ವಿತೀಯ ಹಾಗೂ ಶ್ರೀನಿವಾಸ ಎಂಜಿನಿಯರಿಂಗ್ ಕಾಲೇಜು ತೃತೀಯ ಸ್ಥಾನ ಪಡೆದವು. ಶ್ರೀನಿವಾಸ ಕಾಲೇಜಿನ ಎಂ.ಎಸ್. ಚೈತನ್ಯಾ ಉತ್ತಮ ಮಹಿಳಾ ಅಥ್ಲೀಟ್ ಪ್ರಶಸ್ತಿ ಪಡೆದರು.

ಬ್ಯಾಡ್ಮಿಂಟನ್: ಕ್ವಾರ್ಟರ್‌ಗೆ ಭಾರತ

ಯೋಗ್ಯಕರ್ತ, ಇಂಡೊನೇಷ್ಯಾ (ಪಿಟಿಐ): ಭಾರತ ತಂಡವು ಇಲ್ಲಿ ನಡೆಯುತ್ತಿರುವ ಬ್ಯಾಡ್ಮಿಂಟನ್ ಏಷ್ಯಾ ಜೂನಿಯರ್ ಮಿಶ್ರ ಟೀಂ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

‘ಸಿ’ ಗುಂಪಿನಲ್ಲಿರುವ ಭಾರತ ತಂಡವು ಶನಿವಾರ ನಡೆದ ಪಂದ್ಯದಲ್ಲಿ ಫಿಲಿಪೀನ್ಸ್ ತಂಡವನ್ನು 3–2ರಿಂದ ಮಣಿಸಿತು. ಮೊದಲ ಪಂದ್ಯದಲ್ಲಿ ವಿಯೆಟ್ನಾಂ ವಿರುದ್ಧ 5–0ಯಿಂದ ಸುಲಭ ಗೆಲುವು ಸಾಧಿಸಿತ್ತು.

ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಭಾರತವು ಭಾನುವಾರ ಆತಿಥೇಯ ಇಂಡೊನೇಷ್ಯಾ ತಂಡವನ್ನು ಎದುರಿಸಲಿದೆ.

ಸೆಮಿಫೈನಲ್‌ಗೆ ಮಾಳವಿಕಾ ಲಗ್ಗೆ

ಫೋರ್ಟ್ ವರ್ತ್ (ಅಮೆರಿಕ) (ಪಿಟಿಐ): ಭಾರತದ ಮಾಳವಿಕಾ ಬನ್ಸೋಡ್ ಅವರು ಸ್ಕಾಟ್ಲೆಂಡ್‌ನ ಕ್ರಿಸ್ಟಿ ಗಿಲ್ಮೊರ್ ಅವರನ್ನು ಮಣಿಸಿ ಅಮೆರಿಕ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಏಳನೇ ಶ್ರೇಯಾಂಕದ ನಾಗ್ಪುರ 22 ವರ್ಷದ ಮಾಳವಿಕಾ 10–21, 21–15, 21–10 ಅಂತರದಲ್ಲಿ 2014ರ ಕಾಮನ್‌ವೆಲ್ತ್ ಗೇಮ್ಸ್ ಬೆಳ್ಳಿ ಪದಕ ವಿಜೇತೆ, ಮೂರನೇ ಶ್ರೇಯಾಂಕದ ಕ್ರಿಸ್ಟಿ ಅವರನ್ನು ಸೋಲಿಸಿದರು. ಮುಂದಿನ ಸುತ್ತಿನಲ್ಲಿ ಆರನೇ ಶ್ರೇಯಾಂಕದ ಜಪಾನಿನ ನಟ್ಸುಕಿ ನಿಡೈರಾ ಅವರನ್ನು ಎದುರಿಸಲಿದ್ದಾರೆ. 2022ರಲ್ಲಿ ನಡೆದ ಹೈಲೊ ಓಪನ್‌ನಲ್ಲಿ ಕ್ರಿಸ್ಟಿ ಅವರನ್ನು ಮಾಳವಿಕಾ ಸೋಲಿಸಿದ್ದರು. ಆದರೆ, ಈ ಹಿಂದೆ ಕ್ರಿಸ್ಟಿ ವಿರುದ್ಧ ಎರಡು ಬಾರಿ ಅವರು ಸೋತಿದ್ದರು.

ಪುರುಷರ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್‌ನಲ್ಲಿ ಪ್ರಿಯಾಂಶು ರಾಜಾವತ್ ಹೋರಾಟ ತೋರಿದರೂ ಅಂತಿಮವಾಗಿ 21-15, 11-21, 18-21 ರಿಂದ ನಾಲ್ಕನೇ ಶ್ರೇಯಾಂಕದ ಲೀ ಲಾನ್ ಷಿ(ಚೀನಾ) ಅವರಿಗೆ ಸೋತರು.

ಎರಡನೇ ಶ್ರೇಯಾಂಕದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ 17–21, 21–17, 19–21ರಲ್ಲಿ ಆರನೇ ಶ್ರೇಯಾಂಕದ ಜಪಾನಿನ ರುಯಿ ಹಿರೊಕಮಿ ಮತ್ತು ಯುನಾ ಕಟೊ ಜೋಡಿ ವಿರುದ್ಧ ಸೋತರು. ಮೊದಲ ಸುತ್ತಿನಲ್ಲಿ ಭಾರತದ ಜೋಡಿ ಬೈ ಪಡೆದಿತ್ತು.